24 March 2026 Tuesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ತಾಳ್ಮೆಯಿಂದಿರುವುದು ಎಲ್ಲರಿಂದಲೂ ಸಾಧ್ಯವಿಲ್ಲ!
ಆದರೆ ತಾಳ್ಮೆಯಿಂದ ಎಲ್ಲವೂ ಸಾಧ್ಯವಿದೆ!
-ಸ್ನೇಹಾ ಆನಂದ್

info.varthaman@gmail.com



ಹಳೆ ಮೀಸಲಾತಿ ಜಾರಿಗೆ ಒತ್ತಾಯಿಸಿ ಮೈಸೂರಿನಲ್ಲೂ ಹೋರಾಟ ಪುಟ ಸಂ. 2



ಒಳ ಮೀಸಲಾತಿ ವಿರೋಧಿಸಿ: ಮಾ.25ರಂದು ಬೃಹತ್ ರ್‍ಯಾಲಿ ಪುಟ ಸಂ. 3



ಕೈವಾರ ತಾತಯ್ಯ ಯೋಗಿ ನಾರೇಯಣ ಗುರು ನಾಡು ಕಂಡ ಶ್ರೇಷ್ಠ ಸಂತ ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 129 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

## ಜಾಹೀರಾತು ನೀತಿ 2026 ಕೈಬಿಡುವಂತೆ ಸಿಎಂಗೆ ಮನವಿ

**ಹೊಸ ಜಾಹೀರಾತು ನೀತಿಯನ್ನು ಸರಿಪಡಿಸುವ ಕೆಲಸ ಮಾಡುವೆ**

**ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಭರವಸೆ**



**ಬಾಗಲಕೋಟೆ:** 2026ರ ಜಾಹೀರಾತಿಯಲ್ಲಿನ ಮಾರಕವಾದ ನಿಯಮಗಳು ಕೈಬಿಡುವಂತೆ ಒತ್ತಾಯಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ ಹಾಗೂ ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ.ತಿಮ್ಮಾಪುರ ಅವರಿಗೆ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದಿಂದ ಸೋಮವಾರ ಮನವಿ ಸಲ್ಲಿಸಲಾಯಿತು.

ಹೆಲಿಪ್ಯಾಡ್ ಹತ್ತಿರ ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿ, ಜಾಹೀರಾತು ನೀತಿಯಲ್ಲಿ ಕಠಿಣ ನಿಯಮಗಳು ಹಾಕಲಾಗಿದೆ, ಇದರಿಂದ ಪತ್ರಿಕೆಗಳನ್ನು ಅರಬೆತ್ತಲೆ ಮಾಡುವ ಹುನ್ನಾರ ನಡೆದಿದೆ. ಆದ್ದರಿಂದ ತಾವುಗಳು ಮತ್ತೊಮ್ಮೆ ಕುಲಂಕುಶವಾಗಿ ಪರಿಶೀಲಿಸಿ ಪತ್ರಿಕೆಗಳಿಗೆ ಮಾರಕವಾದ ಜಾಹೀರಾತು ನೀತಿಯನ್ನು ಸರ್ಕಾರ ಕೈಬಿಟ್ಟು ಹಿಂದಿನ ಜಾಹೀರಾತು ನೀತಿಯನ್ನೆ ಮುಂದುವರೆಸಬೇಕು ಎಂದು ಒತ್ತಾಯಿಸಲಾಯಿತು.

ಇದಕ್ಕೆ ಸ್ಪಂದಿಸಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಹೊಸ ಜಾಹೀರಾತು ನೀತಿಯನ್ನು ಕೈಬಿಡಲು ಸಂಪಾದಕರ ಸಂಘದಿಂದ ಮನವಿ ನಿಡಲಾಗಿದ್ದು, ನಾನು ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳನ್ನು ಕರೆದು ಅದನ್ನು ಯಾವ ರಿತಿ ಸರಿಪಡಿಸಬೇಕು ಆ ರೀತಿಯಲ್ಲಿ ಸರಿಪಡಿಸುವ ಮೂಲಕ ಸಂಪಾದಕರಿಗೆ ಆಗುವ ತೊಂದರೆಗಳನ್ನು ಸರಿಪಡಿಸುವ ಕೆಲಸ ಮಾಡಲಾಗುತ್ತದೆ ಎಂದು ವಿಶ್ವಾಸ ನೀಡಿದರು.

# ‘ಯುದ್ಧ ಸವಾಲು’ ಎದುರಿಸಲು ಸಿದ್ಧ

## ದೇಶದ ಭದ್ರತೆಗೆ ಆದ್ಯತೆ: ಲೋಕಸಭೆಯಲ್ಲಿ ಪ್ರಧಾನಿ ಮೋದಿ ಘೋಷಣೆ

**ನವದೆಹಲಿ:** ಮಧ್ಯಪ್ರಾಚ್ಯ ಯುದ್ಧ ಸಂಘರ್ಷದಿಂದ ಭಾರತಕ್ಕೂ ಅಭೂತಪೂರ್ವ ಸವಾಲುಗಳು ಎದುರಾಗಿವೆ. ಅವುಗಳೆಲ್ಲವನ್ನೂ ಎದುರಿಸಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಘೋಷಿಸಿದರು.

ಲೋಕಸಭೆಯಲ್ಲಿ ಸೋಮವಾರ ಮಾತನಾಡಿದ ಪ್ರಧಾನಿ ಮೋದಿ, ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷವನ್ನು ಆತಂಕಕಾರಿ ಎಂದು ಕರೆದರು. ಜಾಗತಿಕವಾಗಿ ಸವಾಲು ಎದುರಾಗಿದೆ. ಎಲ್ಲಾ ಕಡೆಯವರು ಶಾಂತಿಯನ್ನು ಪುನಃಸ್ಥಾಪಿಸಬೇಕು ಎಂದು ಒತ್ತಿ ಹೇಳಿದರು.

ಇರಾನ್ ಯುದ್ಧದ ಕುರಿತು ಮೊದಲ ಬಾರಿಗೆ ಸಂಸತ್‌ನಲ್ಲಿ ಮಾತನಾಡಿದ ಅವರು, ಈ ಬಿಕ್ಕಟ್ಟು ಆರ್ಥಿಕ, ರಾಷ್ಟ್ರೀಯ ಭದ್ರತೆ ಮತ್ತು ಮಾನವೀಯ ಸವಾಲುಗಳನ್ನು ಒಡ್ಡಿದೆ. ಭಾರತವು ತನ್ನ ಎಲ್‌ಪಿಜಿಯ ಶೇ. 60ರಷ್ಟನ್ನು ಆಮದು ಮಾಡಿಕೊಳ್ಳುತ್ತದೆ. ದೇಶೀಯ ಪೂರೈಕೆಗೆ ಆದ್ಯತೆ ನೀಡಲು ಮತ್ತು ದೇಶಾದ್ಯಂತ ಸುಗಮ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಸಾರ್ವಜನಿಕರಿಗೆ ತೊಂದರೆಗಳನ್ನು ಕಡಿಮೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ ಎಂದು ಹೇಳಿದರು.

ಯುದ್ಧ ಪ್ರಾರಂಭವಾದಾಗಿನಿಂದ, ಹಾರ್ಮುಜ್ ಜಲಸಂಧಿಯ ಮೂಲಕ ಹಡಗುಗಳ ಪುಟ 2ಕ್ಕೆ



### ಕೋವಿಡ್ ಪರಿಸ್ಥಿತಿಯಂತೆ ಒಗ್ಗಟ್ಟಿನಿಂದ ಎದುರಿಸಬೇಕಿದೆ

ಯುದ್ಧ ಸಂಘರ್ಷದಿಂದ ಅನಿರೀಕ್ಷಿತ ಸವಾಲುಗಳನ್ನು ಎದುರಿಸಬೇಕಾಗಬಹುದು. ಕೋವಿಡ್ ಪರಿಸ್ಥಿತಿ ಎದುರಿಸಿದಂತೆ ಈ ಸಂಕಷ್ಟದ ಸಮಯದಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ ಇರಬೇಕು ಎಂದು ಪ್ರಧಾನಿ ಮೋದಿ ಕರೆ ನೀಡಿದರು.

ಪಶ್ಚಿಮ ಏಷ್ಯಾದಲ್ಲಿರುವ ಭಾರತೀಯರಿಗೆ ಅಗತ್ಯ ಸಹಾಯ ಮಾಡಲಾಗುತ್ತಿದೆ. ಸಂಘರ್ಷ ಪೀಡಿತ ಬಹುತೇಕ ರಾಷ್ಟಗಳ ಮುಖ್ಯಸ್ಥರೊಂದಿಗೆ ಎರಡು ಬಾರಿ ಮಾತುಕತೆ ನಡೆಸಿದ್ದೇನೆ. ಇರಾನ್‌ನಿಂದ ಸುಮಾರು 1,000 ಭಾರತೀಯರು ಸುರಕ್ಷಿತವಾಗಿ ತವರಿಗೆ ಮರಳಿದ್ದಾರೆ. ಇವರಲ್ಲಿ 700ಕ್ಕೂ ಹೆಚ್ಚು ವೈದ್ಯಕೀಯ ವಿದ್ಯಾರ್ಥಿಗಳೂ ಸೇರಿದ್ದಾರೆ. ಸಂಘರ್ಷ ಪೀಡಿತ ಪ್ರದೇಶಗಳಲ್ಲಿ ಸಿಲುಕಿಕೊಂಡಿರುವ ಪುಟ 2ಕ್ಕೆ

### ಶಾಂತಿ ಸ್ಥಾಪನೆಗೆ ಮನವಿ

ಭಾರತವು ಶಾಂತಿಗಾಗಿ ಎಲ್ಲಾ ಕಡೆಯವರಿಗೆ ಮನವಿ ಮಾಡುತ್ತದೆ. ಈ ಯುದ್ಧವು ಭಾರತಕ್ಕೆ ಅನಿರೀಕ್ಷಿತ ಸವಾಲುಗಳನ್ನು ಸೃಷ್ಟಿಸಿದೆ. ಯುದ್ಧದ ಆರಂಭದಿಂದಲೂ ಹಾರ್ಮುಜ್ ಜಲಸಂಧಿಯ ಮೂಲಕ ಸರಕು ಸಾಗಣೆ ಒಂದು ಸವಾಲಾಗಿದೆ. ಆದರೆ ಸರ್ಕಾರ ಅನಿಲ ಮತ್ತು ಇಂಧನ ಪೂರೈಕೆಗಳು ಕನಿಷ್ಠ ಪರಿಣಾಮ ಬೀರುವಂತೆ ನೋಡಿಕೊಳ್ಳುತ್ತಿದೆ ಎಂದು ಪ್ರಧಾನಿ ಮೋದಿ ತಿಳಿಸಿದರು. ಪಶ್ಚಿಮ ಏಷ್ಯಾದ ಪರಿಸ್ಥಿತಿ ಚಿಂತಾಜನಕವಾಗಿದೆ. ಈ ಸಂಘರ್ಷವು ಮೂರು ವಾರಗಳಿಗೂ ಹೆಚ್ಚು ಕಾಲ ಮುಂದುವರಿದಿದೆ. ಇದು ಜಾಗತಿಕ ಆರ್ಥಿಕತೆ ಮತ್ತು ಜನರ ಜೀವನದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಅದಕ್ಕಾಗಿಯೇ ಈ ಸಂಘರ್ಷಕ್ಕೆ ಆರಂಭಿಕ ಪರಿಹಾರಕ್ಕಾಗಿ ಜಗತ್ತು ಎಲ್ಲಾ ಕಡೆಯವರನ್ನು ಒತ್ತಾಯಿಸುತ್ತಿದೆ ಎಂದು ಮೋದಿ ತಿಳಿಸಿದರು.

## ಕಾಂಗ್ರೆಸ್‌ನಿಂದ ಮೇಟಿ, ಬಿಜೆಪಿಯ ಚರಂತಿಮಠ ನಾಮಪತ್ರ ಸಲ್ಲಿಕೆ



**ಬಾಗಲಕೋಟೆ:** ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆ ಕಣ ರಂಗೇರಿದ್ದು, ಸೋಮವಾರ ಕಾಂಗ್ರೆಸ್ ಅಭ್ಯರ್ಥಿಯಾಗಿ ಉಮೇಶ್ ಮೇಟಿ ಹಾಗೂ ಬಿಜೆಪಿ ಅಭ್ಯರ್ಥಿಯಾಗಿ ವೀರಣ್ಣ ಚರಂತಿಮಠ ಸೋಮವಾರ ಉಮೇದುವಾರಿಕೆ ಸಲ್ಲಿಸಿದ್ದಾರೆ.

ಉಮೇಶ್ ಮೇಟಿ ಅವರು ಜಿಲ್ಲಾ ಉಸ್ತುವಾರಿ ಸಚಿವ ಆರ್. ಬಿ. ತಿಮ್ಮಾಪುರ ಹಾಗೂ ಮಾಜಿ ಸಚಿವ ಅಜಯಕುಮಾರ್ ಸರನಾಯಕ ಉಪಸ್ಥಿತಿಯಲ್ಲಿ ತಮ್ಮ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆಗೂ ಮುನ್ನ ತಿಮ್ಮಾಪುರದಲ್ಲಿರುವ ತಮ್ಮ ತಂದೆ, ದಿ. ಎಚ್.ವೈ.ಮೇಟಿ ಸಮಾಧಿಗೆ ಪೂಜೆ ಸಲ್ಲಿಸಿದರು.

ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಹಾಗೂ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ಸೋಮವಾರ ನಾಮಪತ್ರ ಸಲ್ಲಿಸಿದ್ದಾರೆ. ಈ ಸಂದರ್ಭದಲ್ಲಿ ಸಂಸದರಾದ ಜಗದೀಶ್ ಶೆಟ್ಟರ್, ಪಿ.ಸಿ. ಗದ್ದಿಗೌಡರ, ಗೋವಿಂದ ಕಾರಜೋಳ, ರಾಜ್ಯಸಭೆ ಸದಸ್ಯ ನಾರಾಯಣ ಭಾಂಡಗೆ, ವಿಧಾನ ಪರಿಷತ್ ಸದಸ್ಯ ಪಿ.ಎಚ್. ಪೂಜಾರ್ ಮತ್ತು ಮಾಜಿ ಸಚಿವ ಮುರುಗೇಶ್ ನಿರಾಣಿ ಉಪಸ್ಥಿತರಿದ್ದರು.

ವೀರಣ್ಣ ಚರಂತಿಮಠ ಅವರು ಇದೇ ಕ್ಷೇತ್ರದಿಂದ 2004, 2008 ಹಾಗೂ 2018ರಲ್ಲಿ ಶಾಸಕರಾಗಿ ಆಯ್ಕೆಯಾಗಿದ್ದ ಹಿರಿಯ ನಾಯಕ. ನಾಮಪತ್ರ ಸಲ್ಲಿಕೆಯ ನಂತರ ನಗರದಲ್ಲಿ ಪಕ್ಷದ ವತಿಯಿಂದ ಬೃಹತ್ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. ಎರಡೂ ಪ್ರಮುಖ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು ಒಂದೇ ದಿನ ತಮ್ಮ ಉಮೇದುವಾರಿಕೆ ಸಲ್ಲಿಸಿದ್ದಾರೆ. ಬಾಗಲಕೋಟೆಯಲ್ಲಿ ಚುನಾವಣಾ ಕಣ ರಂಗೇರಿದೆ.

### ಬಿಜೆಪಿ ಅಭ್ಯರ್ಥಿ ನಾಮಪತ್ರ



ದಾವಣಗೆರೆ: ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣಾ ಕಣ ರಂಗೇರಿದೆ. ಬಿಜೆಪಿ ಅಭ್ಯರ್ಥಿ ಶ್ರೀನಿವಾಸ್ ದಾಸ್ ಕರಿಯಪ್ಪ ಸೋಮವಾರ ನಾಮಪತ್ರ ಸಲ್ಲಿಸಿದರು. ನಾಮಪತ್ರ ಸಲ್ಲಿಕೆ ನಂತರ ದುರ್ಗಾಂಬಿಕಾ ದೇವಸ್ಥಾನದಿಂದ ಅದ್ಧೂರಿ ಮೆರವಣಿಗೆ ಮಾಡಲಾಯಿತು. ಮಾಜಿ ಸಿಎಂ ಯಡಿಯೂರಪ್ಪ ಸೇರಿದಂತೆ ಹಲವು ನಾಯಕರು ಭಾಗಿಯಾಗಿದ್ದರು. ನಾಮಪತ್ರ ಸಲ್ಲಿಸಿ ಮಾತನಾಡಿದ ಬಿಜೆಪಿ ಅಭ್ಯರ್ಥಿ, ಈ ಸಲ ದಾವಣಗೆರೆ ದಕ್ಷಿಣ ಕ್ಷೇತ್ರದ ಬದಲಾವಣೆ ಖಚಿತ ಎಂದರು.

## ಬೆಂ–ಮೈ ಹೆದ್ದಾರಿಯಲ್ಲಿ ಭೀಕರ ಅಪಘಾತ: ನಾಲ್ವರು ಸಾವು

**ರಾಮನಗರ:** ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ ಸೋಮವಾರ ಬೆಳ್ಳಂಬೆಳಗ್ಗೆ ಡಿವೈಡರ್‌ಗೆ ಖಾಸಗಿ ಬಸ್ ಡಿಕ್ಕಿಯಾಗಿ ನಾಲ್ವರು ಪ್ರಯಾಣಿಕರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ.

ಕೇರಳ ಮೂಲದ ಪಿ.ಕೆ ಟ್ರಾವೆಲ್ಸ್ ಕಂಪನಿಗೆ ಸೇರಿದ ಬಸ್ ಕೇರಳದಿಂದ ಬೆಂಗಳೂರು ಕಡೆಗೆ ತೆರಳುತ್ತಿತ್ತು. ಈ ವೇಳೆ ಚನ್ನಪಟ್ಟಣ ತಾಲೂಕಿನ ಸಂಕಲಗೆರೆ ಗ್ರಾಮದ ಪುಟ್ಟಪ್ಪನದೊಡ್ಡಿ ಬಳಿ ಡಿವೈಡರ್‌ಗೆ ಬಸ್ ಡಿಕ್ಕಿಯಾಗಿದೆ. ಪರಿಣಾಮ ನಾಲ್ವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಹಲವು ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ.



ಚಾಲಕ ನಿದ್ದೆ ಮಂಪರಿನಲ್ಲಿ ಇದ್ದಿದ್ದರಿಂದ ಈ ಅಪಘಾತ ಸಂಭವಿಸಿದೆ ಎನ್ನಲಾಗಿದೆ. ಮೃತರ ಪೈಕಿ ಇಬ್ಬರು ಬೆಂಗಳೂರಿನವರು. ಮೃತರನ್ನು ಕೇರಳದ ಕಾಜಿಕೋಟೆಯ ಮೊಹಮ್ಮದ್ ಫರಾನ್ (22), ಸುಲ್ಫಿ (45), ಬೆಂಗಳೂರಿನ ಕಲಾಸಿಪಾಳ್ಯದ ನಿವಾಸಿ ರಶೀದ್ (45) ಹಾಗೂ ಆಡುಗೋಡಿಯ ಅಣ್ಣೆಪಾಳ್ಯ ನಿವಾಸಿ ಸಾಕೇರ್ ಎಂದು ಗುರುತಿಸಲಾಗಿದೆ. ಕೇರಳದ ಕಣ್ಣೂರಿನ ಅಬ್ದುಲ್, ಅಲೀನ್ ಎಂಬುವರಿಗೆ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ. ಚನ್ನಪಟ್ಟಣ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಪಘಾತ ನಡೆದಿದೆ.

### ಹೋಟೆಲ್ ಗಳಿಗೆ ಹೆಚ್ಚುವರಿ ಸಾವಿರ ಸಿಲಿಂಡರ್ ಪೂರೈಕೆ

**ಬೆಂಗಳೂರು:** ರಾಜ್ಯದಲ್ಲಿ ಹೋಟೆಲ್ ಮಾಲೀಕರಿಗೆ ಹೆಚ್ಚುವರಿಯಾಗಿ 1 ಸಾವಿರ ಕಮರ್ಷಿಯಲ್ ಸಿಲಿಂಡರ್ ಪೂರೈಕೆ ಮಾಡಲಾಗುವುದು ಎಂದು ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ಗ್ಯಾಸ್ ಕಂಪನಿಗಳು ಮತ್ತು ಹೋಟೆಲ್ ಸಂಘದ ಜೊತೆ ಸಚಿವ ಮುನಿಯಪ್ಪ ಸೋಮವಾರ ಸಭೆ ನಡೆಸಿ ಮಾತನಾಡಿದ ಅವರು, ರಾಜ್ಯದಲ್ಲಿ ಹೆಚ್ಚುವರಿಯಾಗಿ 1,000 ಸಿಲಿಂಡರ್ ಸೇರಿಸಿ ಒಟ್ಟು 10,000 ಸಿಲಿಂಡರ್ ಪೂರೈಕೆ ಆಗಲಿದೆ. ಕಮರ್ಷಿಯಲ್ ಗ್ಯಾಸ್ ಬಳಕೆದಾರರು ಕಡ್ಡಾಯವಾಗಿ ರಿಜಿಸ್ಟರ್ ಮಾಡಿಸಬೇಕು. ಗೇಲ್ ಕಂಪನಿಗೆ ಪುಟ 2ಕ್ಕೆ

### ಏ.1ರಿಂದ ಟೋಲ್ ದರ ಏರಿಕೆ

**ನವದೆಹಲಿ:** ರಾಷ್ಟ್ರೀಯ ಹೆದ್ದಾರಿಗಳ ಟೋಲ್ ದರ ಏ.1ರಿಂದ ಹೆಚ್ಚಳವಾಗಲಿದೆ. ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಟೋಲ್ ದರ ಪರಿಷ್ಕರಿಸಿದೆ. ಶೇ.4ರಿಂದ 5ರಷ್ಟು (75 ರೂ.) ಏರಿಕೆಯಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ದರ ಏರಿಕೆ ಕಾರು, ಬಸ್, ಲಾರಿ ಸೇರಿದಂತೆ ಎಲ್ಲಾ ವಾಹನಗಳಿಗೆ ಅನ್ವಯವಾಗಲಿದೆ. ಹೆದ್ದಾರಿಗಳ ನಿರ್ವಹಣೆ, ದುರಸ್ತಿ ಹಾಗೂ ಅಭಿವೃದ್ಧಿ ವೆಚ್ಚಗಳನ್ನು ಗಣನೆಗೆ ತೆಗೆದುಕೊಂಡು ಈ ಪರಿಷ್ಕರಣೆ ಮಾಡಲಾಗುತ್ತಿದೆ ಎಂದು ಎನ್‌ಹೆಚ್‌ಎಐ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕದಲ್ಲಿ ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ ಸೇರಿದಂತೆ 8 ಇತರ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಈ ಏರಿಕೆ ಪರಿಣಾಮ ಬೀರಲಿದೆ. ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇಯಲ್ಲಿ ಟೋಲ್ ಪುಟ 2ಕ್ಕೆ

### ಮೈಸೂರಿನಲ್ಲಿ 28, 29ರಂದು ಐಪಿಎಲ್ ‘ಫ್ಯಾನ್ ಪಾರ್ಕ್’

**ನವದೆಹಲಿ:** ಐಪಿಎಲ್ 2026ರ ಆವೃತ್ತಿ ಆರಂಭದಿಂದ ಮೊದಲ ಮೂರು ವಾರಾಂತ್ಯಗಳಲ್ಲಿ ನಡೆಯುವ ಫ್ಯಾನ್ ಪಾರ್ಕ್ ಈವೆಂಟ್ ವೇಳಾಪಟ್ಟಿಯನ್ನು ಬಿಸಿಸಿಐ ಪ್ರಕಟಿಸಿದೆ. ತುಮಕೂರು, ಮೈಸೂರು ಸೇರಿ ದೇಶದ 15 ನಗರಗಳಲ್ಲಿ ಫ್ಯಾನ್ ಪಾರ್ಕ್ ನಡೆಯಲಿದೆ.

ಮಾರ್ಚ್ 28 ಮತ್ತು 29ರಂದು ಕರ್ನಾಟಕದ ತುಮಕೂರಿನ ಸರ್ಕಾರಿ ಜೂನಿಯರ್ ಕಾಲೇಜು ಮೈದಾನ ಹಾಗೂ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಮೈದಾನದಲ್ಲಿ ನಡೆಯಲಿದೆ. ಐಪಿಎಲ್ ಅನುಭವ ನೀಡುವ ಉದ್ದೇಶದೊಂದಿಗೆ ಈ ಫ್ಯಾನ್ ಪಾರ್ಕ್ ನಡೆಯಲಿದೆ. ಲೈವ್ ಗೇಮಿಂಗ್, ಆಹಾರ ಮಳಿಗೆ, ಮಕ್ಕಳ ಆಟೋಟದ ಕೇಂದ್ರಗಳು ಇರಲಿವೆ.




ಫ್ಯಾನ್ ಪಾರ್ಕ್‌ನಲ್ಲಿ ವರ್ಚುವಲ್ ಕ್ರಿಕೆಟ್ ಪಂದ್ಯಗಳು, ಬೌಲಿಂಗ್ ನೆಟ್, ಸಂಗೀತ, ಮನರಂಜನೆ, ಆಹಾರ ಮಳಿಗೆ, ಮಕ್ಕಳಿಗೆ ಆಟೋಟದ ಕೇಂದ್ರಗಳು, ಫೇಸ್ ಪೇಂಟಿಂಗ್, 360 ಡಿಗ್ರಿ ಫೋಟೋ ಬೂತ್ ಸೇರಿದಂತೆ ವಿವಿಧ ಚಟುವಟಿಕೆಗಳು ಇರಲಿವೆ. ಪುಟ 2ಕ್ಕೆ

### ಸಮರ್ಥ್‌ಗೆ ಸಿಎಂ, ಡಿಸಿಎಂ ಸಾಥ್





**ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಸೋಮವಾರ ನಾಮಪತ್ರ ಸಲ್ಲಿಸಿ ದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಹಾಗೂ ತಂದೆ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ತಾಯಿ ಸಂಸದೆ ಪ್ರಭಾ ಮಲ್ಲಿಕಾ ರ್ಜುನ್ ಸಾಥ್ ನೀಡಿದರು. ದುರ್ಗಾಂಬಿಕ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಯಿತು. ಬಳಿಕ ದಾವಣಗೆರೆಗೆ ಒಂದೇ ಹೆಲಿಕಾಪ್ಟರ್‌ನಲ್ಲಿ ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ್ ಬಂದಿಳಿದರು. ಬಳಿಕ ಚುನಾವಣಾಧಿಕಾರಿಗಳ ಕಚೇರಿಗೆ ತೆರಳಿ ನಾಮಪತ್ರ ಸಲ್ಲಿಕೆ ಮಾಡಲಾಯಿತು.

ಬಳಿಕ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ಎಲ್ಲರನ್ನೂ ಒಳಗೊಂಡಿರುವ ಪಕ್ಷ ಪುಟ 2ಕ್ಕೆ

## ನಗರಕ್ಕೆ 25, ಗ್ರಾಮೀಣರಿಗೆ 45 ದಿನಕ್ಕೊಂದು ಸಿಲಿಂಡರ್

**ಬೆಂಗಳೂರು:** ರಾಜ್ಯದಲ್ಲಿ ಎಲ್‌ಪಿಜಿ ಕೊರತೆ ಹಿನ್ನೆಲೆಯಲ್ಲಿ ವಾಣಿಜ್ಯ ಬಳಕೆದಾರರು ತಮ್ಮ ಸಾಮಾನ್ಯ ಬಳಕೆಯ ಕೇವಲ ಶೇ.20ರಷ್ಟು ಗ್ಯಾಸ್‌ನಲ್ಲೇ ಕಾರ್ಯಾಚರಣೆ ನಡೆಸಬೇಕು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಸೂಚನೆ ನೀಡಿದರು.

ವಿಧಾನ ಪರಿಷತ್ತಿನಲ್ಲಿ ಸೋಮವಾರ ಪ್ರಶ್ನೋತ್ತರ ಅವಧಿಯಲ್ಲಿ ಉತ್ತರಿಸಿದ ಸಚಿವರು, ಈಗ ಪ್ರತಿದಿನ ಸುಮಾರು 16,000 ವಾಣಿಜ್ಯ ಸಿಲಿಂಡರ್‌ಗಳನ್ನು ಮಾತ್ರ ಸರಬರಾಜು ಮಾಡಲಾಗುತ್ತಿದೆ. ಹಿಂದೆ ದಿನಕ್ಕೆ ಸುಮಾರು 45,000 ಸಿಲಿಂಡರ್ ಬಳಕೆಯಾಗುತ್ತಿತ್ತು. ಆದ್ದರಿಂದ ಲಭ್ಯವಿರುವ ಸೀಮಿತ ಸಂಪನ್ಮೂಲಗಳನ್ನು ಆದ್ಯತೆಯ ಮೇರೆಗೆ ಹಂಚಿಕೆ ಮಾಡಲಾಗಿದೆ ಎಂದು ಹೇಳಿದರು.



ಇದು ಸಾಮಾನ್ಯ ಬಳಕೆಯ ಕೇವಲ ಶೇ.20ರಷ್ಟು ಮಾತ್ರವೇ ಆಗಿದೆ. ಹಿಂದೆ ವಾರಕ್ಕೆ ಐದು ಸಿಲಿಂಡರ್ ಬಳಸುತ್ತಿದ್ದ ಹೋಟೆಲ್‌ಗಳು ಈಗ ಒಂದು ಸಿಲಿಂಡರ್‌ನಲ್ಲೇ ಕೆಲಸ ನಡೆಸಿಕೊಳ್ಳಬೇಕು. ಇದು ತಾತ್ಕಾಲಿಕ ಕ್ರಮವಾದರೂ ಅನಿವಾರ್ಯ ಎಂದು ಸಚಿವರು ತಿಳಿಸಿದರು.


ಗೃಹ ಬಳಕೆದಾರರಿಗೂ ಹೊಸ ನಿಯಮ ಜಾರಿಗೆ ತರಲಾಗಿದೆ. ನಗರ ಪ್ರದೇಶಗಳಲ್ಲಿ 25 ದಿನಕ್ಕೊಮ್ಮೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 40 ದಿನಕ್ಕೊಮ್ಮೆ ಮಾತ್ರ ಗ್ಯಾಸ್ ಸಿಲಿಂಡರ್ ಪುಟ 2ಕ್ಕೆ

## ಯುದ್ಧದ ಪರಿಣಾಮ ಚರ್ಚೆ
# ಸಚಿವರ ತಂಡ ರಚಿಸಿದ ಮೋದಿ

**ನವದೆಹಲಿ:** ಪಶ್ಚಿಮ ಏಷ್ಯಾ ಸಂಘರ್ಷದಿಂದ ದೇಶದ ಮೇಲಾಗುವ ಪ್ರತಿಕೂಲ ಪರಿಣಾಮಗಳ ಬಗ್ಗೆ ನಿಗಾ ವಹಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಹಿರಿಯ ಸಚಿವರು ಮತ್ತು ಅಧಿಕಾರಿಗಳೊಂದಿಗೆ ತುರ್ತು ಸಭೆ ನಡೆಸಿ ಮಹತ್ವದ ತೀರ್ಮಾನ ಕೈಗೊಂಡಿದ್ದಾರೆ.

ದೇಶದ ಸದ್ಯದ ಪರಿಸ್ಥಿತಿ ಅವಲೋಕಿಸಿದ ಪ್ರಧಾನಿ, ಭವಿಷ್ಯದಲ್ಲಿ ಭಾರತದ ಮೇಲಾಗುವ ಪರಿಣಾಮ ಹಾಗೂ ಸರ್ಕಾರ ಜನಹಿತಕ್ಕಾಗಿ ಕೈಗೊಳ್ಳಬಹುದಾದ ಪರಿಹಾರ, ಪರ್ಯಾಯ ಕ್ರಮಗಳ ಬಗ್ಗೆ ಚರ್ಚೆ ನಡೆಸಿದರು. ಅಲ್ಲದೇ, ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರನ್ನು ಒಳಗೊಂಡಂತೆ ಹಿರಿಯ ಸಚಿವರ ತಂಡ ಸಹ ರಚಿಸಿದ್ದಾರೆ.

ಈ ಜಾಗತಿಕ ಯುದ್ಧದ ಸನ್ನಿವೇಶದಲ್ಲಿ ದೇಶ ಭದ್ರತೆ, ರಕ್ಷಣೆ, ಆಹಾರ, ಅಗತ್ಯ ಸಾಮಗ್ರಿ ಪೂರೈಕೆ ವಿಚಾರವಾಗಿ ಸಮರ್ಪಕ, ಸಮರ್ಪಿತವಾಗಿ ಕೆಲಸ ಮಾಡಲು ಸಚಿವರು ಮತ್ತು ಕಾರ್ಯದರ್ಶಿಗಳ ತಂಡ ರಚನೆಗೆ ಪ್ರಧಾನಿ ನಿರ್ದೇಶನ ನೀಡಿದರು. ಮಧ್ಯಪ್ರಾಚ್ಯ ಯುದ್ಧ ಸಂಘರ್ಷ ತೀವ್ರಗೊಳ್ಳುತ್ತಿದ್ದರಿಂದ ಇಡೀ ಜಗತ್ತು ಒಂದಿಲ್ಲೊಂದು ರೂಪದಲ್ಲಿ ಪರಿಣಾಮ ಎದುರಿಸುತ್ತಿದೆ ಎಂದು ಕಳವಳ ವ್ಯಕ್ತಪಡಿಸಿದರು.



ಸಂಪುಟ ಸಮಿತಿ ಸಭೆ ಅಧ್ಯಕ್ಷತೆ ವಹಿಸಿದ್ದ ಪ್ರಧಾನಿ ಅವರು, ಜಾಗತಿಕ ಪರಿಸ್ಥಿತಿ ಮತ್ತು ಕೇಂದ್ರ ಸರ್ಕಾರದ ಸಚಿವಾಲಯ, ಇಲಾಖೆಗಳು ಕೈಗೊಂಡಿರುವ ಕ್ರಮಗಳ ಕುರಿತು ಸಂಪುಟ ಕಾರ್ಯದರ್ಶಿಯಿಂದ ಸಮಗ್ರ ಮಾಹಿತಿ ಪಡೆದರು. ಕೃಷಿ, ರಸಗೊಬ್ಬರ, ಆಹಾರ ಭದ್ರತೆ, ಪೆಟ್ರೋಲಿಯಂ, ವಿದ್ಯುತ್, ಎಂಎಸ್‌ಎಂಇಗಳು, ರಫ್ತುದಾರರು, ಸಾಗಣೆ, ವ್ಯಾಪಾರ, ಹಣಕಾಸು ವಲಯಗಳ ಮೇಲಿನ ನಿರೀಕ್ಷಿತ ಪರಿಣಾಮ ಮತ್ತು ಪರಿಹಾರ ಕ್ರಮಗಳ ಬಗ್ಗೆ ಮಹತ್ವದ ಚರ್ಚೆ ನಡೆಸಿದರು.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಜಾಗತಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಖಾರಿಫ್ ಋತುವಿನಲ್ಲಿ ರೈತರ ಮೇಲಾಗುವ ಪರಿಣಾಮ ಮತ್ತು ರಸಗೊಬ್ಬರ ಅಗತ್ಯತೆ, ಪೂರೈಕೆ ಬಗ್ಗೆ ನಿರ್ಣಯ ಕೈಗೊಂಡರು. ರಸಗೊಬ್ಬರ ದಾಸ್ತಾನು, ಲಭ್ಯತೆ ಹಾಗೂ ಪರ್ಯಾಯ ಮೂಲಗಳ ಕುರಿತು ಚರ್ಚಿಸಿದರು.

ದೇಶದಲ್ಲಿ ಸದ್ಯದ ಪರಿಸ್ಥಿತಿಯಲ್ಲಿ ಆಹಾರ ಧಾನ್ಯ, ಪದಾರ್ಥಗಳ ಸಕಾಲಿಕ ಲಭ್ಯತೆ ಬಗ್ಗೆ ಪ್ರಧಾನಿ ಪುಟ 2ಕ್ಕೆ

ವರ್ತಮಾನ

ಮಂಗಳವಾರ
ಮಾರ್ಚ್ 24, 2026

## ಮೊದಲ ಪುಟದಿಂದ

### ಹೋಟೆಲ್ ಗಳಿಗೆ ಹೆಚ್ಚುವರಿ ಸಾವಿರ ಸಿಲಿಂಡರ್ ಪೂರೈಕೆ

ಒಂದು ವಾರದೊಳಗೆ ರಿಜಿಸ್ಟರ್ ಮಾಡಬೇಕು. ಅಕ್ರಮ ತಡೆಯಲು ಈ ಕ್ರಮಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಇನ್ಮುಂದೆ ಕಮರ್ಷಿಯಲ್ ಸಿಲಿಂಡರ್ ಬಳಕೆ ಮಾಡುವವರಿಗೆ ನೋಂದಣಿ ಕಡ್ಡಾಯ. ಯಾರು ಎಷ್ಟು ಬಳಕೆ ಮಾಡ್ತಿದ್ದಾರೆ ಎನ್ನುವುದರ ಮಾಹಿತಿ ಸಿಗಲಿದೆ. ಮುಂದಿನ ಶನಿವಾರದೊಳಗೆ ನೋಂದಣಿ ಕಡ್ಡಾಯ ಎಂದು ತಿಳಿಸಿದರು.

10 ಸಾವಿರ ಸಿಲಿಂಡರ್‌ನಲ್ಲಿ ಕಮರ್ಷಿಯಲ್ ಗ್ಯಾಸ್ ವ್ಯಾಪ್ತಿಗೆ ಬರುವ ಎಲ್ಲಾ ವಲಯಕ್ಕೆ ಹಂಚಿಕೆ ಆಗುತ್ತದೆ. ಅದರಲ್ಲಿ ಹೋಟೆಲ್, ಇಂದಿರಾ ಕ್ಯಾಂಟೀನ್, ಪಿಜಿ ಇನ್ನಿತರ ವಲಯಕ್ಕೂ ಹಂಚಿಕೆಯಾಗಲಿದೆ. ಮುಂದಿನ ಸೋಮವಾರ ಮತ್ತೆ ಹೋಟೆಲ್ ಮಾಲೀಕರ ಜತೆ ಸಭೆ ಮಾಡಲಾಗುವುದು. ಕಳೆದ ವಾರ ಒಂದು ಸಾವಿರ ಸಿಲಿಂಡರ್ ಹೋಟೆಲ್‌ಗೆ ನೀಡಲಾಗುತ್ತಿತ್ತು. ಹೋಟೆಲ್, ಡಾಬಾ, ಹಾಸ್ಟೆಲ್, ಇಂದಿರಾ ಕ್ಯಾಂಟೀನ್‌ಗೆ ಹೆಚ್ಚುವರಿ ಸಿಲಿಂಡರ್ ನೀಡಲಾಗುವುದು ಎಂದು ಮಾಹಿತಿ ನೀಡಿದರು. ಹೋಟೆಲ್ ಮಾಲೀಕರ ವಿದ್ಯುತ್ ಬಿಲ್ ಕಡಿಮೆ ಮಾಡುವ ವಿಚಾರದ ಬಗ್ಗೆ ಮಾತನಾಡಿ, ಅದು ನನ್ನ ಗಮನಕ್ಕೆ ಬಂದಿಲ್ಲ. ಸಿಎಂಗೆ ಪತ್ರ ಬರೆದಿದ್ದಾರೆ. ಸಿಎಂ ಈ ಬಗ್ಗೆ ಕ್ರಮಕೈಗೊಳ್ಳುವರು ಎಂದು ಹೇಳಿದರು.

### ಕೋವಿಡ್ ಪರಿಸ್ಥಿತಿಯಂತೆ ಒಗ್ಗಟ್ಟಿನಿಂದ ಎದುರಿಸಬೇಕಿದೆ

ಭಾರತೀಯರ ರಕ್ಷಣೆ ಸರ್ಕಾರದ ಆದ್ಯತೆಯಾಗಿದೆ. ಕೇಂದ್ರ ಸರ್ಕಾರ ಈ ಕುರಿತು ಕ್ರಮಕೈಗೊಳ್ಳುತ್ತಿದೆ ಎಂದು ಹೇಳಿದರು.

ದೇಶದಲ್ಲಿ ಎಲ್‌ಪಿಜಿ ಕೊರತೆ ವಿಷಯವನ್ನು ಉಲ್ಲೇಖಿಸಿದ ಪ್ರಧಾನಿ ಮೋದಿ, ಸರ್ಕಾರವು ಗೃಹ ಬಳಕೆಯ ಎಲ್‌ಪಿಜಿಗೆ ಆದ್ಯತೆ ನೀಡುತ್ತಿದೆ. ಎಲ್‌ಪಿಜಿ ಪೂರೈಕೆಯಲ್ಲಿ ಉಂಟಾದ ವ್ಯತ್ಯಯದಿಂದ ಸಾರ್ವಜನಿಕರರಿಗೆ ತೊಂದರೆ ಉಂಟಾಗದಂತೆ ನೋಡಿಕೊಳ್ಳುವುದು ನಮ್ಮ ಗುರಿಯಾಗಿದೆ ಎಂದು ತಿಳಿಸಿದರು.\

### 'ಯುದ್ಧ ಸವಾಲು' ಎದುರಿಸಲು ಸಿದ್ಧ

ಚಲನೆ ತುಂಬಾ ಸವಾಲಿನದ್ದಾಗಿದೆ. ಇದರ ಹೊರತಾಗಿಯೂ, ಪೆಟ್ರೋಲ್, ಡೀಸೆಲ್ ಮತ್ತು ಅನಿಲ ಪೂರೈಕೆಯ ಮೇಲೆ ತೀವ್ರ ಪರಿಣಾಮ ಬೀರದಂತೆ ನಮ್ಮ ಸರ್ಕಾರ ಪ್ರಯತ್ನಗಳನ್ನು ಮಾಡಿದೆ. ನಮಗೆಲ್ಲರಿಗೂ ತಿಳಿದಿರುವಂತೆ, ದೇಶವು ತನ್ನ ಎಲ್‌ಪಿಜಿ ಅಗತ್ಯದ ಶೇ.60 ಅನ್ನು ಆಮದು ಮಾಡಿಕೊಳ್ಳುತ್ತದೆ. ಪೂರೈಕೆಯಲ್ಲಿನ ಅನಿಶ್ಚಿತತೆಯಿಂದಾಗಿ, ಸರ್ಕಾರವು ದೇಶೀಯ ಎಲ್‌ಪಿಜಿ ಗ್ರಾಹಕರಿಗೆ ಆದ್ಯತೆ ನೀಡಿದೆ. ಅದೇ ಸಮಯದಲ್ಲಿ, ಎಲ್‌ಪಿಜಿಯ ದೇಶೀಯ ಉತ್ಪಾದನೆಯನ್ನು ಸಹ ಹೆಚ್ಚಿಸಲಾಗುತ್ತಿದೆ. ದೇಶಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಪೂರೈಕೆ ಸುಗಮವಾಗಿರುವುದನ್ನು ಖಚಿತಪಡಿಸಿಕೊಳ್ಳಲು ನಿರಂತರ ಪ್ರಯತ್ನಗಳನ್ನು ಮಾಡಲಾಗಿದೆ ಎಂದು ಅವರು ಹೇಳಿದರು.

ಭಾರತವು ಈಗ 41 ದೇಶಗಳಿಂದ ಇಂಧನವನ್ನು ಆಮದು ಮಾಡಿಕೊಳ್ಳುತ್ತಿದೆ. ಇದು ಹಿಂದಿನ 27 ದೇಶಗಳಿಗಿಂದ ಹೆಚ್ಚಾಗಿದೆ ಮತ್ತು 5.3 ಮಿಲಿಯನ್ ಮೆಟ್ರಿಕ್ ಟನ್‌ಗಳಿಗಿಂತ ಹೆಚ್ಚಿನ ಕಾರ್ಯತಂತ್ರದ ಪೆಟ್ರೋಲಿಯಂ ನಿಕ್ಷೇಪಗಳನ್ನು ನಿರ್ಮಿಸಿದೆ. ಇದನ್ನು 6.5 ಮಿಲಿಯನ್ ಟನ್‌ಗಳಿಗಿಂತ ಹೆಚ್ಚು ವಿಸ್ತರಿಸುವ ಯೋಜನೆ ಇದೆ.

### ಸಮರ್ಥ್‌ಗೆ ಸಿಎಂ, ಡಿಸಿಎಂ ಸಾಥ್

ಕಾಂಗ್ರೆಸ್. ನಾವು ಆ ಜಾತಿ ಈ ಜಾತಿ ಅಂತ ನೋಡಿಲ್ಲ. ನಾನು ಕುಟುಂಬ ರಾಜಕಾರಣವನ್ನು ಬೆಂಬಲಿಸೋ ದಿಲ್ಲ. ಯಾವ ಅಭ್ಯರ್ಥಿ ಗೆಲ್ಲುತ್ತಾರೋ ಅವರನ್ನು ನಿಲ್ಲಿಸುತ್ತೇವೆ. ಯಾರು ಶಾಸಕರು ಮೃತರಾಗುತ್ತಾರೋ ಅವರ ಕುಟುಂಬಕ್ಕೆ ಟಿಕೆಟ್

ನೀಡುವುದು ಕಾಂಗ್ರೆಸ್ ಪಕ್ಷದ ನೀತಿ. ಹೀಗಾಗಿ ಬಾಗಲಕೋಟೆಯಲ್ಲಿ ಮೇಟಿ ಅವರ ಕುಟುಂಬಕ್ಕೆ ನೀಡಲಾಗಿದೆ ಎಂದು ತಿಳಿಸಿದರು.

### ಮೈಸೂರಿನಲ್ಲಿ 28, 29ರಂದು ಐಪಿಎಲ್ 'ಫ್ಯಾನ್ ಪಾರ್ಕ್'

ಮೊದಲ ಮೂರು ವಾರಾಂತ್ಯಗಳೆಂದರೆ ಇದೇ ಮಾರ್ಚ್ 28 ಮತ್ತು 29, ಏಪ್ರಿಲ್ 4 ಮತ್ತು 5, ಏಪ್ರಿಲ್ 11 ಮತ್ತು 12 ರಂದು ಫ್ಯಾನ್ ಪಾರ್ಕ್ ನಡೆಯಲಿದೆ. ಮೂರು ವಾರಾಂತ್ಯಗಳಲ್ಲಿ ಐಪಿಎಲ್ ಪಂದ್ಯ ನಡೆಯಲಿದೆ.

### ಜಾಹೀರಾತು ನೀತಿ 2026 ಕೈಬಿಡುವಂತೆ ಸಿಎಂಗೆ ಮನವಿ

ಈ ವೇಳೆ ಜಿಲ್ಲಾಧ್ಯಕ್ಷ ಜಾಕೀರಹುಸೇನ ತಾಳಿಕೋಟಿ, ಪ್ರಧಾನ ಕಾರ್ಯದರ್ಶಿ ಸದಾನಂದ ಕಟ್ಟಿಮನಿ, ಮುತ್ತು ನಾಯ್ಕರ, ಅಮರೇಶ ನಾಗೂರ, ಹಾರುನ್ ಮುದ ಕವಿ, ಆನಂದ ನಾರಾಯಣಿ, ಅರ್ಜುನ ಹೊಸಮನಿ, ಶ್ರೀಕಾಂತ ನೀಲನಾಯಕ, ಕಿರಣಕುಮಾರ ನಾರಾಯಣಿ, ಕಣಕಪ್ಪ ಪೂಜಾರ, ಉಸ್ಮಾನ್ ಸಂಗಮ, ಶಾಂತೇಶ ಚವ್ಹಾಣ ಪಾಲ್ಗೊಂಡಿದ್ದರು.

### ಯುದ್ಧದ ಪರಿಣಾಮ ಚರ್ಚೆ ಸಚಿವರ ತಂಡ ರಚಿಸಿದ ಮೋದಿ

ಮೋದಿ ಅವರು ಸಚಿವ ಪ್ರಹ್ಲಾದ್ ಜೋಶಿ ಅವರೊಂದಿಗೆ ಚರ್ಚೆ ನಡೆಸಿದರು. ಭವಿಷ್ಯದಲ್ಲಿ ನಿರಂತರ ಆಹಾರ ಲಭ್ಯತೆ ಹಾಗೂ ಜನಸಾಮಾನ್ಯರ, ಗ್ರಾಹಕರ ಹಿತರಕ್ಷಣೆಗೆ ಬದ್ಧವಾಗಿ ತ್ವರಿತ ಕ್ರಮಕ್ಕೆ ಸೂಚನೆ ನೀಡಿದರು.

ರಾಸಾಯನಿಕ, ಔಷಧ, ಪೆಟ್ರೋಕೆಮಿಕಲ್ ಮತ್ತು ಕೈಗಾರಿಕಾ ವಲಯಗಳಿಗೆ ಅಗತ್ಯವಿರುವ ಆಮದು ಮೂಲಗಳನ್ನು ವೈವಿಧ್ಯಗೊಳಿಸುವ ಬಗ್ಗೆ ಪ್ರಧಾನಿ ಸಲಹೆ ನೀಡಿದರು. ಅಂತೆಯೇ ಭಾರತೀಯ ಸರಕುಗಳನ್ನು ಉತ್ತೇಜಿಸಲು ಮುಂದಿನ ದಿನಗಳಲ್ಲಿ ಹೊಸ ರಫ್ತು ತಾಣಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಸಹ ಪ್ರಸ್ತಾಪಿಸಿ, ಆಲೋಚನೆ ನಡೆಸಿದರು.

ಮಾರುಕಟ್ಟೆಗಳಲ್ಲಿ ಕೃತಕ ಅಭಾವ ಸೃಷ್ಟಿ ಮತ್ತು ಪ್ರಮುಖ ಸರಕುಗಳ ಸಂಗ್ರಹಣೆ ಮೇಲೆ ನಿಗಾ ವಹಿಸುವ ಜೊತೆಗೆ ಆಯಾ ರಾಜ್ಯ ಸರ್ಕಾರಗಳೊಂದಿಗೆ ಸಮನ್ವಯ ಸಾಧಿಸಿ, ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಪ್ರಮುಖ ಸಚಿವರು ಮತ್ತು ಇಲಾಖಾ ಕಾರ್ಯದರ್ಶಿಗಳಿಗೆ ಮೋದಿ ಸಲಹೆ ನೀಡಿದರು.

### ನಗರಕ್ಕೆ 25, ಗ್ರಾಮೀಣರಿಗೆ 45 ದಿನಕ್ಕೊಂದು ಸಿಲಿಂಡರ್

ಪೂರೈಕೆ ಮಾಡಲಾಗುತ್ತದೆ. ಇದರಿಂದ ಎಲ್ಲರಿಗೂ ಸಮಾನವಾಗಿ ಪೂರೈಕೆ ಮಾಡಲು ಸಹಕಾರಿಯಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಪರ್ಯಾಯ ಇಂಧನ ಬಳಕೆಯ ಅಗತ್ಯವನ್ನು ಒತ್ತಿ ಹೇಳಿದ ಅವರು, ಕಟ್ಟಿಗೆ, ವಿದ್ಯುತ್ ಆಧಾರಿತ ಇಂಡಕ್ಷನ್ ಸ್ಟೌವ್‌ಗಳು, ಬಯೋಗ್ಯಾಸ್ ಮತ್ತು ಸೌರಶಕ್ತಿ ಬಳಸುವಂತೆ ಸಲಹೆ ನೀಡಿದರು.

### ಏ.1ರಿಂದ ಟೋಲ್ ದರ ಏರಿಕೆ

ಆರಂಭವಾದ 2023ರ ಏ.1ರಿಂದ ಇದು ನಾಲ್ಕನೇ ಬಾರಿಗೆ ದರ ಏರಿಕೆಯಾಗುತ್ತಿದೆ. ಫಾಸ್ಟ್ಯಾಗ್ ಬಳಕೆ ಉತ್ತೇಜಿಸಲು ಹೊಸ ನಿಯಮಗಳನ್ನು ಜಾರಿಗೊಳಿಸಲಾಗುತ್ತಿದೆ.

ಫಾಸ್ಟ್ಯಾಗ್‌ನಲ್ಲಿ ಸಾಕಷ್ಟು ಬ್ಯಾಲೆನ್ಸ್ ಇಲ್ಲದಿದ್ದರೆ ಅಥವಾ ತಾಂತ್ರಿಕ ದೋಷದಿಂದ ಪಾವತಿ ವಿಫಲವಾದರೆ ಡಬಲ್ ಟೋಲ್ ಶುಲ್ಕ ವಿಧಿಸಲಾಗುವುದು. ಸದ್ಯ ಟೋಲ್ ಪಾಸ್ ದರ 3,000 ರೂ. ಇದೆ. ಏ.1ರಿಂದ 3,075 ರೂ. ಆಗಲಿದೆ. ಟೋಲ್ ಪಾಸ್ ಹೊಂದಿರುವವರು 200 ಟ್ರಿಪ್ ಹೋಗಬಹುದು. ಎನ್‌ಹೆಚ್‌ಎಐಯ ಈ ನಿರ್ಧಾರದಿಂದ ರಾಜ್ಯದ ಪ್ರಮುಖ ಹೆದ್ದಾರಿಗಳಲ್ಲಿ ಪ್ರಯಾಣಿಸುವವರಿಗೆ ಆರ್ಥಿಕ ಒತ್ತಡ ಹೆಚ್ಚಾಗಲಿದೆ.

---

**ಒಳ ಮೀಸಲಾತಿ ವಿರೋಧಿಸಿ ಬೆಂಗಳೂರಿನಲ್ಲಿ ಮಾ. 25 ರಂದು ಬೃಹತ್ ಪ್ರತಿಭಟನೆ**

# ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಲು ಎನ್.ಕುಮಾರ್ ಮನವಿ

ಚಾಮರಾಜನಗರ:ರಾಜ್ಯ ಸರ್ಕಾರ ಜಾರಿ ಮಾಡಿರುವ ಒಳ ಮೀಸಲಾತಿ ಬಲಗೈ ಸಮುದಾಯದ ವಿರೋಧಿಯಾಗಿದ್ದು, ಇದನ್ನು ವಿರೋಧಿಸಿ ಬಲಗೈ ಸಮುದಾಯದ ಒಕ್ಕೂಟದಿಂದ ಮಾ. 25 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಛಲವಾದಿ ಮಹಾಸಭಾದ ಜಿಲ್ಲಾಧ್ಯಕ್ಷ ಎನ್.ಕುಮಾರ್ ಮನವಿ ಮಾಡಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನ್ಯಾ. ನಾಗಮೋಹನ್ ದಾಸ್ ಅವರ ವರದಿಯೇ ಅವೈಜ್ಞಾನಿಕವಾಗಿದ್ದು, ಸಮೀಕ್ಷೆ ಹಾಗೂ 101 ಜಾತಿಗಳ ನಿಖರವಾದ ಜಾತಿಗಳ ಮಾಹಿತಿಯನ್ನು ಸಂಗ್ರಹಿಸುವಲ್ಲಿ ವಿಫಲರಾಗಿದ್ದಾರೆ. 2025ರ ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆಯಂತೆ ಜಾತಿ ಪ್ರಮಾಣ ಪತ್ರಗಳನ್ನು ಪ್ರವರ್ಗ ಎ, ಬಿ, ಮತ್ತು ಸಿ ಎಂದು ವರ್ಗೀಕರಿಸಿರುವುದನ್ನು



ಹಿಂಪಡೆದು ಮೂಲ ಜಾತಿಗಳನ್ನು ನಮೂದಿಸಿ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಸೂಕ್ತ ಆದೇಶ ಹೊರಡಿಸುವುದು ಎಂದು ಸರಿಯಲ್ಲ ಎಂದರು.

ಬಲಗೈ ಸಮುದಾಯದ ಮರಣ ಶಾಸನವಾಗಿರುವ ಒಳ ಮೀಸಲಾತಿಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ರಾದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಮಾವೇಶ ನಡೆಯಲಿದ್ದು, ಈ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಲಗೈ ಸಮುದಾಯದ ಬಂಧುಗಳು ಭಾಗವಹಿಸಬೇಕು ಮನವಿ ಮಾಡಿದರು.

ಛಲವಾದಿ ಮಹಾಸಭಾದ ರಾಜ್ಯ ಉಪಾಧ್ಯಕ್ಷ ಅಣಗಳ್ಳಿ ಬಸವರಾಜು ಮಾತನಾಡಿ ಸಂವಿಧಾನದಲ್ಲಿ ಸರ್ವರಿಗೂ ಮೀಸಲಾತಿ ಕೊಡಲಾಗಿದೆ. ಅಂದ ಮೇಲೆ ಒಳ ಮೀಸಲಾತಿ ಅವಶ್ಯಕತೆ ಇರಲಿಲ್ಲ. ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳಿವೆ ಅದರಲ್ಲಿ ಅಸ್ಪೃಶ್ಯ, ಸ್ಪೃಶ್ಯ ಎಂಬುವುದನ್ನು ಇಂದು ಒಳಮೀಸಲಾತಿಗಾಗಿ ಹೋರಾಟ ಮಾಡುವವರು ಕೇಳಬೇಕಿತ್ತು. ಅದನ್ನು ಪ್ರಶ್ನೆ ಮಾಡಲಿಲ್ಲ. ಇವತ್ತು ಬಹಳ ಅನ್ಯಾಯವಾಗಿದೆ ಎಂದು ಮಂದಕೃಷ್ಣ, ಅರುಣ್‌ಕುಮಾರ್, ಭಾಸ್ಕರ್‌ಪ್ರಸಾದ್ ಬಲಗೈ ಸಮುದಾಯದ ಸಚಿವರು, ಶಾಸಕರು, ಮುಖಂಡರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡುವುದು ಸರಿಯಲ್ಲ. ಮಾ. 25 ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆಯುವ ಒಳಮೀಸಲಾತಿ ಹೋರಾಟಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಅಧ್ಯಕ್ಷ ಕೆ. ಆರ್.ನಾರಾಯಣ್, ಶ್ರೀಕಂಠಮೂರ್ತಿ, ಮಂಟೇಸ್ವಾಮಿ, ಎನ್, ಸೋಮಣ್ಣ ಅಶೋಕ್, ಚಿದಾನಂದಮೂರ್ತಿ ಹಾಜರಿದ್ದರು

---

# ಹಳೆ ಮೀಸಲಾತಿ ಜಾರಿಗೆ ಹೋರಾಟ

## ಬಲಗೈ ಸಮುದಾಯದ ವಿವಿಧ ಸಂಘಟನೆಗಳ ಆಶ್ರಯದಲ್ಲಿ ಬೃಹತ್ ಪ್ರತಿಭಟನೆ

ಮೈಸೂರು: ಹಳೆ ಮೀಸಲಾತಿ ಜಾರಿಗೆ ಒತ್ತಾಯಿಸಿ ಸೋಮವಾರ ಬಲಗೈ ಸಮುದಾಯದ ವಿವಿಧ ಸಂಘಟನೆಗಳ ಆಶ್ರಯದಲ್ಲಿ ನೂರಾರು ಮಂದಿ ಬೃಹತ್ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಾಜ್ಯ ಬಲಗೈ ಜಾತಿಗಳ ಒಕ್ಕೂಟ ಹಾಗೂ ಅಶೋಕಪುರಂ ದಲಿತ ಸಂಘಟನೆಗಳ ಒಕ್ಕೂಟದಿಂದ ನಡೆದ ಪ್ರತಿಭಟನೆಯಲ್ಲಿ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ಒಳ ಮೀಸಲಾತಿ ವರದಿಯನ್ನು ತಿರಸ್ಕರಿಸುವಂತೆ ಆಗ್ರಹಿದರು.

ನಗರದ ಅಶೋಕಪುರಂನಿಂದ ನೂರಾರು ಮಂದಿ ಬೈಕ್ ರ?ಯಾಲಿ ನಡೆಸಿದರು. ದಲಿತ ಸಂಘಟನೆಗಳು ವರುಣಾ ಮತ್ತು ತಿ. ನರಸೀಪುರದಿಂದ ಪಾದಯಾತ್ರೆ ನಡೆಸಿ ಜಿಲ್ಲಾಧಿಕಾರಿಗಳ ಕಚೇರಿ ಆವರಣದಲ್ಲಿ ಸಮಾವೇಶಗೊಂಡು ಪ್ರತಿಭಟನೆ ನಡೆಸಿದರು.

ಸರ್ಕಾರ ಮತ್ತು ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್ ದಾಸ್ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಬನ್ನೂರು ರಸ್ತೆಯ ಗೌತಮ ಬುದ್ಧ ವೃತ್ತದ ಆವರಣದಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಲೇಖಕ ಸಿ.ಹರಕುಮಾರ್ ಮಾತನಾಡಿ, ಒಳ ಮೀಸಲಾತಿ ಹಾದಿಬೀದಿ ರಂಪಾಟ ಆಗಿದೆ. ಸರ್ಕಾರಕ್ಕೆ ಒಳ ಮೀಸಲಾತಿ ನಿರ್ಧಾರದಿಂದ ಹಿಂದೆ ಸರಿಯಬೇಕು. ಕಡ್ಡಾಯವಾಗಿ ಜಾರಿ ಮಾಡಬೇಕಾದರೆ ನ್ಯಾಯಾಲಯದ ವಿಮರ್ಶೆಗೆ ಒಳಪಡಿಸಬೇಕು. 101 ಜಾತಿಗಳಿಗೆ ಅನ್ಯಾಯವಾಗದಂತೆ ಮೀಸಲಾತಿ ಹಂಚಿಕೆ ಮಾಡಬೇಕು ಎಂದು ಹೇಳಿದರು.

ಒಂದು ವೃತ್ತದಲ್ಲಿ ಒಂದೇ ಹುದ್ದೆ ಇದ್ದಾಗ ಮೀಸಲಾತಿ ಅನ್ವಯವಾಗುವುದಿಲ್ಲ. 3 ಹುದ್ದೆಗಳಿಂತ ಹೆಚ್ಚು ಹುದ್ದೆ ಇಭಾಗ ಒಳ ಮೀಸಲಾತಿ ಅನ್ವಯ ಮಾಡಬೇಕು. ಈ ನಿಯಮವನ್ನು ನಿಗದಿ ಮಾಡಬೇಕು. ಘಟಕ ಮಾಡಿದರೆ ಸೂಕ್ತವಾದ ಪ್ರಾತಿನಿಧ್ಯ ಸಿಗುವುದಿಲ್ಲ. 2011ರಿಂದ ಗ್ರೂಪ್ ಎ, ಬಿ



ಹುದ್ದೆ ಗಳು ಊರ್ಜಿತವಾಗಿಲ್ಲ ಎಂದು ತಿಳಿಸಿದರು.

ಬಹುಜನ ಸಮಾಜ ಪಕ್ಷ ಒಳ ಮೀಸಲಾತಿ ಪರ ಇಲ್ಲ. ಉತ್ತರ ಭಾರತದಲ್ಲಿ ಒಳ ಮಿಸಲಾತಿ ಇಲ್ಲ. ಅಸ್ಪೃಶ್ಯ ಜಾತಿಗಳಿಗೆ ಒಳ ಮೀಸಲಾತಿ ಸಿಗಬೇಕು. ಸ್ಪೃಶ್ಯ ಜಾತಿಗಳಿಗೆ ಸಿಗಬಾರದು ಎಂದರು.

ನಿವೃತ್ತ ಪ್ರಾಧ್ಯಾಪಕ ಪಿ.ಎಂ. ಮಹೇಶ್ ಮಾತನಾಡಿ, ನಾಗಮೋಹನ್ ದಾಸ್ ವರದಿ ಅವೈಜ್ಞಾನಿಕವಾಗಿದೆ. ಹಳೇ ಮೀಸಲಾತಿ ಅನ್ವಯ ನೇಮಕಾತಿ ಮಾಡಬೇಕು. ಪ್ರತ್ಯೇಕ ಮೀಸಲಾತಿಗೂ ಒಳ ಮೀಸಲಾತಿಗೂ ವ್ಯತ್ಯಾಸ ಇದೆ. ರೋಸ್ಟರ್ ಬಿಂದು ಅವೈಜ್ಞಾನಿಕ. ಒಳ ಮೀಸಲಾತಿ ಹುನ್ನಾರವೇ 101 ಸಮುದಾಯಗಳು ಒಟ್ಟಿಗೆ ಒಡೆಯುವುದಾಗಿದೆ ಎಂದರು. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಿವೃತ್ತ ಜಂಟಿ ನಿರ್ದೇಶಕ ಶಿವಣ್ಣ ಮಾತನಾಡಿ, ಬಲಗೈ ಸಮಾಜ ಯಾರ ಮೀಸಲಾತಿಯನ್ನು ಕಬಳಿಸಿಲ್ಲ. ಶಾಂತಿ ರೀತಿಯಲ್ಲಿ ಸರ್ಕಾರಕ್ಕೆ ನಮ್ಮ ಹಕ್ಕೊತ್ತಾಯ ಮಾಡೋಣ ಎಂದರು. ವಕೀಲ ತಿಮ್ಮಯ್ಯ ಒಳ ಮೀಸಲಾತಿ ಅವೈಜ್ಞಾನಿಕ ವರದಿಯನ್ನು ತಿರಸ್ಕಾರ ಮಾಡಬೇಕು ಎಂದರು.

ಯುವ ಮುಖಂಡ ಭರತ್ ರಾಮಸ್ವಾಮಿ ಮಾತನಾಡಿ, ರೋಸ್ಟರ್ ಬಿಂದು ಸರಿಪಡಿಸಲಾಗದಿದ್ದರೆ ವರದಿಯನ್ನು ತಿರಸ್ಕರಿಸಬೇಕು ಎಂಬುದು ಆಗ್ರಹವಾಗಿದೆ ಎಂದು ಹೇಳಿದರು.

ಜ್ಞಾನ ಸ್ವರೂಪಾನಂದ ಸ್ವಾಮೀಜಿ, ಮಾಜಿ ಶಾಸಕ ಹರ್ಷವರ್ಧನ್, ಮಾಜಿ ಮೇಯರ್ ಪುರುಷೋತ್ತಮ್, ಪಾಲಿಕೆ ಮಾಜಿ ಸದಸ್ಯೆ ಪಲ್ಲವಿ ಬೇಗಂ, ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಡಾ.ಮರಿದೇವಯ್ಯ, ಸಿದ್ದಸ್ವಾಮಿ, ಡಾ.ಜ್ಞಾನಪ್ರಕಾಶ, ಡಾ. ಮರಿದೇವಯ್ಯ, ಎ.ಆರ್. ಕಾಂತರಾಜ್, ಸೋಮಯ್ಯ ಮಲೆಯೂರು, ಜಿ.ಮಹದೇವ, ಅಮ್ಮ ರಾಮಚಂದ್ರ, ವಿ. ರಾಮಸ್ವಾಮಿ, ಗೋವಿಂದರಾಜು, ಗಾಂಧಿನಗರದ ಸಿದ್ದಪ್ಪ, ಡಾ. ಆನಂದ್, ಡಾ.ದಿಲೀಪ್ ನರಸಯ್ಯ, ಚೋರನಹಳ್ಳಿ ಶಿವಣ್ಣ, ಮಣಿಯಯ್ಯ, ವರಹಳ್ಳಿ ಆನಂದ್, ಡಾ.ನಟರಾಜ್ ಶಿವಣ್ಣ, ಕಲ್ಲಹಳ್ಳಿ ಕುಮಾರ್, ಮಲ್ಲೇಶ್, ವಕೀಲರಾದ ಪುಟ್ಟರಸ, ಸೂರ್ಯದೇವ್, ಮಹೇಶ್ ಇರಸವಾಡಿ ಮುಂತಾದವರಿದ್ದರು.

> ಅವೈಜ್ಞಾನಿಕವಾದ ಪಕ್ಷಪಾತದಿಂದ ಕೂಡಿರುವ ನಿವೃತ್ತ ನ್ಯಾಯಮೂರ್ತಿ ನಾಗಮೋಹನ್ ದಾಸ್ ವರದಿಯನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು. ಹಳೆಯ ಮೀಸಲಾತಿ ಅನ್ವಯ ನೇಮಕಾತಿಯನ್ನು ಆರಂಭಿಸಬೇಕು.
>
> –ಪುರುಷೋತ್ತಮ್ ಮಾಜಿ ಮೇಯರ್

> ಮುಖ್ಯಮಂತ್ರಿ ಸಿದ್ದರಾಮಯ್ಯ ಕುಲ ಶಾಸ್ತ್ರೀಯ ಅಧ್ಯಯನ ಮಾಡಲು ಕ್ರಮವಹಿಸಬೇಕು ಮತ್ತು ಗೊಂದಲಕ್ಕೆ ಕಾರಣರಾದ ನಾಗಮೋಹನ್ ದಾಸ್ ವರದಿಯನ್ನು ತನಿಖೆ ಮಾಡಲು ಉನ್ನತ ಮಟ್ಟದ ಸಮಿತಿ ರಚಿಸಿ ತನಿಖೆ ನಡೆಸಲು ಕ್ರಮ ವಹಿಸಬೇಕು. ಮಾ. 25ರಂದು ಬೆಂಗಳೂರಲ್ಲಿ ನಡೆಯುವ ಬೃಹತ್ ಪ್ರತಿಭಟನೆಗೆ ಮೈಸೂರು ಜಿಲ್ಲೆಯಿಂದ 120 ಬಸ್‌ಗಳಲ್ಲಿ ತೆರಳಲಿದ್ದೇವೆ.
>
> –ಎನ್.ಭಾಸ್ಕರ್



---

**ಸಂಸದ ಡಾ.ಸಿ.ಎನ್.ಮಂಜುನಾಥ್ ಹೇಳಿಕೆ**

# ಸಿಎಸ್‌ಆರ್ ನಿಧಿ ಬಳಕೆ, ಸಾರ್ವಜನಿಕ ಸೌಕರ್ಯಗಳಿಗೆ ಬಲ

ರಾಮನಗರ: ಶುದ್ಧ ಕುಡಿಯುವ ನೀರು ಆರೋಗ್ಯಕ್ಕೆ ಮೂಲಾಧಾರ. ಶುದ್ಧ ಕುಡಿಯುವ ನೀರು ಪ್ರತಿಯೊಬ್ಬ ನಾಗರೀಕನ ಹಕ್ಕೂ ಹೌದು ಹೀಗಾಗಿಯೇ ಶುದ್ಧ ಕುಡಿಯುವ ನೀರಿನ ಘಟಕವನ್ನು ಗ್ರಾಮಸ್ಥರ ಉಪಯೋಗಕ್ಕಾಗಿ ಸ್ಥಾಪಿಸಲಾಗಿದೆ ಎಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಸಂಸದ ಡಾ.ಸಿ.ಎನ್. ಮಂಜುನಾಥ್ ಹೇಳಿದರು.

ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಸಂಸದರ ಕ್ಷೇತ್ರಾಭಿವೃದ್ಧಿ ನಿಧಿ, ಆರ್.ಎಸ್.ಡಿ.ಎಕ್ಸ್ ಮತ್ತು ಪೀಪಲ್ ಫಾರ್ ಪೀಪಲ್ ಟ್ರಸ್ಟ್‌ಗಳವತಿಯಿಂದ ಸ್ಥಾಪಿಸಲಾಗಿರುವ ಶುದ್ಧ ಕುಡಿಯುವ ನೀರಿನ ಘಟಕಗಳು, ಬಸ್ ನಿಲ್ದಾಣಗಳನ್ನು ಉದ್ಘಾಟಿಸಿದ ವೇಳೆ ಅವರು ಮಾತನಾಡಿದರು. ಜನರ ಅನುಕೂಲಕ್ಕಾಗಿ ಕಾರ್ಪೊರೇಟ್ ಸಂಸ್ಥೆಗಳು ತಮ್ಮ ಸಿ.ಎಸ್.ಆರ್. ನಿಧಿಯನ್ನು ಬಳಸಿ ಉಪಯುಕ್ತ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ ಎಂದು ಶ್ಲಾಘಿಸಿದರು. ಇಂತಹ




ಯೋಜನೆಗಳು ಗ್ರಾಮಗಳ ಅಭಿವೃದ್ಧಿಗೂ ಬಲ ತುಂಬುತ್ತವೆ ಎಂದರು.

**ಎಲ್ಲೆಲ್ಲಿ ಏನೇನು ಸೌಲಭ್ಯ?**

ಚನ್ನಪಟ್ಟಣ ತಾಲ್ಲೂಕಿನ ಮಾಕಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ರಾಮನರಸಿಂಹರಾಜಪುರ ಗ್ರಾಮ, ರಾಂಪುರ ಗ್ರಾಮ ಪಂಚಯ್ತಿ ವ್ಯಾಪ್ತಿಯ ರಾಂಪುರ ಗ್ರಾಮ, ದಶವಾರ ಗ್ರಾಮ ಪಂಚಯ್ತಿ ವ್ಯಾಪ್ತಿಯ ಶೀರಗುಡ್ಡ ಗ್ರಾಮ, ಕೂಡೂರು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಕೂಡುರು ಗ್ರಾಮ ಮತ್ತು ಸಂತೆಗೋನಹಳ್ಳಿ ದೊಡ್ಡಿ ಗ್ರಾಮ, ಸುಳ್ಳೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಎ.ವಿ.ಹಳ್ಳಿ ಗ್ರಾಮಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸಂಸದರು ಮತ್ತು ಗಣ್ಯರು ಉದ್ಘಾಟಿಸಿದರು. ಸುಳ್ಳೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸುಳ್ಳೇರಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಬಸ್ ತಂಗುದಾಣವೂ ಸಾರ್ವಜನಿಕರ ಸೇವೆ ಸಮರ್ಪಣೆಗೊಂಡಿತು. ವಿವಿಧ ಸೌಲಭ್ಯಗಳ ಉದ್ಘಾಟನೆ ವೇಳೆ ಪ್ರಮುಖರಾದ ಡಾ. ಸುನಿತಾ ಮಹೇಶ್ವರಿ, ಡಾ. ಅರ್ಜುನ್ ಕಲ್ಯಾಣಪುರ್, ದೀಪಿಕಾ ಬೇಡಿ, ಅಶ್ವಿನಿ ಸಿನ್ಹಾ, ಧನಲಕ್ಷ್ಮಿ, ವನಿಶ್ರೀ, ಸುಮಾ, ಅನಿಂದಿತಾ ಚೌಧುರಿ, ಸುರೇಶ್ ಕುಮಾರ್, ಜೆಡಿಎಸ್ ಜಿಲ್ಲಾಧ್ಯಕ್ಷ ಜಯಮುತ್ತು, ಬಿಜೆಪಿ ಜಿಲ್ಲಾಧ್ಯಕ್ಷ ಆನಂದಸ್ವಾಮಿ, ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ನಾಗರಾಜ್, ಎನ್‌ಡಿಎ ಪಕ್ಷದ ಎಲ್ಲಾ ಮುಖಂಡರು ಉಪಸ್ಥಿತರಿದ್ದರು.

---

# ವಿದ್ಯೆ, ವಿವೇಕ ಕಲಿಸಿದ ಗುರುಗಳಿಗೆ ಹಳೆ ವಿದ್ಯಾರ್ಥಿಗಳ ಸನ್ಮಾನ

ಮೈಸೂರು: ಅದು ಅಪರೂಪದ ಕಾರ್ಯಕ್ರಮ. ಹಳೆಯ ವಿದ್ಯಾರ್ಥಿಗಳೆಲ್ಲ ಸೇರಿ ತಮಗೆ ವಿದ್ಯೆ ಮತ್ತು ವಿವೇಕ ಕಲಿಸಿದ ಗುರುಗಳನ್ನು ಸನ್ಮಾನಿಸಿದರು.

ಇದು ನಡೆದುದು; ನಗರದ ಜಯಲಕ್ಷ್ಮಿಪುರಂನ ಶ್ರೀ ಸತ್ಯಸಾಯಿ ಬಾಬಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಇಲ್ಲಿ 1996ರಿಂದ 2004ರ ವರೆಗೆ ಕಲಿತ ವಿದ್ಯಾರ್ಥಿಗಳೆಲ್ಲ ಭಾನುವಾರ ಸೇರಿ 'ಸಾಯಿ ಸ್ನೇಹ ಸಂಗಮ– 2026' ಎಂದು ಕಾರ್ಯಕ್ರಮ ಆಯೋಜಿಸಿ ತಮಗೆ ಕಲಿಸಿದ ಜಿ.ಎಸ್.ಸುಪ್ರಭಾ, ಸಾವಿತ್ರಮ್ಮ, ಪಿ.ಸರೋಜಮ್ಮ, ಮಹಾದೇವಮ್ಮ, ಕಮಲಮ್ಮ ಹಾಗೂ ಶಿವಮೂರ್ತಿ ಅವರನ್ನು ಸನ್ಮಾನಿಸುವ ಮೂಲಕ ಗುರುಭಕ್ತಿಯನ್ನು ವ್ಯಕ್ತಪಡಿಸಿದರು.

ಈಮೂಲಕ ಹಳೆಯ ವಿದ್ಯಾರ್ಥಿಗಳ ಸಮಾಗಮವೂ ಆಯಿತು. ಸೆಲ್ಫಿ ತೆಗೆದುಕೊಂಡರು, ತಮ್ಮ ಗುರುಗಳೊಂದಿಗೆ ಗ್ರೂಪ್ ಫೋಟೋ ತೆಗೆಸಿಕೊಂಡರು. ಅಲ್ಲಿಂದ ತೆರಳುವಾಗ ತಮ್ಮ ಗುರುಗಳ ಕಾಲಿಗೆ ನಮಸ್ಕರಿಸಿದರು.

ಸನ್ಮಾನ ಸ್ವೀಕರಿಸಿದ ಇದೇ ಶಾಲೆಯಲ್ಲಿ 35 ವರ್ಷಗಳವರೆಗೆ ಮುಖ್ಯ ಶಿಕ್ಷಕಿಯಾಗಿದ್ದ, 80



ವರ್ಷ ವಯಸ್ಸಿನ ಜಿ.ಎಸ್.ಸುಪ್ರಭಾ ಮಾತನಾಡಿ, ಕಲಿಸಿದವರನ್ನು ಮರೆಯದೆ ಒಂದೆಡೆ ಸೇರಿ ಗೌರವ ಸಲ್ಲಿಸಿದ್ದು ಮೆಚ್ಚುಗೆ ಆಯಿತು ಎಂದರು.

ನಿವೃತ್ತ ಶಿಕ್ಷಕಿ ಮಹಾದೇವಮ್ಮ ಮಾತನಾಡಿ, ನಿಮ್ಮ ಹೆತ್ತವರನ್ನು ಚೆನ್ನಾಗಿ ನೋಡಿಕೊಳ್ಳಿ ಎಂದು ಸಲಹೆ ನೀಡಿದರು. ಸನ್ಮಾನಿತರಾದ ನಿವೃತ್ತ ಶಿಕ್ಷಕಿ ಸರೋಜಮ್ಮ ಮಾತನಾಡಿ, ನಿಮ್ಮನ್ನು ಗುರುತಿಸಲಾಗಲಿಲ್ಲ. ನಿವೃತ್ತರಾದ ನಮ್ಮನ್ನು ಗುರುತಿಸಿ ಸನ್ಮಾನಿಸಿದ್ದಕ್ಕೆ ಹೆಮ್ಮೆಯಾಯಿತು ಎಂದರು.

ದೈಹಿಕ ಶಿಕ್ಷಣ ಶಿಕ್ಷಕ ಶಿವಮೂರ್ತಿ ಮಾತನಾಡಿ, ನಮ್ಮ ಸಂಬಳ ಹಾಗೂ ಸಂಸಾರ ಕುರಿತು ಚರ್ಚಿಸದೆ ಅಧ್ಯಾಪನ ಕುರಿತು ಚರ್ಚಿಸಿದೆವು. ಪ್ರಾಮಾಣಿಕತೆ ಮತ್ತು ಶ್ರದ್ಧೆಯಿಂದ ಪಾಠ ಮಾಡಿದ್ದಕ್ಕೆ ನೀವು ಗುರುತಿಸಿ ಸನ್ಮಾನಿಸಿದ್ದೀರಿ. ನಿಮ್ಮ ಪ್ರೀತಿ, ವಿಶ್ವಾಸ ಅಗಾಧವಾದುದು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಇದೇ ಶಾಲೆಯ ಹಳೆಯ ವಿದ್ಯಾರ್ಥಿ, ಗಣಿತ ಶಿಕ್ಷಕ ವೈದ್ಯನಾಥ್ ತಮಗೆ ಕಲಿಸಿದ ಬಗೆಯನ್ನು ಸ್ಮರಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಸತ್ಯಸಾಯಿ ಬಾಬಾ ಪಿಯು ಕಾಲೇಜಿನ ಪ್ರಾಂಶುಪಾಲರಾದ ತ್ರಿಮೂರ್ತಿ ಮಾತನಾಡಿ, 2032ರಲ್ಲಿ ಈ ಶಾಲೆಯ ಅಮೃತ ಮಹೋತ್ಸವ. ಇದನ್ನು ಸ್ಮರಣೀಯವಾಗಿಸಲು ಹಳೆಯ ವಿದ್ಯಾರ್ಥಿಗಳ ಸಹಕಾರ ಅಗತ್ಯ ಎಂದರು. ಶಾಲೆಯ ಸಿಬ್ಬಂದಿ ಅಪ್ಪಯ್ಯ ಅಂಕಲ್ ವೇದಿಕೆ ಮೇಲಿದ್ದರು. ಹಳೆಯ ವಿದ್ಯಾರ್ಥಿಗಳಾದ ಆರ್.ಪ್ರಶಾಂತ್, ಡಾ.ನಾಗೇಶ್ ಎಂ., ಭವಾನಿ ಸಾಗರ, ಸುನೀಲಕುಮಾರ್, ಚೇತನಾ ಹಾಗೂ ದೀಪಾ ನೇತೃತ್ವ ವಹಿಸಿದ್ದರು.

# ಸ್ವಸ್ಥ ಮೈಸೂರು ಅಭಿಯಾನಕ್ಕೆ ಚಾಲನೆ




ಮೈಸೂರು:ನಗರದ ಶಾರದಾವಿಲಾಸ ಫಾರ್ಮಸಿ ಕಾಲೇಜಿನಲ್ಲಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಶನ್, ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳು ಹಾಗೂ ಸ್ವಸ್ಥ ಮೈಸೂರು ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಸ್ವಸ್ಥ ಮೈಸೂರು' ಆರೋಗ್ಯ ಜಾಗೃತಿ ಮತ್ತು ಪ್ರಚಾರ ಕಾರ್ಯಕ್ರಮಕ್ಕೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಿದರು.

ಬಳಿಕ ಮಾತನಾಡಿ, ಸಾಂಸ್ಕೃತಿಕನಗರಿ ಮೈಸೂರನ್ನು ರೋಗಮುಕ್ತ ಹಾಗೂ ಆರೋಗ್ಯಕರ ನಗರವನ್ನಾಗಿಸಲು 'ಸ್ವಸ್ಥ ಮೈಸೂರು ಅಭಿಯಾನ' ಮಹತ್ವದ ಹೆಜ್ಜೆಯಾಗಿದೆ. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವುದು ಅತ್ಯಂತ ಅಗತ್ಯವಾಗಿದ್ದು, ವಿದ್ಯಾರ್ಥಿಗಳು ಮತ್ತು ಯುವಜನತೆ ಇಂತಹ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ಸ್ವಸ್ಥ ಮೈಸೂರು ಎಂಬ ಹೆಸರಿನ ಅರ್ಥವೇ ಮೈಸೂರು ನಗರವನ್ನು ಸಂಪೂರ್ಣವಾಗಿ ಆರೋಗ್ಯಕರ ಮತ್ತು ರೋಗ ಮುಕ್ತವಾಗಿಸುವುದಾಗಿದೆ. ಆರೋಗ್ಯ ಜಾಗೃತಿ, ಸ್ವಚ್ಛತೆ, ಉತ್ತಮ ಆಹಾರ ಪದ್ಧತಿ ಹಾಗೂ ನಿಯ ಮಿತ ವ್ಯಾಂ?ಮದ ಮೂಲಕ ಉತ್ತಮ ಜೀವನಶೈಲಿಯನ್ನು ರೂಢಿಸಿಕೊಳ್ಳಬಹುದು ಎಂದು ಹೇಳಿದರು.

ಶಾರದಾವಿಲಾಸ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯಿ, ಸ್ವಸ್ಥ ಮೈಸೂರು ರಾಯಭಾರಿ ಡಾ.ಭರತ್ ಶೆಟ್ಟಿ, ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ವೃದ್ಧಾರೋಗ್ಯ ವಿಭಾಗದ ಮುಖ್ಯಸ್ಥೆ ಡಾ.ಪ್ರತಿಭಾ ಪೆರೇರಾ, ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ಇತರರು ಉಪಸ್ಥಿತರಿದ್ದರು.

# ಮುಖ್ಯರಸ್ತೆ ಕಾಮಗಾರಿಗೆ ಚಾಲನೆ




ಚಾಮರಾಜನಗರ, ನಗರದ ಗುಂಡ್ಲುಪೇಟೆ ವೃತ್ತದಿಂದ ಗಾಳೀಪುರ ಬಡಾವಣೆಗೆ ಸಂಪರ್ಕ ಕಲ್ಪಿಸುವ, ಸೋಮವಾರಪೇಟೆಯಿಂದ ಕರಿನಂಜನಪುರ ಮುಖ್ಯರಸ್ತೆಯ ಗೊಬ್ಬಳಿಮರದವರಗೆ 4 ಕೋಟಿ ರೂ.ವೆಚ್ಚದ ರಸ್ತೆ ಅಭಿವೃದ್ದಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿಪೂಜೆ ನೆರವೇರಿಸಿದರು.

ನಂತರ ಅವರು ಮಾತನಾಡಿ, ಸಿಎಂ ವಿಶೇಷಾನುದಡಿ ಸೋಮವಾರಪೇಟೆಯಿಂದ ಕರಿನಂಜನಪುರ ಮುಖ್ಯರಸ್ತೆಯ ಗೊಬ್ಬಳಿಮರದವರಗೆ ನಗರದ ಗುಂಡ್ಲುಪೇಟೆ ವೃತ್ತದಿಂದ ಗಾಳೀಪುರ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ದಿಯ 2 ಕಾಮಗಾರಿಗಳಿಗೆ 4 ಕೋಟಿ ರೂ.ಮಂಜೂರಾಗಿದೆ. ಈ ಎರಡು ರಸ್ತೆಗಳು ತುಂಬ ಹದಗೆಟ್ಟಿದ್ದು, ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗಿತ್ತು. ಬಡಾವಣೆಗೆ ಭೇಟಿನೀಡಿ, ಪರಿಶೀಲಿಸಿ, ಸುಸಜ್ಜಿತ ರಸ್ತೆ ನಿರ್ಮಾಣ ಕಾಮಗಾರಿಗೆ ಗುದ್ದಲಿಪೂಜೆ ನೆರವೇರಿಸಲಾಗಿದೆ, ವಾರ್ಡಿನ ನಿವಾಸಿಗಳು ಮುಂದೆನಿಂತು, ಗುಣಮಟ್ಟದ ರಸ್ತೆ ನಿರ್ಮಿಸಿಕೊಳ್ಳುವಂತೆ ಸಲಹೆ ನೀಡಿದರು. ನಗರದ ಕುಡಿಯುವ ನೀರಿನ ಸಮಸ್ಯೆ ನೀಗಿಸಲು 143 ಕೋಟಿ ರೂ.ವೆಚ್ಚದಲ್ಲಿ ಟೆಂಡರ್ ಆಗಿದೆ. ಸದ್ಯದಲ್ಲೇ ಕಾಮಗಾರಿ ಆರಂಭವಾಗಲಿದೆ ಎಂದರು. ಈ ಸಂದರ್ಭದಲ್ಲಿ ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಮಾಜಿಅಧ್ಯಕ್ಷರಾದಸಯ್ಯದ್ ರಫಿ, ಸುಹೇಲ್‌ಅಲಿಖಾನ್, ಮುಖಂಡರಾದ ಆಯುಬ್ ಖಾನ್, ಅಫ್ಸರ್ ಅಹಮದ್,ಹೃತಿಕ್ ಅಹಮದ್, ಇಮ್ರಾನ್‌ಅಹಮದ್, ಖಲೀಲ್‌ಉಲ್ಲಾ,. ಮಹಮದ್ ಅಮಿಕ್, ರಿಯಾಜ್, ಇಸ್ರಾರ್ ಅಹಮದ್ ಸೇರಿಂತೆ ಬಡಾವಣೆ ನಿವಾಸಿಗಳು ಹಾಜರಿದ್ದರು.

## ಇಂದು ವಿಶ್ವ ಕ್ಷಯರೋಗ ದಿನಾಚರಣೆ

ಮೈಸೂರು: ರಾಷ್ಟ್ರೀಯ ಕ್ಷಯ ರೋಗ ನಿರ್ಮೂಲನಾ ಕಾರ್ಯಕ್ರಮದಡಿಯಲ್ಲಿ 2026ರ ವಿಶ್ವ ಕ್ಷಯರೋಗ ದಿನಾಚರಣೆಯನ್ನು ಮಾ.24 ರಂದು ಬೆಳಿಗ್ಗೆ 10 ಗಂಟೆಗೆ ನಜರ್‌ಬಾದ್‌ನ ವೈದ್ಯರ ಭವನ




ಎನ್.ಪಿ.ಸಿ. ಆಸ್ಪತ್ರೆ ಆವರಣದಲ್ಲಿ ಆಯೋಜಿಸಲಾಗಿದೆ. ಬೆಳಿಗ್ಗೆ 8 ಗಂಟೆಗೆ ಜಾಥಾ ಪ್ರಾರಂಭವಾಗಿ ಎಸ್.ಪಿ. ಕಛೇರಿ ಸರ್ಕಲ್‌ನಿಂದ ಹೊರಟು ಸಬರ್ಬನ್ ಬಸ್ ನಿಲ್ದಾಣದ ರಸ್ತೆ ಮೂಲಕ ವೈದ್ಯರ ಭವನ, ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜರ್‌ಬಾದ್ ನಲ್ಲಿ ಕೊನೆಗೊಳ್ಳುವುದು. "ಹೌದು, ಭಾರತದ ನೇತೃತ್ವದಲ್ಲಿ, ಜನರ ಶಕ್ತಿಯೊಂದಿಗೆ ನಾವು ಕ್ಷಯರೋಗವನ್ನು ನಿರ್ಮೂಲನೆ ಮಾಡಬಹುದು" ಎಂಬ ಘೋಷ ವಾಕ್ಯದೊಂದಿಗೆ 2026ರ ವಿಶ್ವ ಕ್ಷಯರೋಗ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾ ಕ್ಷಯರೋಗ್ಯ ನಿರ್ಮಾಲನಾಧಿಕಾರಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
**ಅರಣ್ಯ ಇಲಾಖೆ**
ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, "ಅರಣ್ಯ ಭವನ"
ಅಶೋಕಪುರಂ, ಸಾಮಾಜಿಕ ಅರಣ್ಯ ವಿಭಾಗ, ಮೈಸೂರು
ಕಛೇರಿ ಮತ್ತು ಫ್ಯಾಕ್ಸ್ :0821–2484606
ಇ–ಮೇಲ್ :dcfsfmys@yahoo.com
ಕ್ರಸಂ:ಬಿ1/ಬಿಯುಡಿ/ಸಿಆರ್101/2025–26(2026–27) ದಿ:16.03.2026

**ಇ–ಟೆಂಡರ್ ಪ್ರಕಟಣೆ**
**(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಮೈಸೂರು ಸಾಮಾಜಿಕ ಅರಣ್ಯ ವಿಭಾಗ ಹಾಗೂ ವಿಭಾಗ ವ್ಯಾಪ್ತಿಯ ವಲಯಗಳಲ್ಲಿ 2406–101–0826–16– ಸಾಮಾಜಿಕ ಅರಣ್ಯ– 034 ಗುತ್ತಿಗೆ/ಹೊರಗುತ್ತಿಗೆ ಲೆಕ್ಕ ಶೀರ್ಷಿಕೆಯಡಿ ಮಾನವ ಸಂಪನ್ಮೂಲ ಸೇವೆಯನ್ನು **ದಿ: 01.04.2026 ರಿಂದ 31.03.2027 ರವರೆಗೆ** (12 ತಿಂಗಳ ಅವಧಿಗೆ) ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ, ಮೈಸೂರು ರವರ ಕಛೇರಿ, ಹಾಗೂ ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಗೊಳಪಡುವ ಮೈಸೂರು/ ನಂಜನಗೂಡು/ಟಿ.ನರಸಿಪುರ/ಪಿರಿಯಾಪಟ್ಟಣ/ಹುಣಸೂರು/ಹೆಚ್.ಡಿ.ಕೋಟೆ ಹಾಗೂ ಕೆ.ಆರ್.ನಗರ ವಲಯ ಅರಣ್ಯಾಧಿಕಾರಿಗಳ ಕಛೇರಿಗಳು ಸೇರಿದಂತೆ 11 ಮಂದಿ ಗಣಕಯಂತ್ರ ನಿರ್ವಾಹಕರು (ಡಾಟ ಎಂಟ್ರಿ ಆಪರೇಟರ್) 2 ಮಂದಿ ಲಿಪಿಕ ಸಹಾಯಕರು, 2 ಮಂದಿ ವಾಹನ ಚಾಲಕರು, 8 ಮಂದಿ ಕಾವಲುಗಾರರು ಹಾಗೂ 1 ಸಂಖ್ಯೆ ಶುಚಿಗಾರರು ಸೇರಿದಂತೆ ಒಟ್ಟಾರೆ 24 ಮಂದಿ ನೌಕರರನ್ನು ಹೊರಸಂಪನ್ಮೂಲ ಗುತ್ತಿಗೆದಾರರು/ಸಂಸ್ಥೆಯವರಿಂದ ಪಡೆಯಲು ಅರ್ಹಗುತ್ತಿಗೆದಾರರು/ ಸಂಸ್ಥೆಯಿಂದ ನಿಬಂಧನೆಗಳನ್ನೊಳಗೊಂಡಂತೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://Kppp.karnataka.gov.in ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ಸ್ವೀಕರಿಸಲು ಮೊದಲನೇ **ದಿ: 30.03.2026**ರ ಅಪರಾಹ್ನ 04.00 ಘಂಟೆಯ ವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಇ–ಟೆಂಡರನ್ನು **ದಿ: 01.04.2026** ರಂದು ಪೂರ್ವಾಹ್ನ 11.00 ಘಂಟೆಗೆ ತೆರೆಯಲಾಗುವುದು. ಮೇಲ್ಕಂಡ ದಿನದಂದು ಸದರಿ ಇ–ಟೆಂಡರ್‌ನಲ್ಲಿ ಯಾರು ಭಾಗವಹಿಸದಿದ್ದಲ್ಲಿ ಹೊರಗುತ್ತಿಗೆ ಸಂಬಂಧ ಎರಡನೇ ಬಾರಿಗೆ ಇ–ಟೆಂಡರ್ ಸ್ವೀಕರಿಸಲು ದಿ: 08.04.2026ರ ಅಪರಾಹ್ನ 4.00 ಘಂಟೆಯವರೆಗೆ ಕಡೆಯ ದಿನಾಂಕವಾಗಿದ್ದು ಮರು ಟೆಂಡರ್ ಸಂಬಂಧ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ. ಇತರೆ ಹೆಚ್ಚಿನ ಮಾಹಿತಿಗಳನ್ನು http://Kppp.karnataka.gov.in ವೆಬ್‌ಸೈಟ್‌ನಲ್ಲಿ ಹಾಗೂ ಸದರಿ ಕಛೇರಿಯಿಂದ ಕರ್ತವ್ಯ ದಿನಗಳಂದು ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಮೈಸೂರು
DIPR/DDMYS/1849/KSMCA/1048/2025-26

# ಉಪ್ಪಾರದವರು ಶಿಕ್ಷಣಕ್ಕೆ ಒತ್ತು ನೀಡಿ

## ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ । ವಾರ್ಷಿಕ ಪ್ರತಿಭಾ ಪುರಸ್ಕಾರ, ನಿವೃತ್ತ ನೌಕರರ ಸನ್ಮಾನ

ಮೈಸೂರು: ಉಪ್ಪಾರ ಸಮಾಜದವರು ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆಯನ್ನು ನೀಡಬೇಕೆಂದು ಚಾಮರಾಜನಗರ ಕ್ಷೇತ್ರದ ಶಾಸಕ ಸಿ.ಪುಟ್ಟರಂಗಶೆಟ್ಟಿ ಕರೆ ನೀಡಿದರು.

ಅವರು ನಗರದ ಕರ್ನಾಟಕ ಕಲಾಮಂದಿರದಲ್ಲಿ ಜಿಲ್ಲಾ ಉಪ್ಪಾರ ನೌಕರರ ಹಾಗೂ ವೃತ್ತಿಪರರ ಸಂಘದ ವತಿಯಿಂದ ಆಯೋಜಿಸಿದ್ದ ಸಂಘದ 30ನೇ ವಾರ್ಷಿಕ ಪ್ರತಿಭಾ ಪುರಸ್ಕಾರ, ವಿವಿಧ ಕ್ಷೇತ್ರಗಳ ಸಾಧಕರು ಮತ್ತು ಬಡ್ತಿ ಹೊಂದಿದ ಹಾಗೂ ನಿವೃತ್ತ ನೌಕರರ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ವಿದ್ಯೆ ಇಲ್ಲದೆ ಇದ್ದರೆ ಸಮಾಜದಲ್ಲಿ ಏನನ್ನು ಸಾಧಿಸಲು ಆಗದು. ಸಮಾಜದವರು ತಮ್ಮ ಮಕ್ಕಳುಗಳಿಗೆ ಕಡ್ಡಾಯವಾಗಿ ಶಿಕ್ಷಣವನ್ನು ಕೊಡಿಸುವ ಮೂಲಕ ವಿದ್ಯಾವಂತರನ್ನಾಗಿ ಮಾಡಬೇಕು ಜೊತೆಗೆ ಉತ್ತಮ ಸಂಸ್ಕಾರವನ್ನು ಕಲಿಸಿ ಈ ನಾಡಿಗೆ ಉತ್ತಮ ಪ್ರಜೆಯನ್ನು ನೀಡಬೇಕು ಎಂದರು.

ಸಮುದಾಯದಲ್ಲಿ ಇದುವರೆಗೂ ಒಬ್ಬರೂ ಕೂಡ ಐಎಎಸ್ ಮಾಡಿರುವ ವ್ಯಕ್ತಿಗಳಿಲ್ಲ ಸಮಾಜದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುವ ಮೂಲಕ ಉನ್ನತ ವಿದ್ಯಾಭ್ಯಾಸವನ್ನು ಮಾಡಿ ಉನ್ನತ ಮಟ್ಟದ ಅಧಿಕಾರಿಗಳಾಗುವಂತೆ ಮಾಡಬೇಕು ಎಂದರು.

ಸಮಾಜದ ಸಂಘಟನೆಗಳು ಸಮುದಾಯದ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಮಾಡಬೇಕು. ಆ ಮೂಲಕ ಸಮುದಾಯದವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು ಎಂದು ಕರೆ ನೀಡಿದರು. ಸಮಾಜದವರು ಸರ್ವರೂ ಒಗ್ಗಟ್ಟಿನಿಂದ ಸಂಘ ಟನೆಯನ್ನು ಕಟ್ಟುವ ಮೂಲಕ ಸಮಾಜವನ್ನು ಕಟ್ಟು ವಂತಹ ಕೆಲಸವನ್ನು ಪ್ರಾಮಾಣಿಕವಾಗಿ ಸರ್ವರು ಮಾಡಬೇಕು ಎಂದರು.

ಈ ಸಂದರ್ಭದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರು ಬೆಂಗಳೂರಿನ ಶ್ರೀ ಭಗೀರಥ ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್ ಗೆ 10 ಲಕ್ಷದ ಒಂದು ಸಾವಿರದ ಒಂದು ರೂಗಳನ್ನು ನೀಡಿ ಟ್ರಸ್ಟಿನ ಮಹಾ ಪ್ರಧಾನ ಪೋಷಕರಾಗುವುದರ ಜೊತೆಗೆ ಪ್ರತಿಭಾವಂತ 11 ವಿದ್ಯಾರ್ಥಿಗಳಿಗೆ ವೈಯಕ್ತಿಕವಾಗಿ ಕೈ ಗಡಿಯಾರಗಳನ್ನು ಉಡುಗೊರೆಯಾಗಿ ನೀಡಿದರು.

ಕಾರ್ಯಕ್ರಮದಲ್ಲಿ ಅಯ್ಯನ ಸರಗೂರು ಮಠದ ಶ್ರೀ ಮಹದೇವಸ್ವಾಮಿಗಳು, ಜಿ.ಎಸ್.ಟಿ ಅಫೀಲು ನ್ಯಾಯಾಧಿಕರಣದ ತಾಂತ್ರಿಕ ಸದಸ್ಯ ಡಿ.ಜಗನ್ನಾಥ್ ಸಾಗರ್, ಸಂಘದ ಅಧ್ಯಕ್ಷ ಎಂ.ರಾಮಚಂದ್ರ, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಕರಳಾಪುರ ನಾಗರಾಜು, ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಉಪ್ಪಾರ ಸಂಘದ ಗೌರವಾಧ್ಯಕ್ಷ ಹನುಮಂತಶೆಟ್ಟಿ, ಕಾರ್ಯಾಧ್ಯಕ್ಷ ಪಿ.ಎಸ್.ವಿಷಕಂಠಯ್ಯ, ಉದ್ಯಮಿ ಗಂಗಯ್ಯ, ಉಪ್ಪಾರ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಶಿವಕುಮಾರ್, ಸಾಹಿತಿ ಸರಸ್ವತಿ ಚಿಮ್ಮಲಗಿ, ಮುಖಂಡರುಗಳಾದ ಎ.ಟಿ.ಸೋಮಶೇಖರಪ್ಪ, ಕೆ.ಟಿ.ಮೋಹನ್ ಕುಮಾರ್, ಡಾ.ಎಂ.ಗೋವಿಂದರಾಜು, ಕಳಸೇಗೌಡ, ಫಿಲಂಮಹದೇವಶೆಟ್ಟಿ, ಎಂ.ಸೋಮಣ್ಣ, ಲಿಂಗಣ್ಣ, ವಿನೋದ್ ಉಪ್ಪಾರ, ಕನಕನಗರ ಮಹದೇವ, ಜಯಕುಮಾರ್, ಜವರಶೆಟ್ಟಿ, ಹೆಮ್ಮರಗಾಲಸೋಮಣ್ಣ, ಕೆ.ಎಂ.ಶಿವಕುಮಾರಸ್ವಾಮಿ, ನಂಜುಂಡಸ್ವಾಮಿ, ಡಾ.ಅಜಯ್ ಕುಮಾರ್, ಟಿ.ಎನ್.ಶಿವರಾಜ್, ಮಹದೇವ್, ಮಾಗಳಿರಾಮೇಗೌಡ, ಶಿವಣ್ಣ, ಸೋಮಶೇಖರ್, ಮಲ್ಲೇಶ್, ಮಲ್ಲಶೆಟ್ಟಿ, ಸಿದ್ದರಾಜು, ಗೌರಮ್ಮ, ವಿಜಯಲಕ್ಷ್ಮಿ, ಮಮತಾ ಬ್ಯಾನರ್ಜಿ, ಗೀತಾ, ಸೋಮು ಸೇರಿದಂತೆ ಹಲವರು ಇದ್ದರು.



## ಶಿಕ್ಷಣ, ಸಂಘಟನೆ, ಹೋರಾಟ ಅತ್ಯಂತ ಅವಶ್ಯ

ಭಗೀರಥ ಪೀಠದ ಡಾ.ಪುರುಷೋತ್ತಮಾನಂದ ಪುರಿ ಸ್ವಾಮೀಜಿಗಳು ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಹಿಸಿ ಮಾತನಾಡಿ ಹಿಂದುಳಿದ ವರ್ಗಗಳು ಅಭಿವೃದ್ಧಿಯತ್ತ ಸಾಗಬೇಕಾದರೆ ಶಿಕ್ಷಣ, ಸಂಘಟನೆ ಹಾಗೂ ಹೋರಾಟ ಅತ್ಯಂತ ಅವಶ್ಯಕವಾಗಿದೆ ಎಂದರು. ಸಮಾಜದ ವಿದ್ಯಾರ್ಥಿಗಳು ಉನ್ನತ ಮಟ್ಟದ ವಿದ್ಯಾಭ್ಯಾಸವನ್ನು ಮಾಡಲು ಅನುಕೂಲವಾಗುವಂತೆ ಬೆಂಗಳೂರು ಸೇರಿದಂತೆ ವಿವಿಧ ಭಾಗಗಳಲ್ಲಿ ವಿದ್ಯಾ ಸಂಸ್ಥೆಗಳನ್ನು ಹಾಗೂ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಗುರಿಯನ್ನು ಹೊಂದಲಾಗಿದೆ ಎಂದರು. ರಾಜ್ಯ ಸರ್ಕಾರವು ಉಪ್ಪಾರ ಸಮಾಜದ ಬಗ್ಗೆ ಮಾಡಿರುವ ಕುಲಶಾಸ್ತ್ರೀಯ ಅಧ್ಯಯನದ ವರದಿಯನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡುವಂತೆ ಹಾಗೂ ಸಮುದಾಯಕ್ಕೆ ಹೆಚ್ಚಿನ ಮೀಸಲಾತಿಯನ್ನು ನೀಡಬೇಕೆಂದು, ಸಮುದಾಯದವರಿಗೆ ವಿಧಾನ ಪರಿಷತ್ ನಲ್ಲಿ ಅವಕಾಶ ಮಾಡಿಕೊಡುವುದು ಸೇರಿದಂತೆ ಸಮುದಾಯದ ಹಲವು ಬಹುದಿನಗಳ ಬೇಡಿಕೆಗಳನ್ನು ಸರ್ಕಾರವು ಈಡೇರಿಸಬೇಕೆಂದ ಸ್ವಾಮಿಗಳು ಇದಕ್ಕಾಗಿ ಗುರುಪೀಠ ಹಾಗೂ ಸಮಾಜದ ಸಂಘಟನೆಗಳು ಮಾಡುವ ಕಾರ್ಯಕ್ಕೆ ಸಮಾಜದ ಬಂಧುಗಳು ಕೈಜೋಡಿಸಬೇಕೆಂದು ಕರೆ ನೀಡಿದರು.

## ಶ್ರೀ ಭಗೀರಥ ವಿದ್ಯಾರತ್ನ ಪ್ರಶಸ್ತಿ ಪ್ರದಾನ

ಎಸ್ ಎಸ್ ಎಲ್ ಸಿ ವಾರ್ಷಿಕ ಪರೀಕ್ಷೆಯಲ್ಲಿ ರಾಜ್ಯಕ್ಕೆ ಮೂರನೇ ರಾಂಕ್ ಪಡೆದ ಜೆ.ಪೂಜಿತಗೆ ಶ್ರೀ ಭಗೀರಥ ವಿದ್ಯಾರತ್ನ ಪ್ರಶಸ್ತಿ ಪ್ರದಾನ ಮಾಡಿ, ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದಿರುವ ಮೈಸೂರು, ಚಾಮರಾಜನಗರ, ಮಂಡ್ಯ ಹಾಗೂ ಕೊಡಗು ಜಿಲ್ಲೆಗಳ ಸುಮಾರು 250ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು ಹಾಗೂ ನಿವೃತ್ತ ಮತ್ತು ಬಡ್ತಿ ಹೊಂದಿದ ನೌಕರರು, ವಿವಿಧ ಕ್ಷೇತ್ರಗಳ ಸಾಧಕರುಗಳನ್ನು ಸನ್ಮಾನಿಸಲಾಯಿತು.

**ನಗರಸಭಾ ಕಾರ್ಯಾಲಯ, ಹೂಟಗಳ್ಳಿ**
ರೋಟರಿ ಶಾಲೆ ಹತ್ತಿರ, ಕೆ. ಹೆಚ್.ಬಿ. ಕಾಲೋನಿ ಹೂಟಗಳ್ಳಿ, ಮೈಸೂರು ಜಿಲ್ಲೆ–570018
ಸಹಾಯವಾಣಿ ಸಂಖ್ಯೆ : 0821–2001737, E-Mail: ka.hootagalli.cmc@gmail.com
ಸಂಖ್ಯೆ: ನಸಹೂ/ತಾಂತ್ರಿಕ/ಟೆಂಡರ್ ಪ್ರಕಟಣೆ/ಸಿ.ಆರ್.12/2025–26 ದಿನಾಂಕ: 23.03.2026

**ಟೆಂಡರ್ ಪ್ರಕಟಣೆ**

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ 2026–27ನೇ ಸಾಲಿನ ನಗರಸಭಾ ನಿಧಿಯಡಿ ನೀರು ಸರಬರಾಜು, ಬೀದಿ ದೀಪ ನಿರ್ವಹಣೆ ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳ ಸೇವೆಯನ್ನು ಪಡೆಯುವ ಟೆಂಡರ್‌ಗಳನ್ನು ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ **Standard Bid Documents** ನಿಯಮದಂತೆ **KPP** ಪೋರ್ಟಲ್ ಮೂಲಕ ಟೆಂಡರ್ ಕರೆಯಲಾಗಿದ್ದು, ಲೋಕೋಪಯೋಗಿ ಇಲಾಖೆಯ ಅರ್ಹ ನೊಂದಾಯಿತ ಸಿವಿಲ್ ಹಾಗೂ ವಿದ್ಯುತ್ ಗುತ್ತಿಗೆದಾರರು ಮತ್ತು ನೊಂದಾಯಿತ ಎಜೆನ್ಸಿದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್‌ಗಳನ್ನು **https://kppp.karnataka.gov.in** ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ:07.04.2026 ಸಂಜೆ 5.30 ಗಂಟೆಯವರೆಗೆ**, ಟೆಂಡರ್ ತೆರೆಯುವ **ದಿನಾಂಕ:09.04.2026ರ ಬೆಳಗ್ಗೆ 10.30 ಗಂಟೆಗೆ** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರ್‌ನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ ಹಾಗೂ ಜಿ.ಎಸ್.ಟಿ.ಯನ್ನು ಪ್ರತ್ಯೇಕವಾಗಿ ಪಾವತಿಸಲಾಗುವುದು.

| ಕ್ರ. ಸಂ. | ಇಂಡೆಂಟ್ ವಿವರಗಳು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) | ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) |
|---|---|---|---|
| 01 | DMA/2025-26/SE7540 | 45.00 | 76,500/- |
| 02 | DMA/2025-26/SE7541 | 26.00 | 50,000/- |
| 03 | DMA/2025-26/SE7542 | 46.00 | 77,800/- |
| 04 | DMA/2025-26/SE7543 | 40.00 | 68,000/- |
| 05 | DMA/2025-26/SE7544 | 47.37 | 80,300/- |
| 06 | DMA/2025-26/SE7545 | 47.20 | 80,000/- |
| 07 | DMA/2025-26/SE7546 | 44.90 | 76,000/- |
| 08 | DMA/2025-26/SE7547 | 14.70 | 36,750/- |
| 09 | DMA/2025-26/SE7548 | 36.70 | 73,400/- |
| 10 | DMA/2025-26/SE7549 | 10.10 | 25,250/- |

ಸಹಿ/– ಪೌರಾಯುಕ್ತರು
ನಗರಸಭೆ, ಹೂಟಗಳ್ಳಿ
ವಾಸಾಸಂಇ/ಮೈಸೂರು/ಶಿರಡಿಸಾಯಿ/1865/2025–26

# ಸಮಾನತೆಯ ತತ್ವ ಸಾರಿದ ದಾಸಿಮಯ್ಯ



ಮೈಸೂರು: ದೇವರ ದಾಸಿಮಯ್ಯ ಶರಣರ ಕಾಯಕ ನಿಷ್ಠೆ ಮತ್ತು ಸಮಾನತೆಯ ತತ್ವ ಸಾರಿದ ಶರಣ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಕರ್ನಾಟಕ ಕಲಾಮಂದಿರದಲ್ಲಿ ಆಯೋಜಿಸಲಾಗಿದ್ದ ದೇವರ ದಾಸಿಮಯ್ಯ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು. ದಾಸಿಮಯ್ಯನವರು ಬಸವಣ್ಣನವರಿಗಿಂತ ಸುಮಾರು 200 ವರ್ಷಗಳ ಹಿಂದೆ, ಅಂದರೆ ಹತ್ತನೇ ಶತಮಾನದಲ್ಲಿ ಶಿವಪುರ ಗ್ರಾಮದಲ್ಲಿ ಜನಿಸಿದರು. ಇವರು ಕರ್ನಾಟಕದ ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಒಂದು ಕಡೆ ದೈವಭಕ್ತಿ ಹಾಗೂ ಶ್ರದ್ಧೆಯಿದ್ದರೆ, ಮತ್ತೊಂದೆಡೆ ಕಾಯಕದಲ್ಲಿ (ನೇಯ್ಗೆ) ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಿದ್ದರು. ಇತರ ದೇಶಗಳಿಗೆ ಹೋಲಿಸಿದರೆ ಭಾರತವು ಅತ್ಯಂತ ವಿಶೇಷವಾದ ದೇಶವಾಗಿದೆ. ಇದಕ್ಕೆ ಕಾರಣ ಇಲ್ಲಿನ ಸುದೀರ್ಘ ಧಾರ್ಮಿಕ ಹಿನ್ನೆಲೆ ಮತ್ತು ವೈವಿಧ್ಯಮಯ ಸಂಸ್ಕೃತಿ. ಭಾರತದಲ್ಲಿ ವಿವಿಧ ಜಾತಿ, ಧರ್ಮಗಳಿದ್ದರೂ ನಾವೆಲ್ಲರೂ 'ವಿವಿಧತೆಯಲ್ಲಿ ಏಕತೆ'ಯನ್ನು ಕಾಣುತ್ತೇವೆ. ಭಾಷೆ ಅಥವಾ ಜನಾಂಗದ ಆಧಾರದ ಮೇಲೆ ನಾವು ವಿಭಜಿತರಾಗಿ ಕಂಡರೂ, ದೇಶದ ಹಿತದೃಷ್ಟಿಯಿಂದ ನಾವೆಲ್ಲರೂ ಸಂಘಟಿತರಾಗಿದ್ದೇವೆ ಎಂಬುದು ವಿದೇಶಿಯರಿಗೆ ನಾವು ನೀಡುವ ಸಂದೇಶವಾಗಿದೆ," ಎಂದು ತಿಳಿಸಿದರು. ಜೆ.ಎಸ್.ಎಸ್. ಪಬ್ಲಿಕೇಷನ್ ಕೌನ್ಸಿಲ್ ಮುಖ್ಯಸ್ಥ ಪ್ರೊ.ಮೊರಬದ ಮಲ್ಲಿಕಾರ್ಜುನ ಮಾತನಾಡಿದರು. ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯ ಶ್ರೀ ಸ್ವಾಮಿ ಮಹಮೇದಾನಂದ ಸಾನಿಧ್ಯವಹಿಸಿ ಆಶೀರ್ವಚನ ನೀಡಿದರು. ಕರ್ನಾಟಕ ರಾಜ್ಯ ನೇಕಾರರ ಸಂಘ ಒಕ್ಕೂಟದ ಅಧ್ಯಕ್ಷರಾದ ಬಿ.ಎಸ್.ಸೋಮಶೇಖರ್, ಕರ್ನಾಟಕ ರಾಜ್ಯ ನೇಕಾರರ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷರಾದ ಎಂ.ಡಿ. ಲಕ್ಷ್ಮೀನಾರಾಯಣ, ನೇಕಾರ ಒಕ್ಕೂಟದ ಗೌರವಾನ್ವಿತ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಮಹಿಳಾ ಒಕ್ಕೂಟದ ಅಧ್ಯಕ್ಷೆ ಮಂಜುಳಾ, ಉಪಸ್ಥಿತರಿದ್ದರು.

# ಮಾದಕ ವಸ್ತು ಪ್ರಕರಣ: ನಾಲ್ವರಿಗೆ ಶಿಕ್ಷೆ

ರಾಮನಗರ: ಮಾದಕ ವಸ್ತುಗಳನ್ನು ಸಂಗ್ರಹಿಸಿದ್ದ ಆರೋಪಿಗಳ ವಿರುದ್ಧದ ಆರೋಪಗಳು ಸಾಭೀತಾದ್ದರಿಂದ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ನಾಲ್ವರು ಆರೋಪಿಗಳಿಗೆ ಕಾರಾಗ್ರಹ ಶಿಕ್ಷೆ ಮತ್ತು ದಂಡ ವಿಧಿಸಿ ತೀರ್ಪು ನೀಡಿದೆ.

2019ರಲ್ಲಿ ನಗರದ ಐಜೂರು ಪೊಲೀಸ್ ಠಾಣೆ ವ್ಯಾಪ್ತಿಯ ಹನುಮಂತನಗರದ ರಾಯರ ದೊಡ್ಡಿ ರಸ್ತೆಯಲ್ಲಿರುವ ಮನೆಯೊಂದರಲ್ಲಿ ಮಾದಕ ವಸ್ತುಗಳ ಸಂಗ್ರಹ ಇರುವುದಾಗಿ ಐಜೂರ ಠಾಣೆಯ ಪೊಲೀಸರಿಗೆ ಮಾಹಿತಿ ದೊರೆತಿತ್ತು. ಈ ಹಿನ್ನೆಲೆಯಲ್ಲಿ ದಾಳಿ ನಡೆಸಿದಾಗ ಸುಮಾರು 44 ಕೆಜಿ ತೂಕದ ಮಾದಕ ವಸ್ತುಗಳು ಪತ್ತೆಯಾಗಿತ್ತು. ಪೊಲೀಸರು ಈ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡು, ನಾಲ್ವರು ಆರೋಪಿಗಳ ವಿರುದ್ಧ ಪ್ರಕರಣವನ್ನು ದಾಖಲಿಸಿಕೊಂಡಿದ್ದರು.

ಪ್ರಕರಣದ ತನಿಖೆ ನಡೆಸಿದ ಪೊಲೀಸರು, ನಂತರ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದರು. ವಿಚಾರಣೆ ನಡೆಸಿದ ರಾಮನಗರದ ಪ್ರಧಾನ ಜಿಲ್ಲಾ ಮತ್ತು ಸತ್ರ ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಂ.ಹೆಚ್ ಅಣ್ಣಯ್ಯನವರರು ತೀರ್ಪು ಪ್ರಕಟಸಿದ್ದಾರೆ. ಆರೋಪಿಗಳಾದ ಐಜೂರು ನಿವಾಸಿ ಸಿದ್ದಿಕ್ ಬಿನ್ ಸೈಯದ್ ಮೊಹದಿನ್, ಹನುಮಂತನಗರ ನಿವಾಸಿ ಬೈರೇಗೌಡ ಬಿನ್ ನಿಂಗಪ್ಪ, ಕೊಡಗು ಜಿಲ್ಲೆಯ ವಿರಾಜಪೇಟೆಯ ಕಲ್ಲುಬಾಳೆ ನಿವಾಸಿ ಮೊಹಮದ್ ಅಲಿ ಬಿನ್ ಅಬ್ಬು , ಮಂಡ್ಯ ಜಿಲ್ಲೆ, ಮಳವಳ್ಳಿಯ ಕಲ್ಕುಣಿ ಗ್ರಾಮದ ಮೊಹಮ್ಮದ್ ಇಸ್ಮಾಯಿಲ್ ಇವರುಗಳ ವಿರುದ್ಧ ಆರೋಪ ಸಾಬೀತು ಆದ ಹಿನ್ನೆಲೆಯಲ್ಲಿ, ಆರೋಪಿಗಳಿಗೆ 10 ವರ್ಷ ಕಾರಗೃಹ ಶಿಕ್ಷೆ ಮತ್ತು ತಲಾ ಒಂದು ಲಕ್ಷ ರೂ ದಂಡವನ್ನು ವಿಧಿಸಿ ಆದೇಶ ಹೊರೆಡಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಸರ್ಕಾರದ ಪರವಾಗಿ ಸರ್ಕಾರಿ ವಕೀಲರಾದ ವಸಂತಿ ಅಂಗಡಿ ವಾದ ಮಂಡಿಸಿದ್ದರು. ಶುಭಾಂಬಿಕ ಅವರು ತನಿಖಾದಿಕಾರಿಯಾಗಿದ್ದರು, ಸಿಪಿಐ ನರಸಿಂಹ ಮೂರ್ತಿ, ಪಿ.ಎಸ್.ಐ ಜಾರ್ಜ್ ಪ್ರಕಾಶ್, ಸಿಬ್ಬಂದಿಗಳಾದ ಲೋಕೇಶ್ (ಎಚ್.ಸಿ. 59), ಶಿವಕುಮಾರ್ (ಪಿಸಿ–47), ಪ್ರಸನ್ನ (ಪಿಸಿ 554) ಅವರುಗಳು ನ್ಯಾಯಾಲಯದ ವಿಚಾರಣಾ ಪ್ರಕ್ರಿಯೆಗಳಲ್ಲಿ ನಿಗಾವಹಿಸಿ, ಆರೋಪಿಗಳಿಗೆ ಶಿಕ್ಷ ಕೊಡಿಸುವಲ್ಲಿ ಶ್ರಮಿಸಿದ್ದಾರೆ.

## ಜಿಲ್ಲೆಯಿಂದ 10 ಸಾವಿರ ಬಲಗೈ ಸಮುದಾಯದವರು ಭಾಗಿ – ಸಿ.ಎಂ. ಕೃಷ್ಣಮೂರ್ತಿ

# ಒಳ ಮೀಸಲಾತಿ ವಿರೋಧಿಸಿ: ಬೆಂಗಳೂರಿನಲ್ಲಿ ಮಾ.25ರಂದು ಬೃಹತ್ ರ್‍ಯಾಲಿ



ಚಾಮರಾಜನಗರ, ರಾಜ್ಯ ಸರ್ಕಾರ ಜಾರಿ ಮಾಡಿರುವ ಒಳ ಮೀಸಲಾತಿ ಬಲಗೈ ಸಮುದಾಯದ ವಿರೋಧಿಯಾಗಿದ್ದು, ಇದನ್ನು ವಿರೋಧಿ ಬಲಗೈ ಸಮುದಾಯದ ಒಕ್ಕೂಟದಿಂದ ಮಾ. 25 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಜಿಲ್ಲೆಯಿಂದ 10 ಸಾವಿರಕ್ಕು ಹೆಚ್ಚು ಮಂದಿ ಭಾಗವಹಿಸಲಿದ್ದಾರೆ ಎಂದು ಡಾ. ಅಂಬೇಡ್ಕರ್ ಮಹಾಸಭಾದ ಗೌರವ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ. ನಾಗಮೋಹನ್ ದಾಸ್ ಅವರ ವರದಿಯೇ ಅವೈಜ್ಞಾನಿಕವಾಗಿದ್ದು, ಸಮೀಕ್ಷೆ ಹಾಗೂ 101 ಜಾತಿಗಳ ನಿಖರವಾದ ಜಾತಿಗಳ ಮಾಹಿತಿಯನ್ನು ಸಂಗ್ರಹಿಸುವಲ್ಲಿ ವಿಫಲರಾಗಿದ್ದಾರೆ. 2025ರ ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆಯಂತೆ ಜಾತಿ ಪ್ರಮಾಣ ಪತ್ರಗಳನ್ನು ಪ್ರವರ್ಗ ಎ, ಬಿ, ಮತ್ತು ಸಿ ಎಂದು ವರ್ಗೀಕರಿಸಿರುವುದನ್ನು ಹಿಂಪಡೆದು ಮೂಲ ಜಾತಿಗಳನ್ನು ನಮೂದಿಸಿ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಸೂಕ್ತ ಆದೇಶ ಹೊರಡಿಸುವುದು ಎಂದು ಸರಿಯಲ್ಲ ಎಂದರು.

ಬಲಗೈ ಸಮುದಾಯದ ಮರಣ ಶಾಸನವಾಗಿರುವ ಒಳ ಮೀಸಲಾತಿಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ಅಧ್ಯಕ್ಷರಾದ ಶ್ರೀ ಜ್ಞಾನ ಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಸಮಾವೇಶ ನಡೆಯಲಿದ್ದು, ಈ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಲಗೈ ಸಮುದಾಯದ ಬಂಧುಗಳು ಭಾಗವಹಿಸಬೇಕು ಎಂದು ಕೃಷ್ಣಮುರ್ತಿ ಮನವಿ ಮಾಡಿದರು.

ಗೋಷ್ಠಿಯಲ್ಲಿ ಮಹಾಸಭಾದ ಅಧ್ಯಕ್ಷ ಉಮೇಶ್ ಕುದರ್, ಪ್ರಧಾನ ಕಾರ್ಯದರ್ಶಿ ಗಣೇಶ್ ಪ್ರಸಾದ್,ಮುಖಂಡರಾದ ರಾಮಸಮುದ್ರ ಬಾಬು, ಹೊಂಡರಬಾಳು ವಾಸು,ಸಿದ್ದರಾಜು, ರಂಗಸ್ವಾಮಿ, ಇತರರು ಹಾಜರಿದ್ದರು.

## ಒಳ ಮೀಸಲಾತಿ ಜಾರಿಗೆ ಬಲಗೈ ಸಚಿವರೇ ಕಾರಣ

ಡಾ. ಬಿ.ಆರ್. ಅಂಬೇಡ್ಕರ್ ಮಹಾಸಭಾದ ಕಾರ್ಯಾಧ್ಯಕ್ಷ ಸಿ.ಕೆ. ಮಂಜುನಾಥ್ ಮಾತನಾಡಿ, ಒಳ ಮೀಸಲಾತಿ ಎಂಬುವುದು ಸಂವಿಧಾನದಲ್ಲಿ ಇಲ್ಲ. ಇದೊಂದು ಅವೈಜ್ಞಾನಿಕವಾಗಿದ್ದು, ಇದರ ಬಗ್ಗೆ ಮಾಹಿತಿ ಕೊಡುವಲ್ಲಿ ಹಾಗೂ ಒಳಮೀಸಲಾತಿಯನ್ನು ತಡೆಯಲ್ಲಿ ಬಲಗೈ ಸಮುದಾಯದ ಸಚಿವರೇ ವಿಫಲರಾಗಿದ್ದು, ಬಲಗೈ ಸಮುದಾಯಯ ಸಚಿವರು ವಾಸ್ತಾಂಶವನ್ನು ತಿಳಿದುಕೊಳ್ಳುವ ಸೋತಿದ್ದಿದ್ದು, ಇದರಿಂದ ಬಲಗೈ ಸಮುದಾಯಕ್ಕೆ ಅನ್ಯಾಯವಾಗುತ್ತಿದೆ ಎಂದರು. ಒಳ ಮೀಸಲಾತಿಯನ್ನು ಜಾರಿ ಮಾಡುತ್ತೇವೆ ಎಂದು ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಪ್ರಣಾಳಿಕಯಲ್ಲಿ ಸೇರಿತ್ತು. ಈ ಸಂದರ್ಭದಲ್ಲಿ ಪ್ರಣಾಳಿಕೆಯ ಸಮಿತಿಯ ಅಧ್ಯಕ್ಷರಾಗಿ ಪರಮೇಶ್ವರ ಅವರು ಇದ್ದರು. ಜೊತೆಗೆ ಸಮಿತಿಯಲ್ಲಿ ಬಲಗೈ ಸಚಿವರಾಗಿರುವ ಡಾ.ಎಚ್.ಸಿ. ಮಹದೇವಪ್ಪ, ಪ್ರಿಯಾಂಗ್ ಖರ್ಗೆ ಅವರು ಇದ್ದರು. ಆ ಸಂದರ್ಭದಲ್ಲಿಯೇ ಇದನ್ನು ತಡೆದಿದ್ದರೆ ಇಷ್ಟೊಂದು ಸಮಸ್ಯೆಯಾಗುತ್ತಿರಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಬಲಗೈ ವಿರೋಧಿಯಾಗಿದ್ದು, ಒಳ ಮೀಸಲಾತಿ ಜಾರಿ ಯಾಗಿ ಮೂರು ತಿಂಗಳಾಗಿದೆ. ಎಲ್ಲಾ ಇಲಾಖೆಯಲ್ಲಿ ಒಳ ಮೀಸಲಾತಿ ಅನ್ವಯ ಉದ್ಯೋಗ ಭರ್ತಿಯಾಗುತ್ತಿದೆ ಎಂದರು. ಒಳ ಮೀಸಲಾತಿಯನ್ನು ನೀಡಲೇಬೇಕು ಎಂದು ನಮ್ಮ ಸಹೋದರ ಸಮುದಾಯದ ಸಚಿವರಾದ ಮುನಿಯಪ್ಪ, ತಿಮ್ಮಾಪುರ, ಹಾಗೂ ಮಾಜಿ ಸಚಿವ ಅಂಜನೇಯ ಅವರು ಸಮುದಾಯದ ನಾಯಕರೊಂದಿಗೆ ಗುರುತಿಸಿಕೊಂಡು ಹೋರಾಟವನ್ನು ಗಟ್ಟಿಗೊಳಿಸಿದರು. ಅಲ್ಲದೇ ಎಲ್ಲಾ ಕಡೆಯಿಂದ ಒತ್ತಡ ತಂದರು. ಆದರೆ, ನಮ್ಮ ಬಲಗೈ ಸಮುದಾಯದ ಸಚಿವರ ನಿರ್ಲಕ್ಷ್ಯ ಕಾರಣವಾಗಿದೆ ಎಂದು ಮಂಜುನಾಥ್ ದೂರಿದರು.

# ಪ್ರತಿಯೊಂದು ಆಟವನ್ನು ಸ್ಫೂರ್ತಿಯಾಗಿಸಿಕೊಳ್ಳಿ: ಟಿ.ಎಸ್.ಶ್ರೀವತ್ಸ

ಮೈಸೂರು: ಗೆದ್ದವರು ಬೀಗದೇ, ಸೋತವರು ಕುಗ್ಗದೆ ಪ್ರತಿಯೊಂದು ಆಟವನ್ನು ಸ್ಫೂರ್ತಿಯನ್ನಾಗಿಸಿಕೊಂಡು ಮುನ್ನಡೆಯಬೇಕು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಕಿವಿಮಾತು ಹೇಳಿದರು.

ನಗರದ ಪೆವಿಲಿಯನ್ ಮೈದಾನದಲ್ಲಿ ಯುವಾತ್ಮ ಮೈಸೂರು ವತಿಯಿಂದ ಆಯೋಜಿಸಿದ್ದ ಧನ್ವಂತರಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು. ಪ್ರಪಂಚದಾದ್ಯಂತ ಕ್ರಿಕೆಟ್ ಹೆಚ್ಚು ಜನಮನ್ನಣೆ ಪಡೆದುಕೊಂಡಿದ್ದು, ಭಾರತದಲ್ಲಿ ಅತಿ ಮುಖ್ಯವಾದ ಕ್ರೀಡೆಯಾಗಿದೆ. ಪ್ರತಿಯೊಬ್ಬ ಯುವಕರಲ್ಲೂ ಇವತ್ತಿನ ದಿನಗಳಲ್ಲಿ ಕ್ರಿಕೆಟ್ ಅಡಕವಾಗಿದೆ. ಇತ್ತೀಚೆಗೆ ಭಾರತ ಟಿ–20 ವಿಶ್ವಕಪ್ ತನ್ನದಾಗಿಸಿಕೊಂಡಿದೆ. ಇಂತಹ ಜನಪ್ರಿಯ ಕ್ರೀಡೆಯನ್ನು ಆಡುವ ಮೂಲಕ ಎಲ್ಲವನ್ನು ಬೆಸೆಯುವ ಕೆಲಸವಾಗಲಿದೆ ಎಂದರು. ಸಮುದಾಯದ ಆಯೋಜಿಸಿರುವುದು ಉತ್ತಮ ಕಾರ್ಯ. ಕ್ರಿಕೆಟ್ ಪಂದ್ಯಾವಳಿ ದೈಹಿಕವಾಗಿ ಆರೋಗ್ಯವಾಗಿರಲು ಸಹಾಯ ಮಾಡಬಲ್ಲದು ಎಂದರು.

ಅಖಿಲ ಭಾರತ ಬ್ರಾಹ್ಮಣ ಏಕೀಕೃತ ಪರಿಷತ್ ರಾಜ್ಯಾಧ್ಯಕ್ಷ ಎನ್.ಎಂ.ನವೀನ್ ಕುಮಾರ್ ಮಾತನಾಡಿ, ಕ್ರಿಕೆಟ್ ಇವತ್ತು ಭಾರತೀಯ ಕ್ರೀಡೆಯಾಗಿ ಬೆಳೆದಿದೆ.



ವಿವಿಧ ಭಾಗಗಳಿಂದ ಯುವಕರು ಪಂದ್ಯಾವಳಿಯಲ್ಲಿ ಭಾಗವಹಿಸುತ್ತಿರುವುದು ಸಂತಸದ ವಿಷಯ. ಸಮುದಾಯದ ಯುವಕರೇ ಕ್ಲಬ್‌ಗಳನ್ನು ಸ್ಥಾಪಿಸಿ ಕ್ರಿಕೆಟ್ ಪಂದ್ಯಾವಳಿಗಳನ್ನು ನಡೆಸುತ್ತಿದ್ದಾರೆ. ಬಹಳ ಹಿಂದಿನಿಂದಲೂ ಸಮುದಾಯಕ್ಕೂ ಕ್ರಿಕೆಟ್‌ಗೂ ಅವಿನಾಭಾವ ಸಂಬಂಧವಿದೆ. ಭಾರತ ಕ್ರಿಕೆಟ್ ತಂಡಗಳಲ್ಲಿ ಸಮುದಾಯದ ಸಾಕಷ್ಟು ಯುವಕರು ಆಟವಾಡಿ, ಸಮುದಾಯಕ್ಕೆ, ದೇಶಕ್ಕೆ ಕೀರ್ತಿ ತಂದಿದ್ದಾರೆ.

ಮೈಸೂರಿನ ಜಾವಗಲ್ ಶ್ರೀನಾಥ್, ಅನಿಲ್ ಕುಂಬ್ಳೆ ಕ್ರಿಕೆಟ್‌ಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು. ವಿವಿಧ ಜಿಲ್ಲೆಗಳ 10ಕ್ಕೂ ಹೆಚ್ಚಿನ ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು.

ಆಶಾ ಕಿರಣ ಚಾರಿಟಬಲ್ ಟ್ರಸ್ಟ್ ವ್ಯವಸ್ಥಾಪಕ ಗುರುರಾಜ್, ಇದೇ ಸಂದರ್ಭದಲ್ಲಿ ಹೊಯ್ಸಳ ಕರ್ನಾಟಕ ಸಂಘದ ಅಧ್ಯಕ್ಷ ಕೆ ಆರ್ ಸತ್ಯನಾರಾಯಣ್,ಉತ್ತರಾದಿ ಮಠದ ವ್ಯವಸ್ಥಾಪಕ ಪಂಡಿತ್ ಅನಿರುದ್ಧಾಚಾರ್ಯ ಪಾಂಡುರಂಗಿ,ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯ ಎಸ್ ಬಿ ವಾಸುದೇವಮೂರ್ತಿ,ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಆರ್ ಎಸ್ ಸತ್ಯನಾರಾಯಣ,ಪ್ರವೀಣ್, ಜಯಸಿಂಹ, ಸುಂದರ್ ರಾಜ್ ಇನ್ನಿತರರು ಹಾಜರಿದ್ದರು.

# ಒಳಮೀಸಲಾತಿ ಒಗ್ಗಟ್ಟು ಕಾಯ್ದುಕೊಳ್ಳಲು ಕರೆ

ಮೈಸೂರು: ಮಾದಿಗ ಸಮುದಾಯ ಹಲವು ವರ್ಷಗಳಿಂದ ಒಳಮೀಸಲಾತಿಯನ್ನು ಕೇಳುತ್ತಾ ಬಂದಿದ್ದು, ಇದೀಗ ರಾಜ್ಯ ಸರ್ಕಾರ ನ್ಯಾ.ನಾಗಮೋಹನ್‌ದಾಸ್ ಆಯೋಗದ ವರದಿ ಅನುಸಾರ ಹಂಚಿಕೆ ಮಾಡಿರುವ ಒಳಮೀಸಲಾತಿಯನ್ನು ಒಪ್ಪಿಕೊಂಡು ಸಹೋದರರಂತೆ ಸಹಬಾಳ್ವೆಯಿಂದ ಒಗ್ಗಟ್ಟು ಕಾಯ್ದುಕೊಳ್ಳಲು ಎರಡೂ ಪಂಗಡ ಮುಂದಾಗಬೇಕು ಎಂದು ಮಾಜಿ ಸಚಿವ ಕೋಟೆ ಎಂ.ಶಿವಣ್ಣ ಮನವಿ ಮಾಡಿದ್ದಾರೆ.

ಒಳಮೀಸಲಾತಿ ಪ್ರಸ್ತಾಪ ಹಾಗೂ ಹೋರಾಟಕ್ಕೆ 35 ವರ್ಷ ಕಳೆದಿದೆ. ಮಾದಿಗ ಹಾಗೂ ಸಂಬಂಧಿತ ಜಾತಿ ಜನರು ಒಳಮೀಸಲಾತಿ ಒದಗಿಸುವಂತೆ ಹೋರಾಟ ಮಾಡಿದ ಫಲವಾಗಿ 2004ರಲ್ಲಿ ಅಂದು ಮುಖ್ಯಮಂತ್ರಿಯಾಗಿದ್ದ ಎಸ್.ಎಂ.ಕೃಷ್ಣ ಅವರು ಒಳಮೀಸಲಾತಿ ಪ್ರಕ್ರಿಯೆಗೆ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು ಚಾಲನೆ ನೀಡಿದರು. 2005ರಲ್ಲಿ ನ್ಯಾ.ಸದಾಶಿವಾ ಆಯೋಗ ರಚಿಸಿದರು. ಆ ಆಯೋಗ ಮಾದಿಗ ಮತ್ತು ಸಂಬಂಧಿಸಿದ ಜಾತಿಗಳಿಗೆ ಶೇ.6ರಷ್ಟು, ಹೊಲೆಯ ಮತ್ತು ಸಂಬಂಧಿಸಿದ ಜಾತಿಗಳಿಗೆ ಶೇ.5ರಷ್ಟು ಹಾಗೂ ಬೋವಿ, ಕೊರಮ, ಕೊರಚ ಮತ್ತು ಇತರ ಜಾತಿಗಳಿಗೆ ಶೇ.4ರಷ್ಟು ಮೀಸಲಾತಿ ಹಂಚಿಕೆ ಮಾಡಿ ವರದಿ ತಯಾರಿಸಿ 2012ರಲ್ಲಿ ಅಂದಿನ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್




ಅವರಿಗೆ ವರದಿ ಸಲ್ಲಿಸಿತ್ತು. ಆದರೆ ರಾಜಕೀಯ ಒತ್ತಡಗಳಿಂದ ಆ ವರದಿಯನ್ನು ಜಾರಿಗೆ ತರಲು ಸಾಧ್ಯವಾಗಲಿಲ್ಲ ಎಂದು ವಿಷಾದಿಸಿದರು.

ಈಗಾಗಲೇ ದಲಿತ ಸಿಎಂ ವಿಚಾರ ಪ್ರಸ್ತಾಪವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಒಳಮೀಸಲಾಯಿತಿಯನ್ನು ಮುಂದಿಟ್ಟುಕೊಂಡು ದಲಿತರಲ್ಲಿ ಒಗ್ಗಟ್ಟು ಇಲ್ಲದಂತೆ ಮಾಡಿಕೊಳ್ಳುವುದು ಸೂಕ್ತವಲ್ಲ. ಆ ಕಾರಣದಿಂದ ಎರಡೂ ಸಮುದಾಯದ ಮುಖಂಡರು ಒಳಮೀಸಲಾತಿಗೆ ಒಪ್ಪಿಗೆ ಸೂಚಿಸಿ ಎರಡೂ ಪಂಗಡವೂ ಒಂದಾಗಿ ಒಗ್ಗಟ್ಟು ಕಾಯ್ದುಕೊಳ್ಳಲು ಮುಂದಾಗಬೇಕು ಎಂದು ಸಲಹೆ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಉಪಮೇಯರ್ ಶ್ರೀಧರ್, ಮುಖಂಡರಾದ ಪ್ರೊ. ವೆಂಕಟೇಶ್ ಕುಮಾರ್, ರಮೇಶ್, ರಂಗನಾಥ್ ಇದ್ದರು.

# ಶೇಷಾದ್ರಿಪುರಂ ಕಾಲೇಜಿನ ನೂತನ ಕಟ್ಟಡಗಳ ಉದ್ಘಾಟನೆ



ಮೈಸೂರು: ಶೇಷಾದ್ರಿಪುರಂ ಎಜುಕೇಶನಲ್ ಟ್ರಸ್ಟ್ ಅಡಿಯಲ್ಲಿ ಸ್ಥಾಪಿತವಾದ ಮೈಸೂರು ಶೇಷಾದ್ರಿಪುರಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿನ ನೂತನ ಕಟ್ಟಡಗಳನ್ನು ಕಡಕೋಳ ಕೈಗಾರಿಕಾ ಪ್ರದೇಶದಲ್ಲಿ ಉದ್ಘಾಟಿಸಲಾಯಿತು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಶೇಷಾದ್ರಿಪುರಂ ಟ್ರಸ್ಟ್ ನ ಸಂಸ್ಥಾಪಕರಾದ ಆನಂದಮ್ಮ ಮತ್ತು ಸೀತಮ್ಮ ಅವರ ದೂರದೃಷ್ಟಿಯನ್ನೂ ಪ್ರಶಂಸಿಸಿದರು. ಶಿಕ್ಷಣವು ಬೆಳಕಿನಂತೆ ಹರಡಬೇಕು. ಕಂಪ್ಯೂಟರ್ ಸಂಬಂಧಿತ ಶಾಖೆಗಳತ್ತ ಹೆಚ್ಚುತ್ತಿರುವ ಒಲವು ಸಾಮಾಜಿಕ ಅಸಮತೋಲನಕ್ಕೆ ಕಾರಣವಾಗಬಹುದು. ವಿದ್ಯಾರ್ಥಿಗಳು ಸ್ವತಂತ್ರವಾಗಿ ಹಾಗೂ ಸಮರ್ಪಕವಾಗಿ ವಿಷಯ ಆಯ್ಕೆ ಮಾಡಿಕೊಳ್ಳಲು ಪೋಷಕರು ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ ಮಾತನಾಡಿ, ಮೌಲ್ಯಾಧಾರಿತ ಶಿಕ್ಷಣ, ಸೌಹಾರ್ದತೆ ಮತ್ತು ಆರ್ಥಿಕ ಜ್ಞಾನದ ಮಹತ್ವವನ್ನು ವಿವರಿಸಿದರು. ಕಡಿಮೆ ವೆಚ್ಚದಲ್ಲಿ ಮೌಲ್ಯಾಧಾರಿತ ಶಿಕ್ಷಣ ನೀಡುತ್ತಿರುವ ಟ್ರಸ್ಟ್‌ನ್ನು ಶ್ಲಾಘಿಸಿ, ತಾಂತ್ರಿಕ ಜ್ಞಾನದ ಜೊತೆಗೆ ಮಾನವೀಯ ಮೌಲ್ಯಗಳೂ ಅಗತ್ಯವೆಂದು ತಿಳಿಸಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ವಿದ್ಯಾಶಂಕರ್ ಮಾತನಾಡಿ, ಇಂಟರ್ನ್‌ಶಿಪ್‌ಗಳು, ಕೈಗಾರಿಕಾ ಸಹಭಾಗಿತ್ವ ಹಾಗೂ ನವೀನ ಅಧ್ಯಯನ ವಿಧಾನಗಳ ಮಹತ್ವವನ್ನು ಒತ್ತಿಹೇಳಿದರು. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಡಿಸೈನ್ ಥಿಂಕಿಂಗ್ ಹಾಗೂ ಕ್ರಿಟಿಕಲ್ ಥಿಂಕಿಂಗ್ ಅತ್ಯಗತ್ಯವಾಗಿದ್ದು, ಎಐ ಎಲ್ಲಾ ಶಾಖೆಗಳಲ್ಲೂ ಅನ್ವಯಿಸಬಹುದು. ವಿದ್ಯಾರ್ಥಿಗಳು ವಿಷಯ ಆಯ್ಕೆಯಲ್ಲಿ ಒತ್ತಡಕ್ಕೆ ಒಳಗಾಗಬಾರದು. ಎಲೆಕ್ಟ್ರಿಕಲ್, ಮೆಕ್ಯಾನಿಕಲ್ ಮತ್ತು ಸಿವಿಲ್ ಶಾಖೆಗಳ ಭವಿಷ್ಯದ ಮಹತ್ವವನ್ನೂ ಪ್ರಸ್ತಾಪಿಸಿದರು. ಎಸ್‌ಐಟಿ ಗೌರವ ಕಾರ್ಯದರ್ಶಿ ನಾಡೋಜ ವೂಡೆ ಪಿ.ಕೃಷ್ಣ ಎಲ್ಲರ ಸ್ವಾಗತಿಸಿದರು. 10 ಏಕರೆ ವ್ಯಾಪ್ತಿಯಲ್ಲಿ ವಿಸ್ತರಿಸಿರುವ ಈ ಕ್ಯಾಂಪಸ್, ಗುಣಮಟ್ಟದ ತಾಂತ್ರಿಕ ಶಿಕ್ಷಣಕ್ಕೆ ಸೂಕ್ತವಾದ ಆಧುನಿಕ ಹಾಗೂ ಅನುಕೂಲಕರ ವಾತಾವರಣವನ್ನು ಒದಗಿಸುತ್ತದೆ. ಎಸ್ ಐಟಿ ಮೈಸೂರು ತಂತ್ರಜ್ಞಾನಾಧಾರಿತ, ಕೌಶಲ್ಯಾಭಿವೃದ್ಧಿ ಹಾಗೂ ಸಮಗ್ರ ಶಿಕ್ಷಣವನ್ನು ನೀಡುವ ಉದ್ದೇಶ ಹೊಂದಿದೆ. ಸಂಸ್ಥೆಯಲ್ಲಿ ಕಂಪ್ಯೂಟರ್ ಸೈನ್ಸ್ & ಎಂಜಿನಿಯರಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ & ಮಷೀನ್ ಲರ್ನಿಂಗ್, ಕಂಪ್ಯೂಟರ್ ಸೈನ್ಸ್ & ಎಂಜಿನಿಯರಿಂಗ್, ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ & ಮಷೀನ್ ಲರ್ನಿಂಗ್, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ & ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್, ಎಲೆಕ್ಟ್ರಾನಿಕ್ಸ್ & ಕಮ್ಯುನಿಕೇಶನ್ ಎಂಜಿನಿಯರಿಂಗ್, ಮೆಕ್ಯಾನಿಕಲ್ ಎಂಜಿನಿಯರಿಂಗ್ ಕೋರ್ಸ್‌ಗಳನ್ನು ನೀಡಲಾಗುತ್ತಿದೆ.

ಕ್ಯಾಂಪಸ್‌ನಲ್ಲಿ ಸುಸಜ್ಜಿತ ಕೇಂದ್ರ ಗ್ರಂಥಾಲಯ, ಆಧುನಿಕ ಪ್ರಯೋಗಾಲಯಗಳು, 800 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಸತಿ ಸೌಲಭ್ಯ ಹೊಂದಿರುವ ಹಾಸ್ಟೆಲ್‌ಗಳು, ಹಾಗೂ ಕ್ರೀಡೆ ಮತ್ತು ಫಿಟ್ನೆಸ್ ಸೌಲಭ್ಯಗಳು ಲಭ್ಯವಿವೆ. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಟ್ರಸ್ಟ್ ಅಧ್ಯಕ್ಷ ಎನ್.ಆರ್.ಪಂಡಿತ್ ಆರಾಧ್ಯ, ಗೌರವ ಸಹ ಕಾರ್ಯದರ್ಶಿ ಎಂ. ಎಸ್.ನಟರಾಜ್ ಇತರರು ಇದ್ದರು.

## ವಿದ್ಯುತ್ ವ್ಯತ್ಯಯ

ಮೈಸೂರು: 66/11 ಕೆ.ವಿ ಬನ್ನಿಮಂಟಪ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ. ಬೆಲವತ್ತ ಫೀಡರ್ ವ್ಯಾಪ್ತಿಯಲ್ಲಿ ಕೆ.ಪಿ.ಟಿ.ಸಿ.ಎಲ್, ಬೃಹತ್ ಕಾಮಗಾರಿ ವಿಭಾಗ ರವರು ಕಾಮಗಾರಿ ಕೆಲಸ ನಿಮಿತ್ತ ಮಾರ್ಚ್ 24 ರಂದು ಬೆಳಿಗ್ಗೆ 10ರಿಂದ ಮಧ್ಯಾಹ್ನ 1ಘಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ವಿದ್ಯುತ್ ವ್ಯತ್ಯಯ ವಾಗಲಿರುವ ಮುಖ್ಯ ಪ್ರದೇಶಗಳು: ಬೆಲವತ್ತ, ಶ್ಯಾದನಹಳ್ಳಿ, ನಾಗನಹಳ್ಳಿ, ನಾಗನಹಳ್ಳಿ ಹೊಸ ಬಡಾವಣೆ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ

# ತಾತಯ್ಯ ಗುರು ನಾಡು ಕಂಡ ಶ್ರೇಷ್ಠ ಸಂತ

## ಸುತ್ತೂರುಶ್ರೀ ಅಭಿಮತ । ಪರಿಚಯ, ಆತ್ಮಭೋಧೆ, ನಾರೇಯಣ ಪ್ರಶಸ್ತಿ ಪ್ರಧಾನ ಸಮಾರಂಭ

ಚಾಮರಾಜನಗರ, ಕೈವಾರ ತಾತಯ್ಯ ಯೋಗಿ ನಾರೇಯಣ ಗುರು ಈ ನಾಡು ಕಂಡಂತಹ ಅಪರೂಪದ ಶ್ರೇಷ್ಠ ಸಂತರು ಎಂದು ಸುತ್ತೂರು ಶ್ರೀಕ್ಷೇತ್ರದ ಶ್ರೀ ಶಿವರಾತ್ರಿದೇಶಿಕೇಂದ್ರಸ್ವಾಮೀಜಿ ತಿಳಿಸಿದರು.

ನಗರದ ಡಾ.ರಾಜ್ ಕುಮಾರ್ ರಂಗಮಂದಿರದಲ್ಲಿ ಚಾಮರಾಜನಗರ ವಿಶ್ವವಿದ್ಯಾನಿಲಯದ ಹಾಗೂ ಶ್ರೀ ಯೋಗಿನಾರೇಯಣ ಯತೀಂದ್ರರ ಪ್ರಚಾರ ಸಭಾ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ಕೈವಾರ ಸದ್ಗುರು ನಾರೇಯಣಯೋಗಿಗಳ ಪರಿಚಯ, ಆತ್ಮಭೋಧೆ ಮತ್ತು ನಾರೇಯಣ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮೈಸೂರು ರಾಮಕೃಷ್ಣ ಆಶ್ರಮ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಾಜೀ ಮಹಾರಾಜ್ ಅವರಿಗೆ ನಾರೇಯಣ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ಕೈವಾರ ತಾತಯ್ಯ 19ನೇ ಶತಮಾನದ ಆರಂಭದಲ್ಲಿ ಪ್ರಸಿದ್ಧ ದ್ವಿಭಾಷಾ ಕವಿ ಸಂತ ಮತ್ತು ಜ್ಞಾನ ಯೋಗಿಯಾಗಿದ್ದರು. ಅವರು ಅಮರನಾರಾಯಣ ಅವರ ಪರಮ ಭಕ್ತರಾಗಿದ್ದರು. ಕಾಲಜ್ಞಾನ ಮತ್ತು ಭವಿಷ್ಯ ವಾಣ ತತ್ವ ಪದಗಳನ್ನು ರಚನೆ ಮಾಡಿದ್ದರು. ಕಠಿಣ ತಪಸ್ಸು ಮಾಡಿ, ಯೋಗ ಸಿದ್ಧಿ ಪಡೆದು ಬಳೆ ಮಾರುವ ಕಾಯಕದೊಂದಿಗೆ ಜನರಿಗೆ ಸನ್ಮಾರ್ಗ ತೋರಿದ ಮಹಾತ್ಮರು. ಇಂಥವರ ಹೆಸರಿನಲ್ಲಿ ಪ್ರಶಸ್ತಿ ನೀಡುವ ಮೂಲಕ ಅವರ ಸೇವಾ ಗುಣಗಳನ್ನು ಜಗತ್ತಿಗೆ ತಿಳಿಸುವ ಕಾರ್ಯ ಮಹತ್ವಪೂರ್ಣವಾಗಿದೆ. ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿಯು ಓರ್ವ ಸಂತರಿಗೆ ಸಲ್ಲುತ್ತಿರುವುದು ಈ ಪ್ರಶಸ್ತಿ ಇನ್ನು ಸಹ ಮೌಲ್ಯ ಹೆಚ್ಚಿಸುತ್ತಿದೆ ಎಂದು ಪ್ರಶಂಸಿಸಿದರು.

ಬಾಲ್ಯದಲ್ಲಿಯೇ ಹೆತ್ತವರನ್ನು ಕಳೆದುಕೊಂಡು ದೇವಸ್ಥಾನದ ಅರ್ಚಕರ ಆಶ್ರಯದಲ್ಲಿ ಬೆಳೆದು ತಾತಯ್ಯ ಅವರು ಹುಟ್ಟು ಪವಾಡವಾಗಿದೆ. ತಾತಯ್ಯ ಅವರು ಭೂವಿಗೆ ಬರಬಾರದೆಂದು ವಿಷವಿಕ್ಕಿ ಕೊಲ್ಲುವಂತಹ ಸನ್ನಿವೇಶ ಸೃಷ್ಟಿಯಾಯಿತು. ತಾತಯ್ಯನವರ




### ಅಶ್ರಮದ 100 ವರ್ಷದ ಸೇವೆ ಗುರುತಿಸಿ ಪ್ರಶಸ್ತಿ

**ಮೈಸೂರಿನ ರಾಮಕೃಷ್ಣ ಆಶ್ರಮ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಾಜೀ ಮಹಾರಾಜ್ ಅವರು ನಾರೇಯಣ ಪ್ರಶಸ್ತಿ ಸ್ವೀಕರಿಸಿ ಮಾತನಾಡಿ, ಶ್ರೀ ರಾಮಕೃಷ್ಣ ಅಶ್ರಮದಲ್ಲಿ ಸೇವೆಯನ್ನು ಗುರುತಿಸಿದ ಶ್ರೀ ಯೋಗಿನಾರೇಯಣ ಯತೀಂದ್ರರ ಪ್ರಚಾರ ಸಮಿತಿ ಅವರು ಪ್ರಶಸ್ತಿಯನ್ನು ನೀಡುತ್ತಿರುವುದು ಹೆಮ್ಮೆ ಎನ್ನಿಸಿದೆ.**
**ಇನ್ನು ಸಹ ನಮ್ಮ ಜವಾಬ್ದಾರಿ ಹೆಚ್ಚಿದೆ. ಪೂಜ್ಯರ ಸಾನ್ನಿಧ್ಯದಲ್ಲಿ ಪ್ರಶಸ್ತಿ ಸ್ವೀಕರಿ ಸುವುದು ಸಂತಸವಾಗಿದೆ. ಆಶ್ರಮದ 100 ವರ್ಷ ಗಳ ಸೇವೆ ಅನನ್ಯವಾಗಿದೆ. ಧರ್ಮದಿಂದ ಮಾತ್ರ ನೆಮ್ಮದಿಯಿಂದ ಜೀವನ ನಡೆಸಲು ಸಾಧ್ಯ. ಜ್ಞಾನ ಇದ್ದ ಕಡೆ ಧರ್ಮ ಪ್ರಜ್ವಲಿಸುತ್ತದೆ.**
**ಸ್ವಾಮಿ ವಿವೇ ಕಾನಂದರ ತತ್ವ ಅದರ್ಶಗಳು ಹಾಗೂ ರಾಮಕೃಷ್ಣ ಪರಮಹಂಸರ ಸೇವೆಯು ನಮ್ಮೆಲ್ಲರಿಗೂ ಸ್ಫೂರ್ತಿಯಾಗಿದೆ ಎಂದರು.**

ಜನನವಾದ ಬಳಿಕ ಮಗುವನ್ನು ಕಾಡಿಗೆ ಎಸೆಯಲು ಮುಂದಾಗ ಸರ್ಪ ಅಡ್ಡ ಬಂದ ಪರಿಣಾಮ ಅವರು ವಾಪಸ್ ಹೋಗುತ್ತಾರೆ. ಹೀಗಾಗಿ ಅವರ ಜನನವೇ ಒಂದು ಪವಾಡ, ಸರಳ ವ್ಯಕ್ತಿತ್ವ ಕೈವಾರ ತಾತಯ್ಯ ಅವರ ಮಹಿಮೆ ಪವಾಡಗಳು ಅಪಾರವಾಗಿದೆ ಎಂದು ಬಣಿಸಿದರು.

ಅಲ್ಲಿಂದ ಕೈವಾರ ತಾತಯ್ಯ ಅವರು ವೃತ್ತಿಯ ಜೊತೆಗೆ ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಯೋಗ, ಧ್ಯಾನ ಮತ್ತು ಅಧ್ಯಾತ್ಮಿಕತೆಯನ್ನು ಬೆಳೆಸಿದರು. ಅಲ್ಲಿಂದ 110 ವರ್ಷಗಳ ಬದುಕಿದ್ದ ಅವರು, ಜೀವಂತ ಸಮಾಧಿಯಾದರು. ತಾತಯ್ಯ ತಪಸ್ಸುಗೈದ ಪುಣ್ಯ ಭೂಮಿ ಕೈವಾರ ಪುಣ್ಯ ಕ್ಷೇತ್ರವಾಗಿ ಪರಿವರ್ತನೆಯಾಗಿದೆ. ಪ್ರಮುಖ ಪ್ರವಾಸಿ ತಾಣ ಮತ್ತು ಪುಣ್ಯ ಕ್ಷೇತ್ರವಾಗಿ ಬೆಳೆಯುತ್ತಿದೆ. ಈ ಪವಾಡ ಪುರುಷರ ತತ್ವ ಅದರ್ಶಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು

ನಂತರ ಎಂ.ಎಸ್. ರಾಮಯ್ಯ ಅವರ ಮಕ್ಕಳಾದ ಡಾ. ಎಂ.ಆರ್. ಜಯರಾಮ್ ಅವರು ಮತ್ತು ಸಹೋದರರರು ಕೈವಾರ ಕ್ಷೇತ್ರವನ್ನು ಅಭಿವೃದ್ಧಿಪಡಿಸುವ ಜೊತೆಗೆ ಹಳ್ಳಿ ಹಳ್ಳಿಗಳಲ್ಲಿ ನಾರೇಯಣೆ ಭಜನೆ ಮತ್ತು ಕೀರ್ತನೆಗಳನ್ನು ಹಾಡುವ ಮೂಲಕ ಧರ್ಮ ಜಾಗೃತಿ ಮೂಡಿಸುತ್ತಿದ್ದಾರೆ ಎಂದು ಸ್ವಾಮೀಜಿ ಮೆಚ್ಚುಗೆ ವ್ಯಕ್ತಪಡಿಸಿದರು.

### ಕೀರ್ತನೆ ಪಠಣೆಯಿಂದ ಶಾಂತಿ ನೆಮ್ಮದಿ

**ಶ್ರೀಕ್ಷೇತ್ರ ಕೈವಾರದ ಧರ್ಮಾಧಿಕಾರಿ ಡಾ. ಎಂ.ಆರ್.ಜಯರಾಮ್ ಮಾತನಾಡಿ, ಯೋಗಿ ನಾರೇಯಣ ಕೀರ್ತನೆಯ ಪಠಣೆಯಿಂದ ಶಾಂತಿ ನೆಮ್ಮದಿ ದೊರೆಯುತ್ತಿದೆ. ಧರ್ಮ ಮಾರ್ಗದಲ್ಲಿ ನಡೆದರೆ ಯಶಸ್ಸು ದೊರೆಯುತ್ತಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಹಳ್ಳಿ ಹಳ್ಳಿಗಳಲ್ಲಿ ಧರ್ಮ ಭೋಧನೆ ಮಾಡಿ, ಯೋಗಿ ನಾರೇಯಣ ಕೀರ್ತನೆ ಮತ್ತು ಭಜನೆ ಮಾಡುತ್ತಾ ಹಳ್ಳಿಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡಲಾಗುತ್ತಿದೆ. 5 ಸಾವಿರ ಹಳ್ಳಿಗಳಲ್ಲಿ ಮನಸ್ಸುಗಳನ್ನು ಒಗ್ಗೂಡಿಸುವ ಕೆಲಸವನ್ನು ಮಾಡಲಾಗುತ್ತಿದೆ ಎಂದರು.**

ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಆರ್.ಗಂಗಾಧರ್ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶ್ರೀಯೋಗಿ ನಾರೇಯಣ ಯತೀಂದ್ರರ ಪ್ರಚಾರ ಸಭಾದ ಪ್ರಧಾನ ಸಂಚಾಲಕ ಎಚ್.ಎ.ವೆಂಕಟೇಶ್ ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊ?ಲಿಸ್ ವರಿ?ಾ?ಠಧಿಕಾರಿ ಎಂ.ಮುತ್ತುರಾಜು, ಶ್ರೀಮುದ್ದಾನೇಶ್ವರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ.ಎಂ.ಎನ್.ಕವಿತಾ, ಶ್ರೀನಿವಾಸಶೆಟ್ಟಿ, ದಾಸ ಬಣಜಿಗರ ಸಂಘದ ಅಧ್ಯಕ್ಷ ಚಂದ್ರಶೇಖರ್, ರೈಟ್ಸ್ ಜನರಲ್ ಮ್ಯಾನೇಜರ್ ಎಂ.ಜಿ.ಸುದೀಪ್, ಹಿರಿಯ ಲೆಕ್ಕಪರಿಶೋಧಕ ಸುರೇಂದ್ರ ಹೆಗಡೆ, ಶಿವಕುಮಾರ್, ಮೈಸೂರು ವಿವಿ. ವಿಶ್ರಾಂತ ಪ್ರಾಧ್ಯಾಪಕ ಡಾ. ಶಿವರಾಜಪ್ಪ, ಇತರರು ಹಾಜರಿದ್ದರು.

## ಇಂದು ವಿದ್ಯುತ್ ವ್ಯತ್ಯಯ

ಮೈಸೂರು: ದಕ್ಷಿಣ ಹಾಗೂ ಮಂಡಕಳ್ಳಿ ವಿದ್ಯುತ್ ವಿತರಣಾ ಕೇಂದ್ರಗಳಲ್ಲಿ ಕ.ವಿ.ಪ್ರ.ನಿ.ನಿ. ವತಿಯಿಂದ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿ ನಿಮ್ಮಿತ ಮಾ.24 ರಂದು ಮಂಗಳವಾರ ಬೆಳಿಗ್ಗೆ 10 ರಿಂದ ಸಂಜೆ 6 ಘಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ವಿದ್ಯಾರಣ್ಯಪುರಂ 25 ರಿಂದ 30ನೇ ಕ್ರಾಸ್, ಕನಕಗಿರಿ, ವೀರ?ಸ್ ಕಾಲೋನಿ, ಸ್ಟರ್ಲಿಂಗ್ ಥಿಯೇಟರ್, ಕೆ.ಆರ್ ಪಉರಂ, ಇಂಡಸ್ಟ್ರೀಯಲ್ ಸಬರ್ಬ್ 1 ರಿಂದ 3ನೇ ಹಂತ, ಚಾಮುಂಡಿಪುರ ಸರ್ಕಲ್, ಸಿಲ್ಕ್ ಫ್ಯಾಕ್ಟರಿ, ಅಶೋಕಪುರಂ, ಮೇದರಕೇರಿ, ಆರ್.ಟಿ.ಓ, ಬಲ್ಲಾಳ್ ಸರ್ಕಲ್, ನಂಜುಮಳಿಗೆ, ಬಂಡಿಪಾಳ್ಯ, ಹೊಸಹುಂಡಿ, ಗುಡುಮಾದನಹಳ್ಳಿ, ಏಳಿಗೆಹುಂಡಿ, ಆಲನಹಳ್ಳಿ ರಿಂಗ್ ರಸ್ತೆ, ನಾಚನಹಳ್ಳಿ ಪಾಳ್ಯ, ಕವಿತಾ ಬೇಕರಿ ಸರ್ಕಲ್, ಗೊಬಳಿ ಮರ, ಜೆ.ಪಿ ನಗರ ಎ.ಬಿ.ಸಿ,ಡಿ ಮತ್ತು ಇ ಬ್ಲಾಕ್, ಓಂಕಾರ್ ಲೇಔಟ್, ಪೊಲೀಸ್ ಬೂತ್ ಸರ್ಕಲ್, ಸಿದ್ದಲಿಂಗೇಶ್ವರ ಲೇಔಟ್, ಅಮೋಘ ಪ್ಯಾಲೆಸ್ ಹತ್ತಿರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳು. ಮಂಡಕಳ್ಳಿ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿರುವ ಪ್ರದೇಶಗಳು: ಮಂಡಕಳ್ಳಿ, ಗೆಜ್ಜಗಳ್ಳಿ ಐ.ಪಿ ಪ್ರದೇಶ, ಎಸ್. ಉತ್ತನಹಳ್ಳಿ, ಶ್ರೀನಗರ, ರೇಷ್ಮನಗರ, ಟೀರ?ಸ್ ಕಾಲೋನಿ, ಮಹಾಲಕ್ಷ್ಮಿ ಲೇಔಟ್, ಆರ್.ಕೆ ಲೇಔಟ್, ಭವಾನಿ ಲೇಔಟ್, ವಿನಾಯಕ ಲೇಔಟ್, ಮಹಾಲಕ್ಷ್ಮಿ ?ಮ ದೃಷ್ಟಿ ಲೇಔಟ್, ಕೊಪ್ಪಲೂರು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಬೃಹತ್ ಪ್ರತಿಭಟನೆ: ಜಿಲ್ಲೆಯಿಂದ 15 ಸಾವಿರ ಮುಖಂಡರು ಭಾಗಿ

ಚಾಮರಾಜನಗರ, ರಾಜ್ಯ ಸರ್ಕಾರ ಜಾರಿ ಮಾಡಿರುವ ಒಳ ಮೀಸಲಾತಿ ಬಲಗೈ ಸಮುದಾಯದ ವಿರೋಧಿಯಾಗಿದ್ದು, ಇದನ್ನು ವಿರೋಧಿ ಬಲಗೈ ಸಮುದಾಯದ ಒಕ್ಕೂಟದಿಂದ ಮಾ. 25 ರಂದು ಬೆಂಗಳೂರಿನಲ್ಲಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಂಡಿದ್ದು, ಜಿಲ್ಲೆಯಿಂದ 15ಸಾವಿರಕ್ಕು ಹೆಚ್ಚು ಮಂದಿ ಭಾಗವಹಿಸಲಿದ್ದು ಸುಮಾರು 200 ಬಸ್‌ಗಳಲ್ಲಿ ತೆರಳಲಾಗುತ್ತದೆ ಎಂದು ಬಲಗೈ ಸಮುದಾಯ ಸಂಘಟನೆಗಳ ಒಕ್ಕೂಟ, ಆದಿ ಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿ ಅಧ್ಯಕ್ಷ ಅಯ್ಯನಪುರ ಶಿವಕುಮಾರ್ ಹೇಳಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾ. ನಾಗಮೋಹನ್ ದಾಸ್ ಅವರ ವರದಿಯೇ ಅವೈಜ್ಞಾನಿಕವಾಗಿದ್ದು, ಸಮೀಕ್ಷೆ ಹಾಗೂ 101 ಜಾತಿಗಳ ನಿಖರವಾದ ಜಾತಿಗಳ ಮಾಹಿತಿಯನ್ನು ಸಂಗ್ರಹಿಸುವಲ್ಲಿ ವಿಫಲರಾಗಿದ್ದಾರೆ. 2025ರ ಸಮಾಜ ಕಲ್ಯಾಣ ಇಲಾಖೆಯ ಸುತ್ತೋಲೆಯಂತೆ ಜಾತಿ ಪ್ರಮಾಣ ಪತ್ರಗಳನ್ನು ಪ್ರವರ್ಗ ಎ, ಬಿ, ಮತ್ತು ಸಿ ಎಂದು ವರ್ಗೀಕರಿಸಿರುವುದನ್ನು ಹಿಂಪಡೆದು ಮೂಲ ಜಾತಿಗಳನ್ನು ನಮೂದಿಸಿ ಜಾತಿ ಪ್ರಮಾಣ ಪತ್ರಗಳನ್ನು ನೀಡಲು ಸೂಕ್ತ ಆದೇಶ ಹೊರಡಿಸುವುದು ಎಂದು ಸರಿಯಲ್ಲ ಎಂದರು.

ಬಲಗೈ ಸಮುದಾಯದ ಮರಣ ಶಾಸನವಾಗಿರುವ ಒಳ ಮೀಸಲಾತಿಯನ್ನು ರದ್ದುಪಡಿಸಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟದ ರಾಜ್ಯಾಧ್ಯಕ್ಷ ರಾದ ಶ್ರೀ ಜ್ಞಾನ



ಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಬೃಹತ್ ಸಮಾವೇಶ ನಡೆಯಲಿದ್ದು, ಈ ಸಮಾವೇಶಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಬಲಗೈ ಸಮುದಾಯದ ಬಂಧುಗಳು ಭಾಗವಹಿಸಬೇಕು ಮನವಿ ಮಾಡಿದರು. ಬಲಗೈ ಸಮುದಾಯ ಸಚಿವರ ಹೋರಾಟ ಪರಿಶ್ರಮದಿಂದ ಒಳ ಮೀಸಲಾತಿಗೆ ತಡೆ: ಡಾ. ಬಿ.ಆರ್. ಅಂಬೇಡ್ಕರ್ ಮಹಾಸಭಾದ ಕಾರ್ಯಾಧ್ಯಕ್ಷ ಸಿ.ಕೆ. ಮಂಜುನಾಥ್ ಒಳಮೀಸಲಾತಿಯನ್ನು ತಡೆಯುಲ್ಲಿ ಬಲಗೈ ಸಮುದಾಯದ ಸಚಿವರೇ ವಿಫಲರಾಗಿದ್ದಾರೆ ಎಂದು ಹೇಳಿಕೆ ನೀಡುವುದು ಸರಿಯಲ್ಲ. , ಬಲಗೈ ಸಮುದಾಯ ಸಚಿವರ ಹೋರಾಟ ಪರಿಶ್ರಮದಿಂದ ಇಂದು ಒಳಮೀಸಲಾತಿ ಗೆ ತಡೆಯಾಗಿದ್ದು, ಹಳೆ ಮೀಸಲಾತಿಯಡಿಯಲ್ಲಿ ಸರ್ಕಾರಿ ಹುದ್ದೆಗಳನ್ನು ತುಂಬಲು ಸಚಿವ ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ . ಇದನ್ನು ಸಿ.ಕೆ.ಮಂಜುನಾಥ್ ಅರ್ಥಮಾಡಿಕೊಳ್ಳಬೇಕು ಎಂದರು. ಪತ್ರಿಕಾಗೋಷ್ಠಿಯಲ್ಲಿ ತಾ.ಪಂ.ಮಾಜಿ ಸದಸ್ಯ ಆರ್. ಮಹದೇವು, ಸೋಮೇಶ್ವರ, ಮಧುಸೂದನ್, ಮಹಾದೇವಸ್ವಾಮಿ, ರಂಗಸ್ವಾಮಿ, ಗೋವಿಂದರಾಜ, ಅಶೋಕ್ ಹಾಜರಿದ್ದರು.

# ನೀರನ್ನು ಮಿತವಾಗಿ ಬಳಸಿ, ಸಂರಕ್ಷಣೆ ಮಾಡಿ

ಮೈಸೂರು: ನೀರು ಅಮೂಲ್ಯ ಜೀವದ್ರವ್ಯ ಆಗಿದ್ದು, ಅದರ ಸಂರಕ್ಷಣೆ ಮತ್ತು ಮಿತ ಬಳಕೆ ಬಗ್ಗೆ ಜಾಗೃತಿ ಮೂಡಿಸಬೇಕಾದ ಅಗತ್ಯವಿದೆ ಎಂದು ಹೋಟೆಲ್ ಮಾಲಿಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಕಿವಿಮಾತು ಹೇಳಿದರು

ಅಪೂರ್ವ ಸ್ನೇಹ ಬಳಗದವತಿಯಿಂದ ವಿಶ್ವ ಜಲ ದಿನಾಚರಣೆ ಅಂಗವಾಗಿ ಹೋಟೆಲ್ ಗಳಲ್ಲಿ ನೀರಿನ ಮಿತಿ ಬಳಕೆ ಜಾಗೃತಿ ಕಾರ್ಯಕ್ರಮವನ್ನು ಚಾಮುಂಡಿಪುರ ಅಪೂರ್ವ ಸಭಾಂಗಣ ಮುಂಭಾಗ ವಿಶ್ವ ಜಲ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ನೀರನ್ನು ಮಿತವಾಗಿ ಬಳಸದಿದ್ದರೆ ಮುಂದಿನ ದಿನಗಳಲ್ಲಿ ನೀರಿಗಾಗಿಯೇ ಯುದ್ಧ ಮಾಡುವಂಥ ಪರಿಸ್ಥಿತಿ ಎದುರಾಗಲಿದೆ. ನೀರಿನ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು ಅವಶ್ಯ ಎಂದರು.

ನೀರು ವಿಶಿಷ್ಟವಾದ ವಸ್ತು ಜೀವಜಲ ಎನ್ನುತ್ತೇವೆ. ಮನುಷ್ಯ ಕೇವಲ ನೀರನ್ನು ಮಾತ್ರ ಸೇವಿಸಿ 21 ದಿನಗಳವರೆಗೂ ಬದುಕಬಲ್ಲ. ಹೀಗಿರುವಾಗ ನೀರಿನ ಸಂರಕ್ಷ ಣೆ ಎಷ್ಟು ಮುಖ್ಯ ಎಂಬುದು ತಿಳಿಯುತ್ತದೆ. ಅರಬ್ ದೇಶಗಳಲ್ಲಿ ಏನೆಲ್ಲಾ ಐಷಾರಾಮಿ ವಸ್ತುಗಳು ಸಿಗುತ್ತದೆ. ಆದರೆ, ನೀರನ್ನು ಹಣ ಕೊಟ್ಟು ಕೊಳ್ಳುತ್ತಾರೆ. ನಮ್ಮಲ್ಲಿ ನೀರು ಧಾರಾಳವಾಗಿ ದೊರೆಯುತ್ತದೆ. ಆದರೆ



ಅದನ್ನ ತುಂಬಾ ಪೋಲು ಮಾಡುತ್ತೇವೆ. ಇದು ಹೀಗೇ ಮುಂದುವರೆದಲ್ಲಿ ಮುಂದಿನ ಪೀಳಿಗೆಗೆ ನೀರನ್ನು ಹೆಚ್ಚು ಹಣ ಕೊಟ್ಟು ಕೊಳ್ಳುವ ಸ್ಥಿತಿ ಬಂದರೂ ಬರಬಹುದಾಗಿದೆ. ಆದ್ದರಿಂದ ನೀರನ್ನು ಮಿತವಾಗಿ ಬಳಸುವುದು ಇಂದಿನ ಅಗತ್ಯಗಳಲ್ಲೊಂದಾಗಿದೆ ಎಂದರು.

ಮಾನವ ವೈಜ್ಞಾನಿಕವಾಗಿ ಚಂದ್ರಗ್ರಹ, ಮಂಗಳ ಗ್ರಹಕ್ಕೆ ಸಲೀಸಾಗಿ ಹೋಗಿಬರುವಷ್ಟು ಎತ್ತರಕ್ಕೆ ಬೆಳೆದಿದ್ದಾನೆ. ಆದರೆ ನೀರನ್ನ ಸೃಷ್ಟಿ ಮಾಡಲು ಸಾಧ್ಯವಾಗಿಲ್ಲ. ಇದು ದೇವರು ಕೊಟ್ಟ ಕಾಣಿಕೆ. ಈ ಅಮೂಲ್ಯ ದ್ರವ್ಯ ಕಾಪಾಡುವುದು ಎಲ್ಲರ ಹೊಣೆ ಎಂದು ಸಲಹೆ ನೀಡಿದರು. ಇದೇ ಸಂದರ್ಭದಲ್ಲಿ ಅಪೂರ್ವ ಸ್ನೇಹ ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ನಗರ ಪಾಲಿಕಾ ಮಾಜಿ ಸದಸ್ಯ ಜಗದೀಶ್, ದೂರ ರಾಜಣ್ಣ, ಆನಂದ್ ಜಟ್ಟಿ ಪ್ರಸಾದ್, ನಿವೃತ್ತ ಶಿಕ್ಷಕ ಮಹಾದೇವಸ್ವಾಮಿ, ಶಿವಲಿಂಗ ಸ್ವಾಮಿ, ಗೌರಿಶಂಕರ ನಗರದ ಶಿವುಹಾಗೂ ಇನ್ನಿತರರು.

## ಸುರೇಶ್ ಋಗ್ವೇದಿ ಹೇಳಿಕೆ । ವಿಶ್ವ ಜಲ ದಿನ

# ನೀರು ಸದ್ಬಳಕೆ ಬಗ್ಗೆ ಜಾಗೃತಿ ಮೂಡಿಸಬೇಕು

ಚಾಮರಾಜನಗರ: 1993 ರಿಂದ ವಿಶ್ವ ಸಂಸ್ಥೆ ಪ್ರಪಂಚದ ಎಲ್ಲಾ ದೇಶಗಳಲ್ಲೂ ನೀರಿನ ಜಾಗೃತಿ, ಶುದ್ಧ ನೀರು ನೈರ್ಮಲ್ಯ ಹಾಗೂ ಸುಸ್ಥಿರ ಅಭಿವೃದ್ಧಿಗಾಗಿ ಪ್ರತಿ ವರ್ಷ ಒದೊಂದು ಪರಿಕಲ್ಪನೆಯ ಮಾಲಕ ಜನರಲ್ಲಿ ಜಾಗೃತಗೊಳಿಸುವ ಕಾರ್ಯ ನಡೆಯುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ ತಾಲ್ಲೂಕು ಅಧ್ಯಕ್ಷ ಸುರೇಶ್ ಎನ್.ಋಗ್ವೇದಿ ತಿಳಿಸಿದರು.

ಅವರು ಜೈಹಿಂದ್ ಪ್ರತಿಷ್ಠಾನ.ಹಾಗೂ ಋಗ್ವೇದಿ ಯೂತ್ ಕ್ಲಬ್ ಹರದನಹಳ್ಳಿ ಕಲ್ಯಾಣಿಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಜಲ ದಿನ ಕಾರ್ಯಕ್ರಮದಲ್ಲಿ ಮಾತನಾಡಿ ಭಾರತೀಯ ಸಂಸ್ಕೃತಿ ಪುರಾಣಗಳಲ್ಲಿ ಅಪಾರವಾದ ಮಹತ್ವವನ್ನು ನೀರಿಗೆ ನೀಡಲಾಗಿದೆ .ನೀರನ್ನು ಜೀವಧಾರೆ ತಾಯಿ ಎಂದು ಕರೆಯಲಾಗಿದೆ .ಶಿವ ಪುರಾಣ,ಮತ್ಸ್ಯ ಪುರಾಣ ರಾಮಾಯಣ ಮಾಭಾರತ ಹಾಗೂ ವೇದವ್ಯಾಸರು ನೀರನ್ನು ತ್ಯಾಗದ ಸಂಕೇತ ಎಂದಿದ್ದಾರೆ ಎಂದು ಹೇಳಿದರು.

ಪ್ರತಿ ಕಾರ್ಯದ ಮೊದಲು ಶುದ್ಧೀಕರಣದ ಮೂಲಕ ಕಳಶ ಪೂಜೆಯನ್ನು ಮಾಡಿ ಪ್ರತಿ ಮನೆಯಲ್ಲಿ



ಕಳಶ ಪ್ರತಿಷ್ಠಾಪನೆಯ ಮೂಲಕ ಗಂಗೆಯನ್ನು ಸಂರಕ್ಷಿಸುವ, ಮಹತ್ವ ಸಾರುವ ಜವಾಬ್ದಾರಿ ರೂಢಿಗೆ ಬಂದಿದೆ. ಭಾರತೀಯ ಎಲ್ಲಾ ನದಿಗಳ ಹೆಸರುಗಳು ತಾಯಿ ಸ್ವರೂಪದಲ್ಲಿದ್ದು ಎಲ್ಲ ನದಿಗಳ ಸಂರಕ್ಷಣೆ, ಕೊಳ, ಕಲ್ಯಾಣಿಗಳ ಅಭಿವೃದ್ಧಿ ಮಾಡಬೇಕಾಗಿದೆ ಎಂದರು.

ಗ್ರಾಮ ವಿಕಾಸ ಸಂಸ್ಥೆಯ ಸಂಯೋಜಕರಾದ ಚಂದ್ರ ಮೋಹನ್ ಕಟ್ಟೆಪುರ ಮಾತನಾಡಿ.ಹರದನಹಳ್ಳಿ ಐತಿಹಾಸಿಕ ಗ್ರಾಮ. ಇಲ್ಲಿನ ಕಲ್ಯಾಣಿ 2017ರಲ್ಲಿ ಬಹಳ ಶಿಥಿಲಗೊಂಡು ಬಳಸಲು ಯೋಗ್ಯವಾಗಿ ಇರಲಿಲ್ಲ. ಗ್ರಾಮಸ್ತರು, ಯುವಕರು, ಸರ್ಕಾರ ಗ್ರಾಮಪಂಚಾಯಿತಿ ಇಂದು ಪುನರ್ನಿರ್ಮಾಣ ಮಾಡಿ ರಾಜ್ಯಕ್ಕೆ ಆದರ್ಶವಾಗಿದೆ. ಕಲ್ಯಾಣಿ ಸಂಗ್ರಹಣೆಯಿಂದ ವಾತಾವರಣ ಬಹಳ ಅತ್ಯುತ್ತಮವಾಗಿದೆ ಎಂದರು. ಹರದನಹಳ್ಳಿಯ ಸಮಾಜ ಗಿರೀಶ್ ಮಾತನಾಡಿ ಹರದನಹಳ್ಳಿಯ ಕಲ್ಯಾಣ ನಿರ್ಮಾಣದ ಹಿಂದೆ ಬಹಳಷ್ಟು ಜನರ ಸೇವೆ ಇದೆ. ಕಲ್ಯಾಣಿಯಲ್ಲಿ ದೇವರ ಕಾರ್ಯ, ತೆಪ್ಪೋತ್ಸವ ನಡೆಯುತ್ತಿದ್ದು ಜನರಿಗೆ ಆನಂದವನ್ನು ತಂದಿದೆ. ಕಲ್ಯಾಣಿಯಲ್ಲಿ ಯಡಿಯೂರು ಸಿದ್ದಲಿಂಗೇಶ್ವರರು ದೇವತಾ ಕಾರ್ಯಕ್ಕೆ ಜಲವನ್ನು ಬಳಸುತ್ತಿದ್ದರು ಎಂದು ನಂಬಿಕೆ ಇದೆ ಎಂದರು. ಹಸಿರುಪಡೆಯ ಡಾ.ಅಕ್ಷತಾ ಜೈನ್, ಸತೀಶ ಕುಮಾರ್, ಗ್ರಾಮ ವಿಕಾಸ ಸಂಸ್ಥೆಯ ಮಂಜುನಾಥ್, ವಿವೇಕಾನಂದ ಶಾಲೆ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸಂಕ್ಷಿಪ್ತ ಸುದ್ದಿ

## ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ



**ಕೆ.ಎಂ.ದೊಡ್ಡಿ:** ಶ್ರೀಮತಿ ಪದ್ಮ ಜಿ.ಮಾದೇಗೌಡ ಪ್ರತಿಷ್ಠಾನದ ವತಿಯಿಂದ ಮಾ.24 ರಂದು 12ನೇ ವರ್ಷದ ಶ್ರೀಮತಿ ಪದ್ಮ ಜಿ.ಮಾದೇಗೌಡ ಮಹಿಳಾ ಸೇವಾ ಪ್ರಶಸ್ತಿ ಪ್ರದಾನ, ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ ಎಂದು ಭಾರತೀ ಎಜುಕೇಷನ್ ಟ್ರಸ್ಟ್ ಕಾರ್ಯದರ್ಶಿ, ಪ್ರತಿಷ್ಠಾನದ ಅಧ್ಯಕ್ಷ ಬಿ.ಎಂ.ನಂಜೇಗೌಡ ತಿಳಿಸಿದರು.

ಭಾರತೀ ಎಜುಕೇಷನ್ ಟ್ರಸ್ಟ್ ಆಡಳಿತ ಕಚೇರಿಯಲ್ಲಿ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಂಗಳವಾರ ಬೆಳಿಗ್ಗೆ 10.30 ಗಂಟೆಗೆ ಇಲ್ಲಿಯ ಭಾರತೀ ಕಾಲೇಜಿನ ಕುವೆಂಪು ಸಭಾಂಗಣದಲ್ಲಿ ಕಾರ್ಯಕ್ರಮ ಜರುಗಲಿದ್ದು ಪದ್ಮ ಜಿ.ಮಾದೇಗೌಡ ಅವರ ಹೆಸರಿನಲ್ಲಿ ಕಳೆದ 11 ವರ್ಷಗಳಿಂದ ಮಹಿಳಾ ಸಾಧಕಿಯರನ್ನು ಗುರುತಿಸಿ ಪ್ರಶಸ್ತಿಯನ್ನು ನೀಡುತ್ತಾ ಬಂದಿದ್ದೇವೆ ಎಂದು ವಿವರಿಸಿದರು.

ಪ್ರತಿಷ್ಠಾನದ ವತಿಯಿಂದ ರಾಜ್ಯ ಮಟ್ಟದಲ್ಲಿ ಸೇವೆ ಸಲ್ಲಿಸಿದ 11 ಮಂದಿ ಸಾಧಕಿಯರನ್ನು ಗುರುತಿಸಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದ್ದು ಅದೇ ರೀತಿ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಖ್ಯಾತ ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಅವರನ್ನು ಅಭಿನಂದಿಸಲು ಮುಂದಾಗಿದ್ದೇವೆ ಎಂದರು.

ಖ್ಯಾತ ಕ್ಯಾನ್ಸರ್ ತಜ್ಞೆ ಡಾ. ವಿಜಯಲಕ್ಷ್ಮಿ ದೇಶಮಾನೆ ಅವರು ಗುಲ್ಬರ್ಗ ದಂತಹ ಜವಾರಿ ಮಣ್ಣಿನಲ್ಲಿ ಅರಳಿದಂತಹ ಪ್ರತಿಭೆಯಾಗಿ ಕಡು ಬಡತನದಲ್ಲಿ ಹುಟ್ಟಿ ಬಳ್ಳಾರಿಯ ಮಹಿಳಾ ಕಾಲೇಜಿನಲ್ಲಿ ಜನರಲ್ ಸರ್ಜರಿಯ ಎಂಎಸ್ ಪೂರ್ಣ ಗೊಳಿಸಿ ಸದೇ ಕಾಲೇಜಿನಲ್ಲಿ ಶಸ್ತ್ರ ಚಿಕಿತ್ಸೆ ತಜ್ಞೆ ಎಂದು ಹೆಸರು ಮಾಡಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆ ಗಳಿಸಿದ್ದಾರೆ ಎಂದರು.

ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಚಿಕಿತ್ಸಾ ಕೇಂದ್ರ ಸೇರಿ ಕೊಂಡು ಹೆಣ್ಣು ಮಕ್ಕಳ ಸ್ತನ ಕ್ಯಾನ್ಸರ್ ಬಗ್ಗೆ ಆಳವಾಗಿ ಅಧ್ಯಾಯನ ಮಾಡಿ ಮೂರು ದಶಕಗಳಿಗೂ ಹೆಚ್ಚು ಕ್ಯಾನ್ಸರ್ ಪೀಡಿತರ ಸೇವೆ ಸಲ್ಲಿಸಿದ್ದು ಇವರ ಸೇವೆ ಮನೋಭವವನ್ನು ಗುರುತಿಸಿ ಭಾರತ ಸರಕಾರ ನೀಡುವ 2025 ನೆ ಸಾಲಿನ ಪದ್ಮಶ್ರೀ ಪ್ರಶಸ್ತಿಗೂ ಭಾಜನರಾಗಿ ಪ್ರಸ್ತುತ ಬೆಂಗಳೂರಿನ ಗಾಂಧಿ ಬಜಾರ್‌ನಲ್ಲಿರುವ ಅಬಲಾಶ್ರಮದಲ್ಲಿ ಸೇವೆ ಮುಂದುವರಿಸಿರುವುದನ್ನು ಗುರುತಿಸಿ ಪ್ರಸ್ತುತ ಪ್ರತಿಷ್ಠಿತ ಪದ್ಮಾ ಜಿ.ಮಾದೇಗೌಡ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಹೇಳಿದರು.

ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆಯನ್ನು ಮಂಡ್ಯದ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ ವಹಿಸಲಿದ್ದು ಪದ್ಮ ಜಿ.ಮಾದೇಗೌಡ, ಭಾರತೀ ಎಜುಕೇಷನ್ ಟ್ರಸ್ಟ್ ಚೇರ್ಮನ್, ಎಂಎಲ್ಸಿ ಮಧು ಜಿ.ಮಾದೇಗೌಡ, ಕಾರ್ಯನಿರ್ವಾಹಕ ಟ್ರಸ್ಟಿ ಆಶಯ್ ಮಧು ಮಾದೇಗೌಡ ಉಪಸ್ಥಿತರಿರಲಿದ್ದರೆ ಎಂದು ಹೇಳಿದರು.

ಮಹಿಳಾ ದಿನಾಚರಣೆ ಹಿನ್ನಲೆಯಲ್ಲಿ ಭಾರತೀ ಎಜುಕೇಷನ್ ಟ್ರಸ್ಟ್‌ನ ಅಂಗ ಸಂಸ್ಥೆಯ ಮಹಿಳಾ ಶಿಕ್ಷಕಯರಿಂದ ವಿವಿಧ ಸಾಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದರು.

ಈ ಸಂದರ್ಭದಲ್ಲಿ ಭಾರತೀಕಾಲೇಜಿನ ಪ್ರಾಂಶುಪಾಲ ಡಾ ಎಂ.ಎಸ್. ಮಹದೇವಸ್ವಾಮಿ, ಕಾರ್ಯಕ್ರಮದ ಸಂಚಾಲಕಿ ಮಮತನಾಗ್, ಪ್ರತಿಮಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

**ಪದ್ಮ ಜಿ.ಮಾದೇಗೌಡ ಅವರ ಕುರಿತು...**

ಮಾಜಿ ಸಂಸದ ಭಾರತೀ ಎಜುಕೇಷನ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ, ಹಿರಿಯ ಗಾಂಧಿವಾದಿ ದಿವಂಗತ ಡಾ. ಜಿ. ಮಾದೇಗೌಡರ ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ರಾಜಕೀಯ ಸಾಧನೆಗಳ ಹಿಂದೆ ಆಗೋಚರ ಚೈತನ್ಯ ಶಕ್ತಿಯಾಗಿ, ಗೌಡರ ಸತ್ಕಾರ್ಯಗಳಿಗೆ ಅವರ ಪತ್ನಿ ಪದ್ಮ ಜಿ.ಮಾದೇಗೌಡ ಅವರು ಬೆಂಬಲವಾಗಿ ನಿಂತವರು.

ಯಾವುದೇ ಸಾಧಕನ ಯಶಸ್ಸಿನ ಹಿಂದೆ ಸ್ತ್ರೀಯ ಪಾತ್ರ ಇದ್ದೇ ಇರುತ್ತದೆ ಎಂಬ ಮಾತಿಗೆ ಮತ್ತೊಂದು ಸಾಕ್ಷಿ ಇವರು. ಇವರದು ಎಲೆಮರೆಕಾಯಿಯ ವ್ಯಕ್ತಿತ್ವ, ಎಂದೂ ಸಾರ್ವಜನಿಕವಾಗಿ ಕಾಣಿಸಿಕೊಂಡವರಲ್ಲ, ವೇದಿಕೆ ಏರಿದವರಲ್ಲ, ಹಾರ ತುರಾಯಿಗಳಿಗೆ ಆಸೆ ಪಟ್ಟವರಲ್ಲ.

ಗೌಡರ ವ್ಯಕ್ತಿತ್ವದ ಒಂದು ಭಾಗವಾಗಿ, ಅವರ ನೆರಳಾಗಿ, ಅವರ ಸಾಧನೆಗಳಲ್ಲಿ ತಮ್ಮ ಉಸಿರು, ಹೆಸರನ್ನು ಸದ್ದಿಲ್ಲದೆ ಬೆರಸಿದವರು, ನಿಸ್ವಾರ್ಥ ಸೇವೆ ಸಲ್ಲಿಸಿದ್ದು ಪದ್ಮ ಜಿ.ಮಾದೇಗೌಡರ ಹೆಸರಿನಲ್ಲಿ ರಾಜ್ಯಮಟ್ಟದ ಮಹಿಳಾ ಸೇವಾ ಪ್ರಶಸ್ತಿಯನ್ನು ಸ್ಥಾಪಿಸಿ ಇವರ ಜನ್ಮ ದಿನಾಂಕದಂದು ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ.

## ದೇವರ ದಾಸಿಮಯ್ಯ ಜಯಂತಿ ಆಚರಣೆ ಕಾರ್ಯಕ್ರಮ

# ದೇವರ ದಾಸಿಮಯ್ಯನ ಮೌಲ್ಯ – ಆದರ್ಶಗಳನ್ನು ಬೆಳೆಸಿಕೊಳ್ಳಿ

**ಮಂಡ್ಯ:** ದೇವರ ದಾಸಿಮಯ್ಯ ಅವರು ಸಮಾಜದಲ್ಲಿನ ಮೂಢನಂಬಿಕೆ ಸಮಾಜದ ಅಂಕುಡೊಂಕುಗಳನ್ನು ವಿರೋಧಿಸಿ, ಮೂಢನಂಬಿಕೆ ಮತ್ತು ಮೌಢ್ಯತೆ, ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ ಹಲವು ವಚನಗಳ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕೆಲಸ ಮಾಡಿದ್ದಾರೆ. ಸತ್ಯ ಮತ್ತು ಅನುಭವಕ್ಕೆ ಪ್ರಾಮುಖ್ಯತೆ ನೀಡಿದವರು ಅವರು.ಸಾಮಾಜಿಕ ವ್ಯವಸ್ಥೆ ಮತ್ತು ಸಾಮಾಜಿಕ ಕ್ರಾಂತಿಗೆ ಅಡಿಪಾಯ ಹಾಕಿದವರು ಅವರ ಮೌಲ್ಯ ಆದರ್ಶ ಗಳನ್ನು ಯುವಜನತೆ ಬೆಳೆಸಿಕೊಳ್ಳಬೇಕು ಎಂದು ಕೈಮಗ್ಗ ಮತ್ತು ಅಭಿವೃದ್ಧಿ ನಿಗಮದ ಅಧ್ಯಕ್ಷ ನಾಗೇಂದ್ರ ಕುಮಾರ್ ರವರು ಹೇಳಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಸೋಮವಾರ ನಗರದ ಗಾಂಧಿ ಭವನದಲ್ಲಿ ನಡೆದ ದೇವರ ದಾಸಿಮಯ್ಯ ಜಯಂತಿ ಆಚರಣೆ ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ದೇವರ ದಾಸಿಮಯ್ಯ (ಅಥವಾ ಜೇಡರ ದಾಸಿಮಯ್ಯ) 12ನೇ ಶತಮಾನದ ಆದಿ ವಚನಕಾರ, ಶಿವಶರಣ ಮತ್ತು ನೇಕಾರಿಕೆ ಕಾಯಕದವರು. 'ರಾಮನಾಥ' ಅಂಕಿತನಾಮದಲ್ಲಿ ವಚನಗಳನ್ನು ರಚಿಸಿದ ಇವರು, ಕನ್ನಡದ ಮೊದಲ ವಚನಕಾರರಲ್ಲಿ ಒಬ್ಬರು. ಸತಿ–ಪತಿ ಸಾಮರಸ್ಯ, ಕಾಯಕ ತತ್ವ ಮತ್ತು ವೈಚಾರಿಕತೆಯನ್ನು ತಮ್ಮ ವಚನಗಳ ಮೂಲಕ ಬೋಧಿಸಿದವರು ಎಂದು ಹೇಳಿದರು.



ಜಿಲ್ಲಾ ಉಪ ವಿಭಾಗ ಅಧಿಕಾರಿಗಳಾದ ಶಿವಮೂರ್ತಿ ರವರು ಮಾತನಾಡಿ ದಾಸಿಮಯ್ಯನವರ ವಚನಗಳು ಸಂಕ್ಷಿಪ್ತತೆ, ಸರಳತೆ ಮತ್ತು ಗಹನವಾದ ಅರ್ಥಪ್ರಚುರತೆಗೆ ಹೆಸರುವಾಸಿಯಾಗಿದ್ದು ಸಮಾಜದ ಅಂಕು ಡೊಂಕುಗಳನ್ನು, ಬಾಹ್ಯ ಆಚರಣೆಗಳನ್ನು ನೇರವಾಗಿ ಪ್ರಶ್ನಿಸುವ ವೈಚಾರಿಕ ಧೋರಣೆ ಇವರದ್ದಾಗಿತ್ತು ಎಂದು ತಿಳಿಸಿದರು.

ಬಸವಣ್ಣನಿಗಿಂತಲೂ ಮುಂಚಿನವರಾದ ಇವರು ವಚನ ಪ್ರಕಾರಕ್ಕೆ ಒಂದು ತಳಹದಿ ಹಾಕಿಕೊಟ್ಟವರು ಎಲ್ಲಾರು ದೇವರ ದಾಸಿಮಯ್ಯ ರವರ ಆದರ್ಶ ಮೌಲ್ಯಗಳನ್ನು ಬೆಳಿಸಿಕೊಳ್ಳಬೇಕು ಅವರು ಸಮಾಸಮಾಜವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಅನೇಕ ವಚನಗಳ ಮೂಲಕ ಸಮಾಜಕ್ಕೆ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಡಾ. ಶ್ರೀನಿವಾಸ ಶೆಟ್ಟಿ ರವರು ಉಪನ್ಯಾಸ ಮಾಡಿ ದೇವರ ದಾಸಿಮಯ್ಯ (ದೇವಲ ಮಹರ್ಷಿ) ಸರಿ ಸುಮಾರು 11ನೇ ಶತಮಾನದವರು. ಸುರಪುರ ಜಿಲ್ಲೆಯ ಮುದನೂರು ಎಂಬ ಹಳ್ಳಿಯಲ್ಲಿ ಜನನ. ಮುದನೂರು ಹಲವಾರು ದೇವಾಲಯಗಳಿಂದ ಕೂಡಿದ್ದು, ಅಲ್ಲಿನ ರಾಮನಾಥ ದೇವಸ್ಥಾನ ದೇವಲ ಮಹರ್ಷಿಯರ ಅಚ್ಚುಮೆಚ್ಚು. ರಾಮನಾಥ ಸ್ವಾಮಿಯ ಆರಾಧಕರು. ರಾಮನಾಥ ಎಂದರೆ ಶಿವ (ರಾಮನು ಪೂಜಿಸುತ್ತಿದ್ದಂತಹ ದೇವರು). ದೇವಲ ಮಹರ್ಷಿಯು ಶಿವನ ಅಪಾರ ಭಕ್ತರಾಗಿದ್ದು 'ರಾಮನಾಥ' ಇವರ ಅಂಕಿತನಾಮವಾಗಿತ್ತು.

ದಾಸಿಮಯ್ಯನು ವೃತ್ತಿ ನೇಕಾರಿಕೆ ವೃತ್ತಿಯಾಗಿದ್ದು ನೇಕಾರಿಕೆ ಕಾಯಕವನ್ನು ಮಾಡಿ ಅನೇಕ ಪವಾಡ ಗಳನ್ನು ಮಾಡಿದ್ದಾರೆ. ಸಾಕ್ಷತ್ ಪರಶಿವನಿಂದ ತವನಿಧಿಯನ್ನು ಪಡೆದ ಶರಣ. ಈ ಶರಣನು ಜ್ಞಾನಿಯೂ ಬೋಧೆಯಲ್ಲಿ ಬಲ್ಲಿದನೂ ಆದಂತೆ, ವಚನ ಸಾಹಿತ್ಯ ರಚನೆಯಲ್ಲಿಯೂ ಪ್ರಬಲನಾಗಿದ್ದನು. ಅಲಂಕಾರಿಕವಾದ ಸ್ವಲ್ಪ ಶಬ್ದಗಳ ನುಡಿಯಲ್ಲಿ ದಿವ್ಯವಾದ, ವಿಶಾಲವಾದ ಅರ್ಥ, ಯಾರೂ ತೆಗೆದು ಹಾಕದಂತಹ ಅಭಿಪ್ರಾಯ ಇಂತಹ ಅಮೃತ ಬಿಂದು ಮನೋಜ್ಞವಾಣಿ ಆತನ ವಚನಗಳಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರು ಬಿ.ವಿ. ನಂದೀಶ್, ಜಿಲ್ಲಾ ನೇಕಾರ ಸಂಘದ ಅಧ್ಯಕ್ಷರು ಹರಿಪ್ರಸಾದ್, ಉಪಾಧ್ಯಕ್ಷರು ರಾಧಾಕೃಷ್ಣನ್, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಅಧ್ಯಕ್ಷರು ಸಂದೇಶ್,ಮುಖಂಡರುಗಳಾದ ಸೌಮ್ಯ ಪ್ರಸಾದ್, ಸೂರ್ಯನಾರಾಯಣ,ರಾಮ ಕುಮಾರ್, ನೀಲಕಂಠ ಉಮಾಶಂಕರ್ ಉಪಸ್ಥಿತರಿದ್ದರು.


# ಮಾರ್ಚ್ 25 ರಂದು ಮಂಡ್ಯದಲ್ಲಿ ಅಂತರ್ ವಿದ್ಯುತ್ ಕಂಪನಿಗಳ ಕ್ರೀಡಾಕೂಟ

**ಮಂಡ್ಯ :** ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ಮೈಸೂರು 2025 –26ನೇ ಸಾಲಿನ ರಾಜ್ಯಮಟ್ಟದ ಅಂತರ್ ವಿದ್ಯುತ್ ಕಂಪನಿಗಳ ಕಬ್ಬಡ್ಡಿ, ವಾಲಿಬಾಲ್,ಬ್ಯಾಸ್ಕೆಟ್ಬಾಲ್,ಬಾಲ್ ಬ್ಯಾಡ್ಮಿಂಟನ್ ಮತ್ತು ಲಾನ್ ಟೆನ್ನಿಸ್ ಕ್ರೀಡಾಕೂಟವನ್ನು ಮಾರ್ಚ್ 25 ರಂದು ಮಂಡ್ಯ ನಗರದ ಪಿ.ಇ.ಟಿ ಇಂಜಿನಿಯರಿಂಗ್ ಕಾಲೇಜು ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ

ಮೈಸೂರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಅಧ್ಯಕ್ಷರು ಹಾಗೂ ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರ ಶಾಸಕರಾದ ಎ. ಬಿ. ರಮೇಶ್ ಬಂಡಿ ಸಿದ್ದೇಗೌಡ ರವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಮುನಿ ಗೋಪಾಲರಾಜು ಕೆ.ಎಂ ರವರು ಅಂತರ ಕಂಪನಿ ಕ್ರೀಡಾಜ್ಯೋತಿ ಉದ್ಘಾಟಿಸಲಿದ್ದಾರೆ.

ಮೈಸೂರು ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಅಧ್ಯಕ್ಷರು ಹಾಗೂ ಮುಖ್ಯ ಇಂಜಿನಿಯರ್ ಸುನಿಲ್ ಕುಮಾರ್ ಎ.ಎ ರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನಿರ್ದೇಶಕರು ಹಾಗೂ ಅಧ್ಯಕ್ಷರಾದ ಗಿರಿಧರ ಕುಲಕರ್ಣಿ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ನಿರ್ದೇಶಕರು ದಿವಾಕರ್ ಡಿ.ಜೆ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನಿರ್ದೇಶಕರು ಹಾಗೂ ಹಿರಿಯ ಉಪಾಧ್ಯಕ್ಷರು ಬಿಪಿ ವಿಜಯ, ಮುಖ್ಯ ಆರ್ಥಿಕ ಅಧಿಕಾರಿಗಳು ರೇಣುಕಾ.ಜಿ, ಪೋಲಿಸ್ ಅಧಿಕ್ಷಕರು ಸವಿತಾ ಹೂಗಾರ್, ಮುಖ್ಯ ಪ್ರಧಾನ ವ್ಯವಸ್ಥಾಪಕರು ಲಿಂಗರಾಜಮ್ಮ, ಮುಖ್ಯ ಪ್ರಧಾನ ವ್ಯವಸ್ಥಾಪಕರು ಶರಣಮ್ಮ ಜಂಗಿನ, ಪ್ರಧಾನ ವ್ಯವಸ್ಥಾಪಕರು ಬಿ.ಆರ್ ರೂಪ, ಮುಖ್ಯ ಇಂಜಿನಿಯರ್ ಗಳಾದ ನಾಗರಾಜು ಎಂ.ಎಲ್, ಸತೀಶ್ ಚಂದ್ರ ಎನ್. ಎಸ್, ಕೃಷ್ಣಪ್ಪ ಗುಂಡಿನಕೇರಿ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ನೌಕರ ಸಂಘದ ಅಧ್ಯಕ್ಷರು ಕೆ. ಬಲರಾಂ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಇಂಜಿನಿಯರ್ ಗಳ ನಿರ್ದೇಶಕ ಮತ್ತು ಸಂಘದ ಅಧ್ಯಕ್ಷರು ಬಸವಣ್ಣ ಸಿ, ಲೆಕ್ಕಾಧಿಕಾರಿಗಳ ಸಂಘದ ಅಧ್ಯಕ್ಷರು ಎಸ್ ಗಿರೀಶ್, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಅಧಿಕಾರಿಗಳ ಸಂಘದ ಅಧ್ಯಕ್ಷರು ಶೀಲಾ, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ಡಿಪ್ಲೋಮಾ ಇಂಜಿನಿಯರ್ ಗಳ ಸಂಘದ ಅಧ್ಯಕ್ಷರು ರಾಮಚಂದ್ರ ಎ, ಜನತಾ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಕೆ ಎಸ್ ವಿಜಯ್ ಆನಂದ್, ಪ್ರಧಾನ ಕಾರ್ಯದರ್ಶಿಗಳು ಮೈಕಲ್ ವಾಷಿಂಗ್ಟನ್ ರವರು ಆಗಮಿಸಲಿದ್ದಾರೆ.

### ಶ್ರೀ ಮೇಲುಕೋಟೆ ವೈರಮುಡಿ ಜಾತ್ರಾ ಮಹೋತ್ಸವ

# ಸಾರಿಗೆ ನಿಗಮದಿಂದ 140 ಬಸ್ಸುಗಳ ಕಾರ್ಯಾಚರಣೆ




**ಮಂಡ್ಯ:** ಶ್ರೀ ಮೇಲುಕೋಟೆ ವೈರಮುಡಿ ಜಾತ್ರಾ ಮಹಾ ರಥೋತ್ಸವವು ಮಾರ್ಚ್ 28 ರಂದು ನಡೆಯಲಿದ್ದು, ಈ ಜಾತ್ರಾ ಮಹೋತ್ಸವಕ್ಕೆ ಆಗಮಿಸುವ ಭಕ್ತಾಧಿಗಳ ಅನುಕೂಲಕ್ಕಾಗಿ ಕ.ರಾ.ರ.ಸಾ.ನಿಗಮದ. ಮಂಡ್ಯ ವಿಭಾಗದವತಿಯಿಂದ ಮಂಡ್ಯ ಜಿಲ್ಲೆ ವ್ಯಾಪ್ತಿಯ ಮಂಡ್ಯ, ನಾಗಮಂಗಲ, ಕೆ.ಆರ್.ಪೇಟೆ. ಶ್ರೀರಂಗಪಟ್ಟಣ, ಪಾಂಡವಪುರ ಬಸ್ ನಿಲ್ದಾಣಗಳಿಂದ ಹಾಗೂ ಮೈಸೂರು. ಹಾಸನ, ತುಮಕೂರು ಮತ್ತು ಬೆಂಗಳೂರು ಬಸ್ ನಿಲ್ದಾಣಗಳಿಂದ ಹೆಚ್ಚುವರಿಯಾಗಿ ಆದಿಚುಂಚನಗಿರಿಗೆ 140 ಬಸ್ಸುಗಳ ಕಾರ್ಯಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಕ.ರಾ.ರ.ಸಾ.ನಿಗಮದ ವಿಭಾಗೀಯ ನಿಯಂತ್ರಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಯನಗರದಲ್ಲಿ ಸಾಂಸ್ಕೃತಿಕ ಸೌರಭ: 'ಪರಮ್ ವಿಹಾರ' ವೇದಿಕೆಯಲ್ಲಿ ಮೇಳೈಸಿದ ಗಾನ–ನೃತ್ಯ ವೈಭವ

**ಬೆಂಗಳೂರು:** ಇಲ್ಲಿನ ಜಯನಗರದಲ್ಲಿರುವ ಪಟ್ಟಾಭಿರಾಮ ಸೇವಾ ಮಂಡಳಿಯ ಸಭಾಂಗಣವು ಭಾನುವಾರ ಸಂಜೆ ಒಂದು ಅಪರೂಪದ ಕಲಾ ದರ್ಶನಕ್ಕೆ ಸಾಕ್ಷಿಯಾಯಿತು. 'ಪರಮ್ ಫೌಂಡೇಶನ್' ವತಿಯಿಂದ ಆಯೋಜಿಸಲಾಗಿದ್ದ 'ಪರಮ್ ವಿಹಾರ–10' ಕಾರ್ಯಕ್ರಮವು ಶಾಸ್ತ್ರೀಯ ಸಂಗೀತ ಮತ್ತು ನೃತ್ಯದ ಘಮವನ್ನು ಪಸರಿಸಿ, ಸೇರಿದ್ದ ಕಲಾಪ್ರೇಮಿಗಳ ಮನಗೆಲ್ಲುವಲ್ಲಿ ಯಶಸ್ವಿಯಾಯಿತು. ಉದಯೋನ್ಮುಖ ಕಲಾವಿದರಿಗೆ ವೇದಿಕೆ ಕಲ್ಪಿಸುವ ಈ ಪ್ರಯತ್ನಕ್ಕೆ ಪ್ರೇಕ್ಷಕರಿಂದ ಮೆಚ್ಚುಗೆ ವ್ಯಕ್ತವಾಯಿತು.

ಮನಸೂರೆಗೊಂಡ ಮಾನ್ಯ ಮಂಜುನಾಥ್ ಕಂಠಸಿರಿ


ಕಾರ್ಯಕ್ರಮದ ಆರಂಭದಲ್ಲಿ ಕುಮಾರಿ ಮಾನ್ಯ ಮಂಜುನಾಥ್ ಅವರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿಯು ಸಭಿಕರನ್ನು ಮಂತ್ರಮುಗ್ಧಗೊಳಿಸಿತು. ತಮ್ಮ ಸುಶ್ರಾವ್ಯ ಕಂಠದಿಂದ ವಿವಿಧ ರಾಗಗಳನ್ನು ಪ್ರಸ್ತುತಪಡಿಸಿದ ಅವರು, ಲಯಬದ್ಧ ಗಾಯನದ ಮೂಲಕ ಗಮನ ಸೆಳೆದರು. ಇವರಿಗೆ ಮೃದಂಗದಲ್ಲಿ ವಿದ್ವಾನ್ ಸುಮಧುರ್ ಅನೂರ್ ಹಾಗೂ



ಪಿಟೀಲಿನಲ್ಲಿ ವಿದ್ವಾನ್ ರಾಘವೇಂದ್ರ ಡಿ.ಆರ್. ಅವರು ಅತ್ಯುತ್ತಮ ಸಾಥ್ ನೀಡುವ ಮೂಲಕ ಸಂಗೀತ ಕಛೇರಿಯ ರಂಗನ್ನು ಹೆಚ್ಚಿಸಿದರು. ವಾದ್ಯಗಳ ನಾದ ಮತ್ತು ಗಾಯನದ ಸಮನ್ವಯವು ಶ್ರೋತೃಗಳಿಗೆ ಹಿತವಾದ ಅನುಭವ ನೀಡಿತು.

ಶ್ರೀನಿಧಿ ರಾಮಸ್ವಾಮಿ ಅವರ ನೃತ್ಯ ವೈಭವ

ಗಾಯನದ ನಂತರ ನಡೆದ ಕುಮಾರಿ ಶ್ರೀನಿಧಿ ರಾಮಸ್ವಾಮಿ ಅವರ ಏಕವ್ಯಕ್ತಿ ಭರತನಾಟ್ಯ ಪ್ರದರ್ಶನವು ಸಭೆಯ ಕಣ್ಮಣಿಯಾಯಿತು. ಸಾಂಪ್ರದಾಯಿಕ ನೃತ್ಯ ಪ್ರಕಾರದ ಘನತೆ ಮತ್ತು ಲಾಸ್ಯವನ್ನು ತಮ್ಮ ಅಭಿನಯದ ಮೂಲಕ ಶ್ರೀನಿಧಿಯವರು ತೆರೆದಿಟ್ಟರು. ಅವರ ಹಾವಭಾವಗಳು ಹಾಗೂ ಪಾದಚಲನೆಯು ಶಾಸ್ತ್ರೀಯ ನೃತ್ಯದ ಶಿಸ್ತನ್ನು ಸಾರುತ್ತಿತ್ತು. ರಂಗದ




ಮೇಲಿನ ಅವರ ಪ್ರತಿಯೊಂದು ಭಂಗಿಯೂ ಕಲಾಪ್ರೇಮಿಗಳ ಮೆಚ್ಚುಗೆಗೆ ಪಾತ್ರವಾಯಿತು.

ಪರಮ್‌ನಿಂದ 10ನೇ ಆವೃತ್ತಿ ಕಾರ್ಯಕ್ರಮ

ಪರಮ್ ಫೌಂಡೇಶನ್‌ನ ಈ 10ನೇ ಆವೃತ್ತಿಯು ಹೊಸ ತಲೆಮಾರಿನ ಕಲಾವಿದರ ಪ್ರತಿಭೆಯನ್ನು ಅನಾವರಣಗೊಳಿಸುವಲ್ಲಿ ದೊಡ್ಡ ಯಶಸ್ಸು ಕಂಡಿದೆ. ಸಂಜೆ 6 ಗಂಟೆಯಿಂದ ಆರಂಭವಾದ ಈ ಕಾರ್ಯಕ್ರಮಕ್ಕೆ ಬೆಂಗಳೂರಿನ ನಾನಾ ಭಾಗಗಳಿಂದ ಬಂದಿದ್ದ ಸಂಗೀತ ಮತ್ತು ನೃತ್ಯ ಆಸಕ್ತರು ಕಲಾವಿದರನ್ನು ಹುರಿದುಂಬಿಸಿದರು.

- ಪರಮ್ ವಿಹಾರದಲ್ಲಿ ಉದಯೋನ್ಮುಖ ಕಲಾವಿದರ ಅನಾವರಣ
- ಮಾನ್ಯ ಮಂಜುನಾಥ್ ಗಾಯನಕ್ಕೆ ಶ್ರೋತೃಗಳು ಫಿದಾ
- ಮನಸೂರೆಗೊಂಡ ಶ್ರೀನಿಧಿ ರಾಮಸ್ವಾಮಿ ನೃತ್ಯ ಪ್ರದರ್ಶನ
- ಪಟ್ಟಾಭಿರಾಮ ಸೇವಾ ಮಂಡಳಿಯಲ್ಲಿ ಮೇಳೈಸಿದ ಶಾಸ್ತ್ರೀಯ ನಾದ
- ಗಾನ-ನೃತ್ಯ ಸಂಗಮಕ್ಕೆ ಬೆಂಗಳೂರು ಕಲಾಪ್ರೇಮಿಗಳ ಸಾಕ್ಷಿ
- ಪರಮ್ ಫೌಂಡೇಶನ್‌ನ ಪರಮ್ ವಿಹಾರ ಹತ್ತನೇ ಸರಣಿ ಯಶಸ್ವಿ

# ಎಸ್ಸಿ ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದ ಶಾಸಕ, ಲೋಕಸಭಾ ಸದಸ್ಯರುಗಳ ರಾಜೀನಾಮೆಗೆ ಆಗ್ರಹ




**ಮಂಡ್ಯ:** ಪರಿಶಿಷ್ಟ ಜಾತಿ ಪಟ್ಟಿಗೆ ಅಸಂವಿಧಾನಿಕವಾಗಿ ಸೇರ್ಪಡೆ ಮಾಡಿದ ಸ್ಪರ್ಶ ಓ.ಬಿ.ಸಿ ಜಾತಿಗಳನ್ನು ಪಟ್ಟಿಯಿಂದ ತೆಗೆಯಬೇಕು. ಎಸ್ಸಿ ಮೀಸಲು ಕ್ಷೇತ್ರಗಳಿಂದ ಆಯ್ಕೆಯಾದ ಶಾಸಕ, ಲೋಕಸಭಾ ಸದಸ್ಯರು ರಾಜೀನಾಮೆ ನೀಡಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಸ್ವಾಭಿಮಾನ–ಜಾಗೃತಿ ಅಭಿಯಾನ ಸಮಿತಿಯ ರಾಜ್ಯಾಧ್ಯಕ್ಷ ಸಿ.ಎಂ.ಕೃಷ್ಣ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಹೊಲೆಯ–ಮಾದಿಗ ಜಾತಿಗಳು ಮಾತ್ರ ನೈಜ ಅಸ್ಪೃಶ್ಯ ಜಾತಿಗಳಾಗಿವೆ. ಸ್ಪರ್ಶ ಒಬಿಸಿ ಜಾತಿಗಳಾದ ಬಂಜಾರ, ಲಂಬಾಣಿ, ಬೋವಿ, ಕೊರಮ, ಕೊರಚ, ಬೇಡ ಜಂಗಮ, ಬುಡಗ ಜಂಗಮ, ಅಲೆಮಾರಿ, ಸಮುದಾಯಗಳನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಅಕ್ರಮವಾಗಿ ಸೇರಿಸಲಾಗಿದೆ ಎಂದು ದೂರಿದರು.

ಈ ಜಾತಿಗಳನ್ನು ಪಟ್ಟಿಯಿಂದ ತೆಗೆಯಲು ಸರ್ವೋಚ್ಚ ನ್ಯಾಯಾಲಯವು 2020ರಲ್ಲೇ ಆದೇಶ ಹೊರಡಿಸಿದೆ. ಈ ಆದೇಶದಂತೆ ರಾಷ್ಟ್ರೀಯ ಆಯೋಗವು ರಾಜ್ಯದ ಮುಖ್ಯಕಾರ್ಯದರ್ಶಿಗೆ 2020ರಲ್ಲಿ ಎರಡು ಬಾರಿ ಈ ಜಾತಿಗಳನ್ನು ತೆಗೆಯಲು ಆದೇಶಿಸಿದ್ದರೂ ಐದು ವರ್ಷಗಳಿಂದ ಪ್ರಸ್ತಾವನೆ ಸಲ್ಲಿಸದೇ ಹಾಗೆಯೇ ಉಳಿಸಿಕೊಂಡಿದೆ ಎಂದು ಆರೋಪಿಸಿದರು.

ನ್ಯಾಯಾಲಯದ ಆದೇಶ ಹಾಗೂ ಒಳ ಮೀಸಲಾತಿ ಜಾರಿಗೆ ಅಡ್ಡಿಯಾಗಿರುವ ಸ್ಪರ್ಶ ಓಬಿಸಿ ಜಾತಿಗಳನ್ನು ಪರಿಶಿಷ್ಟ ಜಾತಿಗಳ ಪಟ್ಟಿಯಿಂದ ತೆಗೆಯಲು ಪ್ರಸ್ತಾವನೆ ಸಲ್ಲಿಸುವ ಸಲುವಾಗಿ ಮಾ.27ರಂದು ನಡೆಯುವ ಸಚಿವ ಸಂಪುಟ ಸಭೆಯಲ್ಲಿ ಸರಕಾರ ತೀರ್ಮಾನ ಅಂಗೀಕರಿಸಿಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿಯ ಸಮುದಾಯಗಳ ಸಂವಿಧಾನಿಕ ಹಕ್ಕು, ಅವಕಾಶ, ಸವಲತ್ತು ಸಂರಕ್ಷಣೆ ಮಾಡುವಲ್ಲಿ ವಿಫಲರಾದ ಎಸ್ಸಿ ಮೀಸಲು ಕ್ಷೇತ್ರದಿಂದ ಆಯ್ಕೆಯಾದ ಶಾಸಕರು, ಸಂಸದರು, ಮಂತ್ರಿಗಳು ನೈತಿಕ ಹೊಣೆಹೊತ್ತು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಜಿಲ್ಲಾ ಮುಖಂಡ ಎಚ್.ಜಿ.ಗಂಗರಾಜು, ಸರಕಾರಿ ನೌಕರರ ಒಕ್ಕೂಟದ ಜಿಲ್ಲಾಕಾರ್ಯದರ್ಶಿ ಸಿ.ವೆಂಕಟೇಶ್, ನಂಜುಂಡ ಮೌರ್ಯ ಇದ್ದರು.

# ಇಂದಿನಿಂದ ಅಂತರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆ

**ಮಂಡ್ಯ:** ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆಯು ಕರ್ನಾಟಕ ಸರಕಾರದ ಕೃಷಿ ಇಲಾಖೆಯ ಸಹಯೋಗದೊಂದಿಗೆ ಏ.24ರಿಂದ ಮೂರು ದಿನ ಬೆಂಗಳೂರಿನ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ಅಂತರಾಷ್ಟ್ರೀಯ ಕೃಷಿ ತಂತ್ರಜ್ಞಾನ ಶೃಂಗಸಭೆಯನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷೆ ಉಮಾರೆಡ್ಡಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯು ಹೆಚ್ಚು ವಾಣಿಜ್ಯ ಉದ್ದೇಶಿತ, ಉತ್ಪಾದನೆಯ ಸೇವೆಯಲ್ಲಿ ತೊಡಗಿರುತ್ತದೆ. ವಾಣಿಜ್ಯ ಸಂಸ್ಥೆಗಳು ಹಾಗೂ ರೈತರು ಇಬ್ಬರನ್ನು ಒಂದೇ ವೇದಿಕೆಗೆ ತಂದು ತಂತ್ರಜ್ಞಾನ ಪರಿಚಯಿಸುವ ಉದ್ದೇಶದಿಂದ ಈ ಶೃಂಗಸಭೆ ಆಯೋಜಿಸಲಾಗಿದೆ ಎಂದರು.

ತಂತ್ರಜ್ಞಾನ, ವಾಣಿಜ್ಯದ ಬಗ್ಗೆ ರೈತರಿಗೆ ತಿಳುವಳಿಕೆ ಇದ್ದರೆ, ಅವರ ಕೃಷಿ ಅಭಿವೃದ್ಧಿಯಾಗಲಿದೆ. ಈ ಸಂಬಂಧ ಕೃಷಿ ವಿವಿಯ ಕುಲಪತಿ ಡಾ.ಕೆ.ಸಿ.ನಾರಾಯಣಸ್ವಾಮಿ ಭೇಟಿ ಮಾಡಿದ್ದು, ಮಂಡ್ಯದಿಂದ ಹೆಚ್ಚು ರೈತರು ಭಾಗವಹಿಸಲಿದ್ದಾರೆ ಎಂದು ಭರವಸೆ ನೀಡಿದ್ದಾರೆ. ಬೆಂಗಳೂರಿನಲ್ಲಿ ನಡೆಯಲಿರುವ ಈ ಕಾರ್ಯಕ್ರಮಕ್ಕೆ ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಬೆಂಬಲಿಸುವುದಾಗಿ ತಿಳಿಸಿದ್ದಾರೆ ಎಂದು ಹೇಳಿದರು.

ಹೊಸ ತಂತ್ರಜ್ಞಾನ, ನೂತನ ಆವಿಷ್ಕಾರ, ಕೃಷಿ ಮತ್ತು ಆಹಾರ ಸಂಸ್ಕರಣಾ ಕ್ಷೇತ್ರಗಳಲ್ಲಿ ವ್ಯಾಪಾರದ ಅವಕಾಶಗಳು, ಕೃಷಿ ತಂತ್ರಜ್ಞಾನದಲ್ಲಿ ಹೂಡಿಕೆ ಮತ್ತು ನಾವಿನ್ಯತೆಯ ಉತ್ತೇಜನ, ಕೃಷಿ ಉದ್ಯಮಿಗಳು ಹಾಗೂ ಕೃಷಿ ಸ್ಟಾರ್ಟಪ್‌ಗಳ ಬೆಳವಣಿಗೆಗೆ ಬೆಂಬಲ, ರೈತರ ಆದಾಯ ಹೆಚ್ಚಿಸುವದು ಶೃಂಗಸಭೆಯ ಉದ್ದೇಶ ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಸಂಸ್ಥೆಯ ಚೇರ್‌ಮನ್ ರೂಪಾರಾಣಿ, ನಿರ್ದೇಶಕರಾದ ಪ್ರಭಾಕರನ್, ಕೆ.ಎನ್.ನರಸಿಂಹಮೂರ್ತಿ, ಮಂಡ್ಯ ಜಿಲ್ಲೆಯ ಕಾರ್ಯದರ್ಶಿ ಸತೀಶ್ ಬಾಬು ಇದ್ದರು.




# ಮಾ.27ರಂದು ಶ್ರೀ ರಂಗನಾಥಸ್ವಾಮಿಯವರ ಬ್ರಹ್ಮರಥೋತ್ಸವ


**ತುಮಕೂರು:** ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ಸ್ವಾಂದೇನಹಳ್ಳಿ ಬೆಟ್ಟದ ಮೇಲಿರುವ(ದೇವರಾಯನ ದುರ್ಗದ ಅರಣ್ಯ ಪ್ರದೇಶ) ಶ್ರೀ ರಂಗನಾಥಸ್ವಾಮಿಯವರ ಬ್ರಹ್ಮರಥೋತ್ಸವವನ್ನು ಸ್ವಾಂದೇನಹಳ್ಳಿ ಗ್ರಾಮದಲ್ಲಿ ಮಾರ್ಚ್ 27ರಂದು ಮಧ್ಯಾಹ್ನ 1.30 ರಿಂದ 2 ಗಂಟೆಯೊಳಗೆ ನಡೆಸಲಾಗುವುದು.

ರಥೋತ್ಸವದ ದಿನದಂದು ಅನ್ನಸಂತರ್ಪಣೆ ಏರ್ಪಡಿಸಲಾಗಿದೆ. ಮಾರ್ಚ್ 26 ರಿಂದ 30ರವರೆಗೆ ಶ್ರೀ ರಂಗನಾಥಸ್ವಾಮಿಯವರ ಜಾತ್ರೆ ನಡೆಯಲಿದ್ದು, ಜಾತ್ರೆಯ ಪ್ರಯುಕ್ತ ಮಾ.26ರಂದು ವಿಷ್ವಕ್ಸೇನ ದೇವತಾರಾಧನ ಪೂರ್ವಕ ಸ್ವಸ್ತಿ ಪುಣ್ಯಾಹವಾಚನ, ಅಂಕುರಾರೋಹಣ ಬೆಟ್ಟದ ಮೇಲೆ ಧ್ವಜಾರೋಹಣ, ಕಲ್ಯಾಣೋತ್ಸವ, ಶ್ರೀ ದೊಡ್ಡಯ್ಯಸ್ವಾಮಿ ಮತ್ತು ಶ್ರೀರಂಗನಾಥಸ್ವಾಮಿಯವರಿಗೆ ಪಂಚಾಮೃತಾಭಿಷೇಕ ಸೇವೆಗಳು ಜರುಗಲಿವೆ. ಮಾ.27ರಂದು ರಾತ್ರಿ ರಥೋತ್ಸವ, ಗರುಡೋತ್ಸವ, ಶೇಷವಾಹನೋತ್ಸವ, ಧವನೋತ್ಸವ; ಮಾ.28, 29ರಂದು ಉತ್ಸವಗಳು ಹಾಗೂ ಮಾ.30ರಂದು ಧ್ವಜಾರೋಹಣ, ಕಂಕಣ ವಿಸರ್ಜನೆ ಮತ್ತಿತರ ವಿಶೇಷ ಪೂಜಾ ಕಾರ್ಯಕ್ರಮಗಳು ನಡೆಯಲಿವೆ. ಬ್ರಹ್ಮರಥೋತ್ಸವದ ಅಂಗವಾಗಿ ವಿವಿಧ ಜನಪ್ರತಿನಿಧಿಗಳು, ಅಧಿಕಾರಿಗಳು ಹಾಗೂ ಸ್ವಾಂದೇನಹಳ್ಳಿ ಗ್ರಾ.ಪಂ. ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಸೇರಿದಂತೆ ಗ್ರಾಮಸ್ಥರು ಭಾಗವಹಿಸುವರು.

# ಜ್ಞಾನ ಭಕ್ತಿ ವೈರಾಗ್ಯ ಸಂಗಮ

## ಜಗದ್ಗುರು ಶ್ರೀಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು

**ಭಾರತೀ ಕರುಣಾ ಪಾತ್ರಂ ಭಾರತೀ ಪದ ಭೂಷಣಂ**
**ಭಾರತೀ ಪದಮಾರೂಢಂ ಭಾರತೀ ತೀರ್ಥಮಾಶ್ರಯೇ**



ಆಶಾ ನಾಗಭೂಷಣ

ಜಗದ್ಗುರು ಶ್ರೀಶಂಕರಾಚಾರ್ಯರು ಧರ್ಮರಕ್ಷಣೆಗಾಗಿ ದೇಶದ ನಾಲ್ಕು ದಿಕ್ಕುಗಳಲ್ಲಿ ಆಮ್ನಾಯ ಪೀಠಗಳನ್ನು ಸ್ಥಾಪಿಸಿ ಅದರ ಮೂಲಕ ಧರ್ಮ ಪ್ರಚಾರ ಕೈಗೊಳ್ಳಲು ಯತಿಗಳನ್ನು ನೇಮಕ ಮಾಡುತ್ತಾರೆ. ದಕ್ಷಿಣ ಭಾಗದಲ್ಲಿ ಸ್ಥಾಪಿಸಿದ ಪೀಠವೇ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ. ಈ ಪೀಠದ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳ ಶಿಷ್ಯರಾದ 36ನೇ ಜಗದ್ಗುರುಗಳಾಗಿ ನಿಯುಕ್ತರಾದವರು ಶ್ರೀ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು.


**ಶುಚಿರ್ಜಿತೇಂದ್ರಿಯೋ ವೇದವೇದಾಂಗಾಧಿವಿಚಕ್ಷಣಃ**
**ಯೋಗಜ್ಞಃ ಸರ್ವಶಾಸ್ತ್ರಜ್ಞಃ ಸ ಮದಾಸ್ಥಾನಮರ್ಹತಿ**

ಇದು ಶ್ರೀ ಶಂಕರ ಭಗವತ್ಪಾದರ ಮಹಾನುಶಾಸನೋಕ್ತಿ. ಇದಕ್ಕೆ ಸಕಲ ಸಲ್ಲಕ್ಷಣ ಶೋಭಿತರಾದವರು ಶ್ರೀಶೃಂಗೇರಿ ಶಾರದಾಪೀಠದ 36ನೇ ಅಧಿಪತಿಗಳಾದ ಶ್ರೀ ಭಾರತೀ ತೀರ್ಥ ಮಹಾಸ್ವಾಮಿಗಳು. ಸಕಲ ಆಸ್ತಿಕ ಜನರ ಶ್ರೇಯಸ್ಸೇ ಅವರ ಪರಮಧ್ಯೇಯ. ಪ್ರತಿನಿತ್ಯ ಶ್ರೀ ಶಾರದಾಚಂದ್ರಮೌಳೀಶ್ವರರ ಪೂಜೆಯನ್ನು ಮಾಡುತ್ತ ಆಸೇತುಶೀತಾಚಲ ವಿಶೇಷವಾಗಿ ಧರ್ಮಪ್ರಚಾರ ಮಾಡುತ್ತಿದ್ದಾರೆ. ಜಿಜ್ಞಾಸುಗಳಾದ ಶಿಷ್ಯಜನರಿಗೆ ಧರ್ಮ–ಬ್ರಹ್ಮ ತತ್ವಗಳನ್ನು ಉಪದೇಶಿಸುತ್ತ ವೇದಶಾಸ್ತ್ರ ಪ್ರಚಾರ, ಬಡಜನರಿಗೆ ಉಪಕಾರ ಮೊದಲಾದ ಅನೇಕ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿದ್ದಾರೆ. ಈ ಪೀಠದ ಸರ್ವತೋಮುಖ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಪೀಠದ ಕೀರ್ತಿಯನ್ನು ವಿಶ್ವದ ಎಲ್ಲೆಡೆಗೂ ಪಸರಿಸಿದ್ದಾರೆ.

ಆಂಧ್ರಪ್ರದೇಶದ ಗುಂಟೂರು ಜಿಲ್ಲೆಯ ಪಲ್ನಾಡು ತಾಲೂಕಿನ ಅಲಗು ಮಲ್ಲೇ ಪಾಡು ಗ್ರಾಮದ ವೆಂಕಟೇಶ್ವರ ಅವಧಾನಿ ಹಾಗೂ ಅನಂತ ಲಕ್ಷ್ಮಿ ಅವಧಾನಿ. ಇವರ ಮಗನಾಗಿ 1951ರ ಏಪ್ರಿಲ್ 11ರ ಶುಭ ಬುಧವಾರದಂದು ಜನಿಸಿದರು. ಮಗುವಿಗೆ ಸೀತಾರಾಮಾಂಜನೇಯಲು' ಎಂದು ನಾಮಕರಣ ಮಾಡಿದರು. ಇವರು ಶ್ರೀರಾಮಚಂದ್ರನಂತೆ ಧರ್ಮರಕ್ಷಕರೂ, ಶ್ರೀ ಆಂಜನೇಯನಂತೆ ಕಾರ್ಯ ಸಾಧಕರಾಗುವರು ಎಂಬ ಭವಿಷ್ಯದಂತೆ ಇವರು ಶೃಂಗೇರಿ ಜಗದ್ಗುರು ಶ್ರೀ ಶಾರದಾ ಪೀಠದ ಜಗದ್ಗುರುಗಳಾಗಿ ಸಂಪನ್ನಗೊಂಡರು.

ಬಾಲ್ಯದಲ್ಲಿಯೇ ವಾಕ್ಚಾತುರ್ಯ, ತನ್ಮಯತೆ, ಪ್ರೌಢಿಮೆ, ತೀಕ್ಷ್ಣಮತ್ತು ಸೂಕ್ಷ್ಮತೆ ಹಾಗೂ ಇವರಿಗೆ ಸಹಜವಾಗಿ ಬಂದ ದೈವ ಭಕ್ತಿ ಕಂಡು ಪೋಷಕರು ಆಶ್ಚರ್ಯ ಗೊಂಡರು. ಮನೆಯಲ್ಲಿ ಹಿರಿಯರು ಮಾಡುವ ಪೂಜೆ, ವ್ರತ ಕಥೆ,ನೇಮ ನಿಷ್ಠೆ ಪೂಜಾ ಕಾರ್ಯಗಳು, ಸ್ತೋತ್ರ ಪಠಣ, ಪುರಾಣ– ಪುಣ್ಯ ಕಥೆಗಳು ಇವರ ಮನಸ್ಸನ್ನು ಸೆಳೆಯುತ್ತಿದ್ದವು. ಶಿವನಾಮ ಜಪ ಇವರಿಗೆ ಅತ್ಯಂತ ಪ್ರಿಯವಾಗಿತ್ತು ವಿದ್ಯಾಭ್ಯಾಸದಲ್ಲಿ ತನ್ಮಯರಾಗಿದ್ದರು. ಸಂಸ್ಕೃತ ಭಾಷೆ ಕರಗತವಾಗಿತ್ತು. ತಮ್ಮ ಏಳನೇ ವಯಸ್ಸಿನಲ್ಲಿ ಬ್ರಹ್ಮೋಪದೇಶ ಪಡೆದರು. ಉತ್ತರಾಧಿಕಾರಿಯಾಗಿ ಎಂಟು ವರ್ಷಗಳಲ್ಲೆ ಕೃಷ್ಣ ಯಜುರ್ವೇದ, ಪೂರ್ವೋತ್ತರ ಮೀಮಾಂಸ ಗಳು, ನ್ಯಾಯಶಾಸ್ತ್ರ ಮತ್ತಿತರ ಶಾಸ್ತ್ರಗಳನ್ನೂ ಓದಿದ್ದರು. ಇವರು ಸಂಸ್ಕೃತದ ಕವಿ. 'ಭಾರತಿ ತೀರ್ಥ'ರು ಎಂಬ ನಾಮದಲ್ಲಿ ಯತಿವರ್ಯರಾದರು.

ಒಂದು ಧ್ಯೇಯದೊಂದಿಗೆ ಜನಿಸಿದ ಮಹಾನ್ ಆತ್ಮಗಳು ಬಂಧನದ ಷರತ್ತುಬದ್ಧ ವೃತ್ತಕ್ಕೆ ಅಂಟಿಕೊಳ್ಳುವುದಿಲ್ಲ. ಈ ಗಾದೆಗೆ ಸರಿಯಾಗಿ, 1966 ರಲ್ಲಿ, ಪ್ರಸಿದ್ಧ ಬ್ರಹ್ಮಚಾರಿ ಒಮ್ಮೆ ಮತ್ತು ಶಾಶ್ವತವಾಗಿ ಮನೆಯಿಂದ ಹೊರಟು ಉಜ್ಜಯಿನಿಯನ್ನು ತಲುಪಿದರು, ಅಲ್ಲಿ ಅವರ ಗುರುಗಳಾದ ಶೃಂಗೇರಿ ಶ್ರೀ ಶಾರದಾ ಪೀಠದ 35 ನೇ ಪೀಠಾಧಿಪತಿಗಳಾದ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಜಿ ಅವರು ಶಿಬಿರ ಹೂಡಿದ್ದರು ಮತ್ತು ಮಹಾನ್ ಗುರುಗಳಿಗೆ ಶರಣಾದರು. ಅವರು ಸುಮಾರು ಎಂಟು ವರ್ಷಗಳ ಕಾಲ ತಮ್ಮ ಗುರುಗಳ ಪವಿತ್ರ ಪಾದಗಳಿಗೆ ಸೇವೆ ಸಲ್ಲಿಸಿದರು. 1974 ರಲ್ಲಿ ಸನ್ಯಾಸ ಸ್ವೀಕರಿಸಿದ ಅವರು, ಸುಮಾರು 15 ವರ್ಷಗಳ ಕಾಲ ತಮ್ಮ ಪವಿತ್ರ ಗುರುಗಳ ದೈವಿಕ ಆರೈಕೆ ಮತ್ತು ಮಾರ್ಗದರ್ಶನದಲ್ಲಿ ಮುಂದುವರಿಯುವ ಅವಕಾಶವನ್ನು ಪಡೆದರು. 1989 ರಲ್ಲಿ 36 ನೇ ಜಗದ್ಗುರು



ದೂರದ ಮತ್ತು ಹತ್ತಿರದ ಜನರನ್ನು ಸದ್ಗುಣಶೀಲ ಜೀವನದತ್ತ ಎಳೆದಿವೆ. ಒಬ್ಬ ಸಮರ್ಥ ಆಡಳಿತಗಾರರಾದ ಶ್ರೀಗಳು, ಮಠವು ಅದರ ದೈವಿಕ ಸ್ಥಾಪಕ ಜಗದ್ಗುರು ಶ್ರೀ ಆದಿ ಶಂಕರಾಚಾರ್ಯರು ನಿಗದಿಪಡಿಸಿದಂತೆ ಸನಾತನ ಧರ್ಮದ ಪೋಷಣೆ ಮತ್ತು ಪ್ರಸರಣದ ಪವಿತ್ರ ಉದ್ದೇಶವನ್ನು ಅಕ್ಷರಶಃ ಮತ್ತು ಆತ್ಮದಿಂದ ಪೂರೈಸುವಂತೆ ನೋಡಿಕೊಳ್ಳುತ್ತಾರೆ.

ಒಮ್ಮೆ ಉಜ್ಜಯಿನಿಯಲ್ಲಿ ವಿದ್ಯಾ ತೀರ್ಥರ ದರ್ಶನ ಭಾಗ್ಯ ಸೀತಾರಾಮರಿಗೆ ದೊರೆತಾಗ ತಮ್ಮನ್ನು ಶಿಷ್ಯನನ್ನಾಗಿ ಸ್ವೀಕರಿಸ ಬೇಕೆಂದು ಪ್ರಾರ್ಥಿಸಿದರು. ಬಾಲಕನ ತೇಜಸ್ಸು ನೋಡಿದ ವಿದ್ಯಾ ತೀರ್ಥರು ನವರಾತ್ರಿ ಉತ್ಸವ ಸಂದರ್ಭದಲ್ಲಿ, ಶಿಷ್ಯ ಸ್ವೀಕಾರ ಚಿಂತನೆಯಲ್ಲಿ ಗರ್ಭಗುಡಿ ಪ್ರವೇಶಿಸಿ ಶಾರದಾಂಬೆಯ ಮುಂದೆ ಕುಳಿತು ಧ್ಯಾನಸ್ಥರಾದಾಗ ದೇವಿಯ ದರ್ಶನವಾಗಿ ಸೂಚನೆ ಸಿಕ್ಕಿತು. ತಾಯಿಯ ಕೃಪೆ ಯಂತೆ ಸೀತಾರಾಮರಿಗೆ ಶ್ರೀ ಭಾರತಿ ತೀರ್ಥಎಂಬ ನಾಮ ದೊಂದಿಗೆ ಯೋಗ ಪಟ್ಟವನ್ನ ಅನುಗ್ರಹಿಸಿ, ಪ್ರಣವಮಂತ್ರ ಚತುರ್ವೇದ ಮಹಾ ವಾಕ್ಯಗ ಳನ್ನು ಉಪದೇಶಿಸಿದರು. ಶಂಕರಾಮ್ನಾಯ ಪೀಠ ಜನಗಳಿಗೆ ಧರ್ಮವನ್ನು ಬೋಧಿಸುವುದಕ್ಕೆ ಸೀಮಿತ ವಾಗಿರುವುದು, ಅನ್ಯ ವಿಚಾರ ಗಳಿಗಲ್ಲ ಎಂದು ಆದಿ ಗುರು ಶಂಕರಾಚಾರ್ಯರ ಆದೇಶವು ಶಾರದಾ ಪೀಠದ ವೈಶಿಷ್ಟ್ಯ. ಇಂಥ ಗುರುತರವಾದ ಜವಾಬ್ದಾರಿಯನ್ನು ವಿದ್ಯಾ ತೀರ್ಥ ಮಹಾಸ್ವಾಮಿಗಳು, ಭಾರತಿ ತೀರ್ಥರಿಗೆ ಒಪ್ಪಿಸಿದರು.

ಶಂಕರಾಚಾರ್ಯರಾಗಿ ಅತೀಂದ್ರಿಯ ಜ್ಞಾನದ ಸಿಂಹಾಸನಕ್ಕೆ ಏರಿದ ನಂತರ, ಶ್ರೀ ಭಾರತಿ ತೀರ್ಥ ಮಹಾಸ್ವಾಮಿಜಿ ಅವರು ಅಂದಿನಿಂದ ಅಸಂಖ್ಯಾತ ಆಧ್ಯಾತ್ಮಿಕ ಆಕಾಂಕ್ಷಿಗಳ ಹಿಂದೆ ಮಾರ್ಗದರ್ಶಕ ಚೈತನ್ಯವಾಗಿದ್ದಾರೆ.

ಅವರ ಮಹಿಮೆಗಳು ಅಪಾರ ಆದರೂ ಅವರ ಪರಮಪೂಜ್ಯರು ತುಂಬಾ ಸರಳರು, ವಿನಮ್ರರು ಮತ್ತು ಅಹಂಕಾರದಿಂದ ಸಂಪೂರ್ಣವಾಗಿ ಮುಕ್ತರು. ಪ್ರತಿದಿನ ಸಾವಿರಾರು ಜನರು ಅವರ ದರ್ಶನ ಪಡೆಯಲು ಮತ್ತು ಅಪಾರ ಅನುಗ್ರಹವನ್ನು ಪಡೆಯಲು ಅವರ ನಿವಾಸಕ್ಕೆ ಭೇಟಿ ನೀಡುತ್ತಾರೆ. ಅವರ ಅತ್ಯಂತ ಕರುಣಾಮಯಿ ಕಣ್ಣುಗಳಿಂದ ಬರುವ ಕರುಣಾಮಯ ನೋಟವು ಸಂತೋಷದಾಯಕ ಜೀವನಕ್ಕೆ ಇರುವ ದೊಡ್ಡ ಅಡಚಣೆಯನ್ನು ಸಹ ಬೇರ್ಪಡಿಸುತ್ತದೆ. ಒಬ್ಬ ವಿದ್ವತ್ಪೂರ್ಣ ವಿದ್ವಾಂಸರಾದ ಶ್ರೀಗಳು ತಮ್ಮ ಗುರು, ಹಿಂದಿನ ಗುರುಗಳು ಮತ್ತು ದೇವರ ವಿವಿಧ ರೂಪಗಳನ್ನು ಹೊಗಳುತ್ತಾ ಅನೇಕ ದೈವಿಕ ಶ್ಲೋಕಗಳನ್ನು ರಚಿಸಿದ್ದಾರೆ. ಶ್ರೀಗಳು ಬಹುಮುಖ ಭಾಷಾಶಾಸ್ತ್ರಜ್ಞರೂ ಆಗಿದ್ದಾರೆ. ಪರಿಶುದ್ಧ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಮತ್ತು ಹಿಂದಿ ಭಾಷೆಗಳಲ್ಲಿ ಅವರ ಪ್ರವಚನಗಳು ಮತ್ತು




ಶಾರದಾ ಪೀಠದ 36ನೇ ಶಂಕರಾಚಾರ್ಯರು. ತೇಜಸ್ವಿಗಳು ತಪೋನಿಷ್ಠರು, ಸನಾತನ ಧರ್ಮರಕ್ಷಕರು, ಮನುಕುಲದ ಒಳಿತಿಗಾಗಿ ಶ್ರಮಿಸು ತ್ತಿರುವ ಅದ್ವಿತೀಯ ಚೇತನ. ಇವರು ಹಲವಾರು ಯೋಜನೆಗಳನ್ನು ಕೈಗೊಂಡು ಯಶಸ್ವಿಯಾಗಿ ಪೂರೈಸಿದ್ದಾರೆ. ತುಂಗಾ ನದಿಯ ಆಚೆಯ ದಡದಲ್ಲಿ ಇರುವ ನರಸಿಂಹ ವನಕ್ಕೆ ಹೋಗಲು ಭಕ್ತಾದಿಗಳಿಗಾಗಿ ಕಟ್ಟಿಸಲು ಪ್ರಾರಂಭಿಸಿದ ಸಿಮೆಂಟ್ ಸೇತುವೆಯನ್ನು ಪೂರ್ಣಗೊಳಿಸಿದ ಶ್ರೀಗಳು ಸಾರ್ವಜನಿಕರಿಗೆ ಅನುವು ಮಾಡಿ ಆ ಸೇತುವೆಗೆ ವಿದ್ಯಾ ತೀರ್ಥ ಸೇತು ಎಂದೇ ನಾಮಕರಣ ಮಾಡಿದ್ದಾರೆ.

ಶೃಂಗೇರಿ ಕ್ಷೇತ್ರಕ್ಕೆ ಬರುವ ಭಕ್ತರಿಗಾಗಿ ಏಕಕಾಲದಲ್ಲಿ 2000 ಜನ ಭೋಜನ ಮಾಡುವ ವ್ಯವಸ್ಥೆಯುಳ್ಳ ಶ್ರೀ ಭಾರತಿ ತೀರ್ಥ ಪ್ರಸಾದ ಎಂಬ ಬೃಹತ್ ಭೋಜನ ಶಾಲೆ ನಿರ್ಮಾಣವಾಗಿದೆ ಹಾಗೆ ಯಾತ್ರಿಕರಿಗೆ ಅಗತ್ಯ ವಾದ ವಸತಿ ನಿಲಯಗಳು– ಯಾತ್ರಿ ನಿವಾಸ, ಶಾರದಾ ಕೃಪ, ಮತ್ತು ವಿದ್ಯಾ ಭಾರತಿ ನಿಲಯ ಎಂಬ ಮೂರು ಬೃಹತ್ ಕಟ್ಟಡಗಳನ್ನು ನಿರ್ಮಾಣ ಮಾಡಿದ್ದಾರೆ. ಐದು ಭೋಜನ ಶಾಲೆ ವಸತಿ ಗ್ರಹಗಳು ಆಕರ್ಷಕ ಭವನಗಳಾಗಿವೆ. ಯಾತ್ರಿ ನಿವಾಸದ ಉದ್ಘಾಟನೆ ಭಾರತದ ರಾಷ್ಟ್ರಪತಿಗಳಾಗಿದ್ದ ಶ್ರೀ ಶಂಕರ ದಯಾಳ ಶರ್ಮರವರಿಂದ ನೆರವೇರಿದ್ದು ಒಂದು ವೈಶಿಷ್ಟ್ಯ.

ಇಂಥ ಹಲವು ಯೋಜನೆಗಳ ಸಂಕಲ್ಪ ಮಾಡಿ ಕಾರ್ಯರೂಪಕ್ಕೆ ತಂದಿದ್ದಾರೆ. ಅವು ಶ್ರೀ ಶಾರದಾ ಧನ್ವಂತರಿ ಆಸ್ಪತ್ರೆ, ಸದ್ವಿದ್ಯಾ ಸಂಜೀವಿನಿ ಸಂಸ್ಕೃತ ಪಾಠ ಶಾಲೆ, ಸ್ಮಾರಕ ಭವನ, ಒಳಾಂಗಣದ ಉತ್ಸವಕ್ಕೆ ಸುಂದರ ಸ್ವರ್ಣ ರಥ ಅಂತರಾಷ್ಟ್ರೀಯ ಅದ್ವೇತ ಸಂಶೋಧನಾ ಕೇಂದ್ರ ಸ್ಥಾಪನೆ, ಬೆಂಗಳೂರಿನಲ್ಲಿ ಶ್ರೀ ಶಾರದಾ ಧನ್ವಂತರಿ ಸಾರ್ವಜನಿಕ ಆಸ್ಪತ್ರೆ, ಶಾರದಾ ರೋಟರಿ ಹೆಲ್ತ್ ಕೇರ್ ಸೆಂಟರ್, ಪ್ರಯಾಗ ಕ್ಷೇತ್ರದ ಲ್ಲಿ ಶ್ರೀ ಮಠದ ಸಂಕೀರ್ಣ ನಿರ್ಮಾಣ, ರಾಮೇಶ್ವರ ಕ್ಷೇತ್ರದಲ್ಲಿ ಶ್ರೀ ಮಠ ನಿರ್ಮಾ ಣ, ನಂಜನಗೂಡು ಕ್ಷೇತ್ರದಲ್ಲಿ ಕಟ್ಟಡ ನಿರ್ಮಾಣ, ದೆಹಲಿಯಲ್ಲಿ ಶ್ರೀಮಠದ ಸಂಶೋಧನಾ ಕೇಂದ್ರ ಸ್ಥಾಪನೆ, ಅಮೆರಿಕದ ಯೂನಿವರ್ಸಿಟಿಯಲ್ಲಿ ಶ್ರೀ ಶಾರದಾ ಶಂಕರರ ಮಂದಿರಗಳ ನಿರ್ಮಾಣ ಸೇರಿದಂತೆ ಸನಾತನ ಧರ್ಮ ಪ್ರಚಾರಕ್ಕಾಗಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ವಿಜಯ ಸಾಧಿಸುವುದರೊಂದಿಗೆ ಶ್ರೀಶ್ರೀ ಭಾರತೀ ತೀರ್ಥ ಸ್ವಾಮಿಗಳವರ ಸಂಕಲ್ಪದಂತೆ ನೆರವೇರಿದೆ.

ಶ್ರೀ ಭಾರತಿ ತೀರ್ಥ ಮಹಾ ಸ್ವಾಮಿಗಳು ಶಂಕರಾಚಾರ್ಯರು ಹಾಕಿಕೊಟ್ಟ ಪರಂಪರೆಯಂತೆ, 37ನೇ ಉತ್ತರಾಧಿಕಾರಿಯಾಗಿ ಶ್ರೀ ಶ್ರೀ ವಿಧು ಶೇಖರ ಸ್ವಾಮಿಯನ್ನು ಆಯ್ಕೆ ಮಾಡಿದ್ದಾರೆ. ಸ್ವಾಮಿಗಳ ಪೂರ್ವಾಶ್ರಮದ ಹೆಸರು ಕುಪ್ಪಾ ವೆಂಕಟೇಶ್ವರ ಪ್ರಸಾದ ಶರ್ಮ. ಉತ್ತರಾಧಿಕಾರಿಯಾಗಿ ಮಾಡುವಾಗ ಹೊಸ ಹೆಸರು ನಾಮಕರಣ ಮಾಡಬೇಕು. ಶ್ರೀ ಭಾರತಿ ತೀರ್ಥ ಸ್ವಾಮಿಗಳಿಗೆ ತಮ್ಮ ಮಹಾ ಗುರುಗಳಾದ ಶ್ರೀ ಚಂದ್ರಶೇಖರ ಭಾರತಿ ಸ್ವಾಮೀಜಿಯವರ ಹೆಸರನ್ನೆ ಇಡುವ ಇಚ್ಛೆಯಾಗಿತ್ತು. ಆದರೆ ತಮ್ಮ ಗುರು ಗಳ ಹೆಸರನ್ನು ತಮ್ಮ ಶಿಷ್ಯನಿಗೆ ಇಟ್ಟು ಅದೇ ಹೆಸರಿನಿಂದ ಕರೆಯುವುದು ಸರಿ ಅನಿಸಲಿಲ್ಲ. ಕೊನೆಗೂ ಯೋಚಿಸಿ ವಿಧು ಎಂದರೆ ಚಂದ್ರ ಹೀಗೆ ವಿಧು ಶೇಖರ ಹೆಸರನ್ನೆ ಇಟ್ಟರು. ಎಲ್ಲಾ ಗುರುಗಳ ಆಶಯದಂತೆ ಶ್ರೀ ಶ್ರೀ ವಿಧು ಶೇಖರ ಸ್ವಾಮಿಗಳು. ತಮ್ಮ ನಡೆ–ನುಡಿ, ಕಾರ್ಯ ಚಟುವಟಿಕೆಗಳಿಂದ ಜನಮನ ಸೂರೆಗೊಂಡಿದ್ದಾರೆ. ಮಕ್ಕಳಿಂದ ವೃದ್ಧರಾಧಿಯಾಗಿ ಎಲ್ಲರನ್ನೂ ಮಮತೆ ಪ್ರೀತಿ ಯಿಂದ ಹಸನ್ಮುಖರಾಗಿ ಮಾತ ನಾಡಿಸಿ ಆಶೀರ್ವದಿಸುತ್ತಾರೆ.

ಶ್ರೇಷ್ಠ ಗುರು ಪರಂಪರೆಯ ಕೀರ್ತಿಗೆ ಕಳಶಪ್ರಾಯದಂತಿರುವ ಅದ್ವೈತಮತದ ಸಂಸ್ಥಾಪಕರಾದ ಜಗದ್ಗುರು ಶ್ರೀ ಆದಿ



ಶಂಕರಾಚಾರ್ಯರು ದೈವಾಂಶ ಸಂಭೂತರು. ಇವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿರುವ ಶೃಂಗೇರಿ ದಕ್ಷಿಣಾಮ್ನಾಯ ಪೀಠದ ಜಗದ್ಗುರುಗಳಾದ ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳ ವರ್ಧಂತಿ ಮಹೋತ್ಸವದ ಸಂಭ್ರಮ ಶ್ರೀ ಪರಾಭವ ಸಂವತ್ಸರ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ ಷಷ್ಠೀ 24– 03– 2026ರ ಮಂಗಳವಾರ ಜರುಗುತ್ತಿದೆ.

ಅತ್ಯುನ್ನತ ಆಧ್ಯಾತ್ಮಿಕ ಶ್ರೇಣಿಯ ಈ ಕರುಣಾಳು ಋಷಿ ನಮ್ಮ ನಡುವೆಯೇ ಕೃಪೆಯ ಚಿಲುಮೆಯಾಗಿ ವಾಸಿಸುತ್ತಿರುವುದು ನಿಜಕ್ಕೂ ಒಂದು ದೊಡ್ಡ ಆಶೀರ್ವಾದ, ಅಲ್ಲಿ ಎಲ್ಲರೂ ತಮ್ಮ ಆತಂಕ ಮತ್ತು ದುಃಖವನ್ನು ನಿವಾರಿಸಿಕೊಳ್ಳಬಹುದು.

**ಜಯ ದೇವ ಜಯ ದೇವ ಜಯ**
**ಸದ್ಗುರುನಾಥ ಶ್ರೀ ಸದ್ಗುರುನಾಥ**
**ಶ್ರೀ ಭಾರತೀತೀರ್ಥ ಗುರು ಸಾರ್ವಭೌಮ**
**ಜಯ ದೇವ ಜಯ ದೇವ!!**

# ಮಹಾನ್ ಸಂಗೀತ ತಪಸ್ವಿ ಮುತ್ತುಸ್ವಾಮಿ ದೀಕ್ಷಿತರು



ತಿರು ಶ್ರೀಧರ



ಕರ್ನಾಟಕ ಸಂಗೀತದಲ್ಲಿ ಹಂಸಧ್ವನಿಯಲ್ಲಿರುವ ವಾತಾಪಿ ಗಣಪತಿಂ ಭಜೇ' ಕೃತಿಯನ್ನು ಅರಿಯದವರೇ ಇಲ್ಲ. ಅಂತಹ ಅಸಂಖ್ಯಾತ ಮಹಾನ್ ಕೃತಿಗಳ ಕರ್ತಾರರಾದ ಮುತ್ತುಸ್ವಾಮಿ ದೀಕ್ಷಿತರು ಜನಿಸಿದ ದಿನ ಮಾರ್ಚ್ 24, 1775.

ಮುತ್ತುಸ್ವಾಮಿ ದೀಕ್ಷಿತರು ಕರ್ನಾಟಕ ಸಂಗೀತದ ತ್ರಿಮೂರ್ತಿಗಳಲ್ಲಿ ಒಬ್ಬರು. ಇನ್ನಿಬ್ಬರು ತ್ಯಾಗರಾಜರು ಮತ್ತು ಶ್ಯಾಮಾ ಶಾಸ್ತ್ರಿಗಳು. ಬಹುತೇಕ ವಾಗ್ಗೇಯಕಾರರು ತೆಲುಗಿನಲ್ಲಿ ಹೆಚ್ಚು ಕೃತಿಗಳನ್ನು ರಚಿಸಿದ್ದರೆ ದೀಕ್ಷಿತರ ಕೃತಿಗಳೆಲ್ಲವೂ ಸಂಸ್ಕೃತದಲ್ಲಿ ರಚಿತವಾಗಿರುವುದು ಮಹತ್ವದ ವಿಚಾರವಾಗಿದೆ. ಗುರುಗುಹ' ಎಂಬ ಕಾವ್ಯನಾಮದ ಹಾಸುಹೊಕ್ಕು ದೀಕ್ಷಿತರ ಕೃತಿಗಳಲ್ಲಿ ಕಂಡುಬರುವುದು ಮತ್ತೊಂದು ಪ್ರಧಾನ ಅಂಶ.

ಮುತ್ತುಸ್ವಾಮಿ ದೀಕ್ಷಿತರ ಪೂರ್ವಜರು ತಮಿಳುನಾಡು ಆಂಧ್ರಪ್ರದೇಶಗಳ ಗಡಿ ಪ್ರದೇಶವಾದ ವಿರಿಂಚಿಪುರಂನಲ್ಲಿದ್ದವರು. ದೀಕ್ಷಿತರ ತಂದೆ ರಾಮಸ್ವಾಮಿ ದೀಕ್ಷಿತರೂ ಮಹಾನ್ ಮೇಧಾವಿ ಸಂಗೀತ ವಿದ್ವಾಂಸರು. ಇನ್ನೆರಡು ಸಂಗೀತ ತ್ರಿಮೂರ್ತಿಗಳಂತೆ ಮುತ್ತುಸ್ವಾಮಿ ದೀಕ್ಷಿತರು ಜನಿಸಿದ್ದೂ ತಮಿಳುನಾಡಿನ ತಿರುವಾರೂರಿನಲ್ಲಿ. ಇವರು ತಮ್ಮ ಜೀವನಕಾಲದಲ್ಲಿ ಹಲವಾರುಕಡೆ ಪ್ರಯಾಣಿಸಿ, ಹಲವೆಡೆ ವಾಸಿಸಿ, ಕೊನೆಗೆ ತಿರುನೆಲ್ವೇಲಿ ಬಳಿಯ ಎಟ್ಟಯಪುರಮ್ ಆಸ್ಥಾನದಲ್ಲಿ ಆಶ್ರಯ ಪಡೆದರು.

ದೀಕ್ಷಿತರ ಸಂಗೀತ ಶೈಲಿಯನ್ನು ನಾರಿಕೇಳಪಾಕಕ್ಕೆ ಹೋಲಿಸಲಾಗುತ್ತದೆ. ತೆಂಗಿನಕಾಯಿಯಲ್ಲಿ, ಹೇಗೆ ಹೊರಗೆ ಕಠಿಣವಾದ ಕರಟವಿದ್ದು ಒಳಗೆ ಸವಿಯಾದ ಎಳನೀರೂ, ರುಚಿಯಾದ ಕಾಯಿಯೂ ಇರುತ್ತದೋ ಅದೇ ರೀತಿ, ಮೇಲ್ನೋಟಕ್ಕೆ ಇವರ ಕೃತಿಗಳು ಕಠಿಣವಾಗಿ ತೋರಿದರೂ, ಅವುಗಳಲ್ಲಿರುವ ಸುಮಧುರ ಸಂಗೀತ ಸಾಹಿತ್ಯದ ಅಂಶಗಳಿಂದಾಗಿ, ಅವರ ಕೃತಿಗಳು ಶ್ರೇಷ್ಠ ವಾಗ್ಗೇಯಕಾರತ್ವಕ್ಕೆ ನಿದರ್ಶನವಾಗಿವೆ.

**250ನೇ ಜಯಂತಿ**

ಮುತ್ತುಸ್ವಾಮಿ ದೀಕ್ಷಿತರು ತಮ್ಮ 16ನೇ ವಯಸ್ಸಿಗೇ ವೇದಾಧ್ಯಯನ, ಕಾವ್ಯಾಲಂಕಾರ, ಜ್ಯೋತಿಷ್ಯ ಶಾಸ್ತ್ರ, ವೈದ್ಯ ಮತ್ತು ಮಂತ್ರಶಾಸ್ತ್ರಗಳಲ್ಲಿ ಪಾಂಡಿತ್ಯ ಪಡೆದಿದ್ದರು. ಇವರು ತಮ್ಮ ಗುರುಗಳ ಅಣತಿಯಂತೆ ಕಾಶಿಯ ಗಂಗೆಯಲ್ಲಿ ಮಿಂದು ಪ್ರಾರ್ಥಿಸಿದಾಗ ಇವರ ಬೊಗಸೆಯ ನೀರಿನಲ್ಲಿ ವೀಣೆಯ ದರ್ಶನವಾಯಿತಂತೆ. ನಿಷ್ಣಾತ ವೈಣಿಕರಾಗಿದ್ದ ದೀಕ್ಷಿತರು ಪಂಚದಶ ಗಮಕಗಳನ್ನೂ ಪ್ರಯೋಗಮಾಡಿ ತೋರಿಸಿದ್ದರು. ಇವರು ತಿರುತ್ತಣಿಯ ಷಣ್ಮುಖನ ಆರಾಧಕರೂ ಮತ್ತು ಸುಬ್ರಹ್ಮಣ್ಯನನ್ನು ಒಲಿಸಿಕೊಂಡವರೂ ಆಗಿದ್ದರು. ಸ್ವಾಮಿ ಇವರಿಗೆ ವಲ್ಲಿ–ದೇವಯಾನಿ ಸಮೇತ, ಮಯೂರ ವಾಹನನಾಗಿ ಸಾಕ್ಷಾತ್ಕಾರವಿತ್ತಿದ್ದರೆಂಬ ಪ್ರತೀತಿಯಿತ್ತು. ತಾವು ಈ 'ಗುರುಗುಹ'ನ ದಾಸ, ಅವನ ಪಾದ ಧೂಳಿಯಿಂದ ಅನುಗ್ರಹೀತರಾದ ಭಕ್ತಿಭಾವದಿಂದ ತಮ್ಮ ಮೊಟ್ಟ ಮೊದಲ ಕೃತಿ "ಶ್ರೀನಾಥಾದಿ ಗುರುಗುಹೋ ಜಯತಿ ಜಯತಿ.." ರಚನೆಯನ್ನು ಮಾಯಾ ಮಾಳವಗೌಳ ರಾಗದಲ್ಲಿ ರಚಿಸಿದರು. ಈ ಕೃತಿಯಲ್ಲಿ ಭಗವಂತನ ಚರಣ ಒಂದೇ ಎಲ್ಲದಕ್ಕೂ ಆಶ್ರಯ ಎಂಬ ಪುನೀತಭಾವದ ಅಭಿವ್ಯಕ್ತಿಯಿದೆ.

ದೀಕ್ಷಿತರು ಶ್ರೀವಿದ್ಯೆಯ ಉಪಾಸಕರೂ ಆಗಿದ್ದರು. ಅವರು ರಚಿಸಿದ ಕೃತಿಗಳಲ್ಲಿ ಅವರ ವಿದ್ವತ್ಪೂರ್ಣ ಪಾಂಡಿತ್ಯಗಳ ಅನುಭಾವ ಕಾಣಸಿಗುತ್ತದೆ. ಕೃತಿಗಳಲ್ಲಿ ಅವರು ಅದರ ರಚನೆಯ ರಾಗದ ಹೆಸರನ್ನು ಸಹಾ ಅತ್ಯಂತ ಅರ್ಥಪೂರ್ಣವಾಗಿ ಹೊಂದಿಸಿರುವುದೂ ಕೂಡ ಒಂದು ವಿಶೇಷತೆಯೇ.

ದೀಕ್ಷಿತರು ಅನೇಕ ಚಿಕ್ಕ ಚಿಕ್ಕ ಕೃತಿಗಳನ್ನು ಸಮಷ್ಠಿ ಚರಣಗಳನ್ನೊಳಗೊಂಡಂತೆ ಅದ್ಭುತವಾಗಿ ರಚಿಸಿದ್ದಾರೆ. ದೀಕ್ಷಿತರು ತಮ್ಮ ಕ್ಷೇತ್ರ ಕೃತಿಗಳಲ್ಲಿ ಆಯಾ ಕ್ಷೇತ್ರದ ವಿವರಣೆ, ವಿಶೇಷತೆಯನ್ನು ಅಳವಡಿಸಿದ್ದಾರೆ. ನವಗ್ರಹ ಕೃತಿಗಳಲ್ಲಿ ಗ್ರಹಗಳ ಪರಿಚಯ ಮತ್ತು ಸ್ಥಾನಗಳನ್ನು ವಿವರಿಸಿದ್ದಾರೆ. ಮೋಕ್ಷ ಸಾಧನೆಗೆ ಕರ್ಮ, ಭಕ್ತಿ ಮತ್ತು ಜ್ಞಾನ ಮಾರ್ಗಗಳನ್ನು ಅನುಸರಿಸಬೇಕೆಂಬುದನ್ನು ನಮಗೆ ತೋರಿಸಿಕೊಟ್ಟಿದ್ದಾರೆ.

ದೀಕ್ಷಿತರು ಶ್ರೀ ಶಂಕರಾಚಾರ್ಯರ ವೇದಾಂತ ಸೂತ್ರಗಳಿಗೆ ಅನುಗುಣವಾಗಿ ಇಡೀ ವಿಶ್ವವು ಮಾಯೆಯಿಂದ ಸೃಷ್ಟಿಸಲ್ಪಟ್ಟಿದೆ, ಪರಮಾತ್ಮನ ಸಾಕ್ಷಾತ್ಕಾರ ಆಂತರಿಕವಾಗಿ ನಮ್ಮಲ್ಲಿ ಉದಿಸಬೇಕಾದರೆ, ಮಾಯೆಯನ್ನು ಜಯಿಸಬೇಕೆಂದು ತಿಳಿಸುತ್ತಾರೆ. ದೀಕ್ಷಿತರು ಎಲ್ಲಾ 72 ಮೇಳಕರ್ತ ರಾಗಗಳಲ್ಲೂ ಕೃತಿರಚನೆ ಮಾಡಿದ್ದಾರೆಂಬುದು ಗಮನಾರ್ಹ ಸಂಗತಿ.

ದೀಕ್ಷಿತರು ತಮ್ಮ ಜೀವಿತದ ಕೊನೆಯ ಉಸಿರಿರುವವರೆಗೂ ಪರಮಾತ್ಮನ ಧ್ಯಾನದಲ್ಲಿ ನಿರತರಾಗಿದ್ದವರು. ಬಹಳ ಮೃದು ಹೃದಯಿಗಳೂ, ಕರುಣಾಮಯಿಯೂ ಆಗಿದ್ದರು. ತಮ್ಮ ಶಿಷ್ಯನೊಬ್ಬನ ಹೊಟ್ಟೆ ಶೂಲೆಯನ್ನು ಪರಿಹರಿಸುವ ಸಲುವಾಗಿ, ಅವನಿಗೆ ಗುರು ಮತ್ತು ಶನಿ ಗ್ರಹಗಳನ್ನು ಬಲ ಪಡಿಸುವುದಕ್ಕೋಸ್ಕರವೇ ಅವರು ಗುರು, ಶನಿ ಗ್ರಹಗಳನ್ನು ಕುರಿತು ಕೃತಿ ರಚಿಸಿದರಂತೆ. ಅನ್ಯಕುಲದವನಾದ ತಾನು ನವಗ್ರಹ ಶಾಂತಿ ಮಾಡುವುದಾದರೂ ಹೇಗೆ ಎಂದು ವ್ಯಥಿತನಾಗಿದ್ದ ಆತನಿಗೆ ಸ್ವಯಂ ಈ ಕೃತಿಗಳನ್ನು ಬೋಧಿಸಿದರಂತೆ. ಮಂತ್ರಗಳಿಂದ ಹೇಗೆ ನಾವು ದೇವತೆಗಳನ್ನು ಒಲಿಸಿಕೊಂಡು ಗ್ರಹಗಳ ಶಾಂತಿ ಮಾಡಿಕೊಳ್ಳಬಹುದೋ ಅಂತೆಯೇ ಅದನ್ನು ಸಂಗೀತ ಮುಖೇನ ಕೂಡಾ ಮಾಡಲು ಸಾಧ್ಯವೆಂಬುದನ್ನು ಶಿಷ್ಯನಿಗೆ ತಿಳಿಸಿಕೊಟ್ಟರಂತೆ. ತನ್ಮಯನಾಗಿ, ಭಕ್ತಿಯಿಂದ ಅಭ್ಯಸಿಸಿದ ಶಿಷ್ಯನ ಉದರ ಬೇನೆ ವಾಸಿಯಾಗಿತ್ತು. ಹೀಗೆ ದೀಕ್ಷಿತರು ಮಂತ್ರಾನುಷ್ಠಾನದ ಫಲವನ್ನು ನಾದೋಪಾಸನೆಯಿಂದ ಮಾಡಬಹುದೆಂದು ಜ್ಯೋತಿಷ್ಯ ಶಾಸ್ತ್ರದ ವಿಶೇಷಗಳನ್ನೆಲ್ಲಾ ಒಟ್ಟಾಗಿಸಿ, ನವಗ್ರಹ ಕೃತಿಗಳನ್ನು ರಚಿಸಿದರು. ಈ ಕೃತಿಗಳು ಸಂಗೀತ ಲೋಕದಲ್ಲೇ ಅತ್ಯಂತ ಶ್ರೇಷ್ಠ ಕೃತಿಗಳೆನಿಸಿವೆ.

ಶ್ರೀ ಚಕ್ರ ಉಪಾಸನೆಯಲ್ಲಿ ದೇವಿಯನ್ನು ನಾನಾ ವಿಧವಾಗಿ ಅತ್ಯಂತ ಭಕ್ತಿಯಿಂದ ಆರಾಧಿಸುವ ಅನುಷ್ಠಾನಗಳಿವೆ. ಇದರಲ್ಲಿ ಒಂಭತ್ತು ಆವರಣಗಳ ಪೂಜೆಯಿದೆ. ಪ್ರತಿಯೊಂದು ವೃತ್ತದಲ್ಲೂ ಪೂಜೆಯ ವಿಧಾನಕ್ಕೆ ಬೇರೆಯದೇ ಆದ ಹೆಸರೂ ಮತ್ತು ಶಕ್ತಿಯೂ ಇದೆ. ಇಲ್ಲಿರುವ ಒಂಭತ್ತು ಚಕ್ರಗಳನ್ನೂ ಪೂಜಿಸಿದ ನಂತರವೇ ದೇವಿಯ ಅನುಗ್ರಹ ನಮಗೆ ಲಭಿಸುವುದು. ಈ ನವ ಆವರಣಗಳಿಂದ ಕೂಡಿದ "ಶ್ರೀಚಕ್ರ"ದ ಉಪಾಸನೆಯೇ "ಶ್ರೀವಿದ್ಯೆ". ಆ ಲಲಿತಾಂಬಿಕೆ, ಜಗನ್ಮಾತೆ, ಪರಾಶಕ್ತಿ, ಬಿಂದು ಸ್ವರೂಪಳಾಗಿ ಶ್ರೀ ಚಕ್ರದಲ್ಲಿ ಕುಳಿತಿದ್ದಾಳೆ. ಸಾಟಿಯಿಲ್ಲದ ಅತ್ಯಂತ ಉತ್ಕೃಷ್ಟವಾದ ನವಾವರಣ ಕೃತಿಗಳಲ್ಲಿ ದೀಕ್ಷಿತರು ದೇವಿಯ ಆರಾಧನೆಯನ್ನೂ, ದೇವಿಯ ಸೌಂದರ್ಯವನ್ನೂ ಮನೋಹರವಾಗಿ ವರ್ಣಿಸಿದ್ದಾರೆ.

ಈ ಪರಿಯಾಗಿ ಮುತ್ತುಸ್ವಾಮಿ ದೀಕ್ಷಿತರು ಅಸಂಖ್ಯಾತ ಕೀರ್ತನೆಗಳನ್ನು ರಚಿಸಿದ್ದಾರೆ. ಇದುವರೆಗೆ ಗುರುತಿಸಲಾಗಿರುವ ಅವರ ಕೃತಿಗಳ ಸಂಖ್ಯೆಯೇ ಐದು ನೂರಕ್ಕೂ ಹೆಚ್ಚಿನದು. ಇಂತಹ ಮಹಾನ್ ತಪಸ್ವಿಯ ಕೃತಿಗಳನ್ನು ಕುರಿತು ನಮಗೆ ತಿಳಿದಿದೆ ಎಂದು ಹೇಳುವುದು ಬಾವಿಯಲ್ಲಿರುವ ಕಪ್ಪೆ ತಾನಿರುವುದೇ ಪ್ರಪಂಚ ಎಂದು ಬಣ್ಣಿಸಿದಂತಾದೀತು. ನಮ್ಮ ಕಿವಿಯ ಮೇಲೆ ಬಿದ್ದಿರುವ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳನ್ನು ಗುರುತಿಸುವುದಾದರೆ ಏಕದಂತಂ ಭಜೇಹಂ, ಸಿದ್ಧಿ ವಿನಾಯಕಂ ಅನಿಶಂ, ಶ್ರೀಮಹಾ ಗಣಪತಿರವತುಮಾಂ, ವಾತಾಪಿ ಗಣಪತಿಂ, ಸುಬ್ರಮಣ್ಯೇನ ರಕ್ಷಿತೋಹಂ, ಸ್ವಾಮಿನಾಥ ಪರಿಪಾಲಯಾ ಸುಮಾಂ, ಸೂರ್ಯ ಮೂರ್ತೆ ಸುಂದರ ಛಾಯಾಧಿಪತೆ, ಕಾಮಕೋಟಿ ಪೀಠವಾಸಿನಿ ಸೌಗಂಧಿಂ, ಕಂಜದಳಾಯತಾಕ್ಷಿ ಕಾಮಾಕ್ಷಿ, ಶಿವಕಾಮೇಶ್ವರಿಂ ಚಿಂತಯೇಹಂ, ಶ್ರೀವಿಶ್ವನಾಥಂ ಭಜೇಹಂ, ಮಾಮವ ಪಟ್ಟಾಭಿರಾಮ, ಶ್ರೀ ರಾಮಂ ರವಿ ಕುಲಾಬ್ಧಿ ಸೋಮಂ, ಶ್ರೀರಂಗಪುರವಿಹಾರ, ಶ್ರೀವರಲಕ್ಷ್ಮಿ ನಮಸ್ತುಭ್ಯಂ, ಶ್ರೀ ಸರಸ್ವತಿ ನಮಸ್ತೋತೆ, ವೀಣಾ ಪುಸ್ತಕಧಾರಿಣಿಂ ಆಶ್ರಯೇ, ಸರಸಿಜನಾಭ ಸೋದರಿ ಶಂಕರಿ ಮುಂತಾದವುಗಳನ್ನು ಭಕ್ತಿಯಿಂದ ನೆನೆಯುವಂತಾಗುತ್ತದೆ.


ಆಶ್ವೀಜ ಬಹುಳ ಚತುರ್ದಶಿ – ನರಕ ಚತುರ್ದಶಿ ದೀಪಾವಳಿ ಪರ್ವ ದಿನವಾದ್ದರಿಂದ ದೀಕ್ಷಿತರು (ಅಕ್ಟೋಬರ್ 21, 1835) ಆ ಜಗನ್ಮಾತೆಗೆ ವಿಶೇಷ ಪೂಜೆ ಸಲ್ಲಿಸಿ, ಸಾಯಂಕಾಲ ತಮ್ಮ ಎಲ್ಲಾ ಶಿಷ್ಯರನ್ನೂ ಕರೆದು ತಾವೇ ರಚಿಸಿದ ಪೂರ್ವಿ ಕಲ್ಯಾಣಿ ರಾಗದ "ಮೀನಾಕ್ಷಿ ಮುದಂ ದೇಹಿ" ಕೃತಿಯನ್ನು ವೀಣೆಯಲ್ಲಿ ನುಡಿಸುತ್ತಾ, ಎಲ್ಲರಿಗೂ ಹಾಡಲು ಹೇಳುತ್ತಾರೆ. "ಮೀನಲೋಚನಿ ಪಾಶಮೋಚನಿ" ಎಂಬ ಅನುಪಲ್ಲವಿಯ ಸಾಹಿತ್ಯವನ್ನು ಪದೇ ಪದೇ ಹಾಡಿಸುತ್ತಾ, ವೀಣೆ ಬದಿಗಿಟ್ಟು ತಂಬೂರಿಯ ನಾದ ಕೇಳುತ್ತಾ, ಆ ಜಗನ್ಮಾತೆಯ ಮಡಿಲಿನಲ್ಲಿ ಒರಗಿ ಬಿಡುತ್ತಾರೆ ತಾಯಿಯಲ್ಲಿ ಅವರ ಆತ್ಮ ಲೀನವಾಗಿ ಬಿಡುತ್ತದೆ. ನಮ್ಮ ಸಂಗೀತ ಪ್ರಪಂಚದಲ್ಲಿ ದೀಪಾವಳಿಯನ್ನು "ದೀಕ್ಷಿತರ ದಿನ" ಎಂದೇ ಆಚರಿಸಲಾಗುತ್ತಿದೆ.

ಈ ಮಹಾನ್ ಸಂಗೀತ ತಪಸ್ವಿಗಳ ನೆನಪಿಗೆ ನಮ್ಮ ಭಕ್ತಿಪೂರ್ಣನಮನ.

# ಕ್ಷಯರೋಗ ಮುಕ್ತಗೊಳಿಸುವತ್ತ ವಿಶ್ವದ ಹೆಜ್ಜೆ



ಮಾಧುರಿ ದೇಶಪಾಂಡೆ




ವಿಶ್ವ ಕ್ಷಯರೋಗ ದಿನವನ್ನು ಪ್ರತಿ ವರ್ಷ ಮಾರ್ಚ್ 24ರಂದು ಆಚರಿಸಲಾಗುತ್ತದೆ.

1882ರಲ್ಲಿ ವಿಜ್ಞಾನಿ ಡಾ. ರಾಬರ್ಟ್ ಕೋಚ್ ಅವರು ಕ್ಷಯರೋಗಕ್ಕೆ ಕಾರಣವಾಗುವ ಕೀಟಾಣುವನ್ನು ಕಂಡುಹಿಡಿದ ದಿನವೇ ಇದು. ಈ ಮಹತ್ವದ ಆವಿಷ್ಕಾರದಿಂದ ಕ್ಷಯರೋಗದ ಕಾರಣ, ನಿರ್ಣಯ ಮತ್ತು ಚಿಕಿತ್ಸೆಯ ಬಗ್ಗೆ ಸಮಗ್ರ ಅಧ್ಯಯನ ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ಮಾರ್ಚ್ 24ರಂದು ವಿಶ್ವ ಕ್ಷಯರೋಗ ದಿನವನ್ನು ಆಚರಿಸಲಾಗುತ್ತದೆ.

ಈ ದಿನದ ಆಚರಣೆಯ ಉದ್ದೇಶ ಕ್ಷಯರೋಗಮುಕ್ತ ವಿಶ್ವ ನಿರ್ಮಾಣ ಆಗಿದೆ. ಕೆಲವು ರೋಗಗಳು ಸಂಪೂರ್ಣ ನಿವಾರಣೆಯಾಗದಿದ್ದರೂ, ಕೆಲವು ರೋಗಗಳನ್ನು ನಿರ್ಮೂಲನೆ ಮಾಡುವ ಅವಕಾಶವಿದೆ. ಭಾರತವು ಪೋಲಿಯೊ ಮುಕ್ತ ರಾಷ್ಟ್ರವಾದಂತೆ, ವಿಶ್ವವೂ ಕ್ಷಯರೋಗಮುಕ್ತವಾಗಬೇಕು ಎಂಬ ಗುರಿಯೊಂದಿಗೆ ಈ ದಿನವನ್ನು ಆಚರಿಸಲಾಗುತ್ತಿದೆ.

- **2026ರ ವಿಶ್ವ ಕ್ಷಯರೋಗ ದಿನದ ಘೋಷವಾಕ್ಯ:** ಹೌದು, ನಾವು ಕ್ಷಯರೋಗವನ್ನು ಕೊನೆಗೊಳಿಸಬಹುದು ಪ್ರಾಥಮಿಕ ಆರೋಗ್ಯ ಸೇವೆಗಳು, ನವೀನ ತಂತ್ರಜ್ಞಾನಗಳು ಮತ್ತು ಬದ್ಧ ಸಮುದಾಯಗಳ ಸಹಭಾಗಿತ್ವದಿಂದ ಕ್ಷಯರೋಗವನ್ನು ಬಹು ಮಟ್ಟಿಗೆ ನಿಯಂತ್ರಿಸಲಾಗಿದೆ. ಈಗ ಅದನ್ನು ಸಂಪೂರ್ಣ ನಿರ್ಮೂಲನೆ ಮಾಡುವತ್ತ ಹೆಜ್ಜೆಗಳು ಇಡಲಾಗುತ್ತಿವೆ.
- **ಇತಿಹಾಸ ಮತ್ತು ಹಿನ್ನೆಲೆ:** ವಿಶ್ವ ಆರೋಗ್ಯ ಸಂಸ್ಥೆ 1983ರಲ್ಲಿ ಮೊದಲ ಬಾರಿಗೆ, ಡಾ. ರಾಬರ್ಟ್ ಕೋಚ್ ಅವರು ಕ್ಷಯಕಾರಕ ಕೀಟಾಣುವನ್ನು ಕಂಡುಹಿಡಿದ 100ನೇ ವರ್ಷದ ನೆನಪಿನಲ್ಲಿ ವಿಶ್ವ ಕ್ಷಯರೋಗ ದಿನವನ್ನು ಆಚರಿಸಲು ಪ್ರಾರಂಭಿಸಿತು. ಕ್ಷಯರೋಗಕ್ಕೆ ಕಾರಣವಾಗುವ ಬ್ಯಾಕ್ಟೀರಿಯಾವನ್ನು ಮೈಕೊಬ್ಯಾಕ್ಟೀರಿಯಮ್ ಟ್ಯೂಬರ್ಕುಲೋಸಿಸ್ ಎಂದು ಕರೆಯಲಾಗುತ್ತದೆ. ಈ ರೋಗವು ಮುಖ್ಯವಾಗಿ ಶ್ವಾಸಕೋಶಗಳನ್ನು ಹಾಳುಮಾಡುತ್ತದೆ. ಹಿಂದಿನ ಕಾಲದಲ್ಲಿ ಈ ರೋಗಕ್ಕೆ ಔಷಧಿ ಇರಲಿಲ್ಲ, ಆದ್ದರಿಂದ ರೋಗಿಗಳಿಗೆ ಬದುಕುಳಿಯುವ ಸಾಧ್ಯತೆ ಕಡಿಮೆ ಇತ್ತು. ಕ್ಷಯರೋಗವು ಅಂಟು ರೋಗವಾಗಿದ್ದು, ರೋಗಿಯು ಕೆಮ್ಮಿದಾಗ, ಸೀನಿದಾಗ ಅಥವಾ ಉಗುಳಿದಾಗ ಕೀಟಾಣುಗಳು ಗಾಳಿಯ ಮೂಲಕ ಹರಡುತ್ತವೆ. ಈ ಕಾರಣದಿಂದ ಹಿಂದಿನ ಕಾಲದಲ್ಲಿ ಜನರು ರೋಗಿಗಳಿಂದ ದೂರವಿರುವುದು ಸಾಮಾನ್ಯವಾಗಿತ್ತು.
- **ತಡೆ ಮತ್ತು ಚಿಕಿತ್ಸೆ:** ಬಿಸಿಜಿ ಲಸಿಕೆ ಕಂಡುಹಿಡಿದ ನಂತರ ಕ್ಷಯರೋಗದ ಪ್ರಮಾಣವು ಕ್ರಮೇಣ ಕಡಿಮೆಯಾಗಿದೆ. ಈ ಲಸಿಕೆಯನ್ನು ಸಾಮಾನ್ಯವಾಗಿ ಮಕ್ಕಳಿಗೆ ಜನನದ ನಂತರ ನೀಡಲಾಗುತ್ತದೆ, ಇದರಿಂದ ಆರಂಭದಲ್ಲೇ ರೋಗನಿರೋಧಕ ಶಕ್ತಿ ವೃದ್ಧಿಯಾಗುತ್ತದೆ.ಇಂದಿನ ದಿನಗಳಲ್ಲಿ ಕ್ಷಯರೋಗಕ್ಕೆ ಪರಿಣಾಮಕಾರಿ ಚಿಕಿತ್ಸೆ ಲಭ್ಯವಿದೆ. ಚಿಕಿತ್ಸೆ ಸಾಮಾನ್ಯವಾಗಿ ಕನಿಷ್ಠ 6 ತಿಂಗಳ ಕಾಲ ನಡೆಯುತ್ತದೆ. ಅನೇಕ ಆಂಟಿಬಯೋಟಿಕ್ ಔಷಧಿಗಳನ್ನು ನಿಯಮಿತವಾಗಿ ಸೇವಿಸಬೇಕು. ಎಲ್ಲ ವಯೋಮಾನದವರು ಸಮಯಕ್ಕೆ ಸರಿಯಾಗಿ ಚಿಕಿತ್ಸೆ ಪಡೆದುಕೊಂಡರೆ ಸಂಪೂರ್ಣ ಗುಣಮುಖರಾಗಬಹುದು.
- **ಚಿಕಿತ್ಸೆಯ ಅಡ್ಡಪರಿಣಾಮಗಳು:** ಚಿಕಿತ್ಸೆಯ ಸಂದರ್ಭದಲ್ಲಿ ಕೆಲವು ಅಡ್ಡಪರಿಣಾಮಗಳು ಕಾಣಿಸಬಹುದು. ವಾಕರಿಕೆ, ಹಸಿವಿನ ಕೊರತೆ, ಕೀಲು ನೋವು, ದೇಹದ ದ್ರವಗಳು (ಮೂತ್ರ, ಕಣ್ಣೀರು) ಕಿತ್ತಳೆ ಬಣ್ಣಕ್ಕೆ ತಿರುಗುವುದು (ರಿಫಾಂಪಿಸಿನ್ ಕಾರಣದಿಂದ ಹಾನಿಕಾರಕವಲ್ಲ).
- **ಗಂಭೀರ ಅಡ್ಡಪರಿಣಾಮಗಳು:** ಹೆಪಟೈಟಿಸ್ (ಯಕೃತ್ತಿನ ಹಾನಿ), ದೃಷ್ಟಿ ಬದಲಾವಣೆಗಳು, ನರಗಳ ಸಮಸ್ಯೆಗಳು. ಹೆಪಟೈಟಿಸ್ ಲಕ್ಷಣಗಳಲ್ಲಿ ಚರ್ಮ ಮತ್ತು ಕಣ್ಣುಗಳು ಹಳದಿ ಬಣ್ಣಕ್ಕೆ ತಿರುಗುವುದು (ಕಾಮಾಲೆ), ಗಾಢ ಮೂತ್ರ ಹಾಗೂ ಹೊಟ್ಟೆ ನೋವು ಕಾಣಿಸಬಹುದು. ಇಂತಹ ಲಕ್ಷಣಗಳು ಕಂಡುಬಂದರೆ ತಕ್ಷಣ ವೈದ್ಯಕೀಯ ಚಿಕಿತ್ಸೆ ಪಡೆಯಬೇಕು. ಎಥಾಂಬುಟಾಲ್ ಔಷಧಿಯ ಪರಿಣಾಮವಾಗಿ ಕೆಲವೊಮ್ಮೆ ದೃಷ್ಟಿ ಸಮಸ್ಯೆಗಳು, ಮಸುಕಾದ ದೃಷ್ಟಿ ಅಥವಾ ಕೆಂಪು–ಹಸಿರು ಬಣ್ಣ ಗುರುತಿಸುವ ಸಮಸ್ಯೆಗಳು ಉಂಟಾಗಬಹುದು. ಆದ್ದರಿಂದ ನಿಯಮಿತ ಕಣ್ಣಿನ ತಪಾಸಣೆ ಅಗತ್ಯವಾಗಿದೆ.

## ಭವಿಷ್ಯದ ಗುರಿ

ವಿಶ್ವ ಆರೋಗ್ಯ ಸಂಸ್ಥೆಯ ಗುರಿ 2035ರೊಳಗೆ ಕ್ಷಯರೋಗಮುಕ್ತ ವಿಶ್ವ ನಿರ್ಮಾಣ ಆಗಿದೆ. ಇತ್ತೀಚಿನ ವೈದ್ಯಕೀಯ ಪ್ರಗತಿಯಿಂದ ಕ್ಷಯರೋಗದ ಪ್ರಕರಣಗಳು ಕಡಿಮೆಯಾಗುತ್ತಿವೆ. ಭಾರತವು ಪೋಲಿಯೊ ಮುಕ್ತವಾಗಿದಂತೆ, ವಿಶ್ವವೂ ಕ್ಷಯರೋಗಮುಕ್ತವಾಗುವ ದಿಶೆಯಲ್ಲಿ ಮುಂದುವರಿಯುತ್ತಿದೆ.
ಸರಕಾರಗಳು ಮತ್ತು ಆರೋಗ್ಯ ಸಂಸ್ಥೆಗಳ ಕಾರ್ಯಕ್ರಮಗಳು ಯಶಸ್ವಿಯಾಗಲು ಸಾರ್ವಜನಿಕರ ಸಹಭಾಗಿತ್ವ ಅತ್ಯಂತ ಮುಖ್ಯವಾಗಿದೆ. ಆರೋಗ್ಯದ ಬಗ್ಗೆ ಜಾಗೃತಿ ಹಾಗೂ ಜವಾಬ್ದಾರಿತನದಿಂದ ನಾವು ರೋಗಮುಕ್ತ ಸಮಾಜವನ್ನು ನಿರ್ಮಿಸಬಹುದು. ಆಧುನಿಕ ವಿಜ್ಞಾನವು ಅನೇಕ ಹಳೆಯ ರೋಗಗಳಿಗೆ ಪರಿಹಾರ ಕಂಡುಹಿಡಿದಿದ್ದರೂ, ಹೊಸ ರೋಗಗಳು ಕಾಣಿಸಿಕೊಳ್ಳುತ್ತಿವೆ. ಆದ್ದರಿಂದ ಆರೋಗ್ಯಕರ ಜೀವನಶೈಲಿಯನ್ನು ಅಳವಡಿಸಿಕೊಂಡು, ರೋಗಗಳನ್ನು ತಡೆಗಟ್ಟುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,